ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday, 15th July 1972/Ashadha 24, 1894 (Saka Era).

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

Revised Budget Estimates for 1972-73—Demands for Grants
Demand Nos. 24, 16, 43, 44, 9, 11 and 14

† ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕೆಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಕೈಗಾರಿಕೆ ಶಾಖೆಯ ಬೇಡಿಕೆಗಳ ಬಗ್ಗೆ ನಿನ್ನೆ ನಡೆದ ಚರ್ಚೆಯಲ್ಲಿ ಭಾಗವಹಿಸಿದಂಥ ಮಾನ್ಯ ಸದಸ್ಯರುಗಳು ರಚನಾತ್ಮಕವಾದಂಥ ಹಲವಾರು ಸಲಹೆಗಳನ್ನು ಈ ಸದನದ ಮುಂದೆ ಮಂಡಿಸಿದ್ದಾರೆ. ಜೊತೆಗೆ ಕೈಗಾರಿಕೆಯ ಶಾಖೆಯಲ್ಲಿ ಏನೇನು ಸುಧಾರಣೆಗಳು ನಡೆಯಬೇಕು ಎನ್ನುವುದರ ಬಗ್ಗೆ ಹಲವು ಕಟುತರವಾದಂಥ ಟೀಕೆಗಳನ್ನೂ ಸಹ ಮಾಡಿದ್ದಾರೆ. ಆ ಸಲಹೆಗಳನ್ನೂ ಹಾಗೂ ಟೀಕೆಗಳನ್ನೂ ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಮೈಸೂರು ರಾಜ್ಯ ಒಂದು ಕಾಲದಲ್ಲಿ ನಮ್ಮ ದೇಶದಲ್ಲಿಯ ಕೈಗಾರಿಕೆಯ ಅಭಿವೃದ್ಧಿ ಕ್ಷೇತ್ರದಲ್ಲಿ ವಿಶಿಷ್ಟವಾದಂಥ ಸ್ಥಾನವನ್ನು ಗಳಿಸಿತ್ತು. ಮೈಸೂರಿಗೆ ಮಾದರೀ ಮೈಸೂರು ಎನ್ನುವ ಹೆಸರು ಬರಬೇಕಾದರೆ, ಭಾರತ ರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಏನೊಂದು ದೂರದೃಷ್ಟಿಯಿಂದ ಭವ್ಯವಾದಂಥ ಭದ್ರವಾದಥ ಅಡಿಪಾಯವನ್ನು ಹಾಕಿದರೆ ಆ ಅಡಿಪಾಯದ ಆಧಾರದ ಮೇಲೆ ಕೈಗಾರಿಕೆಗಳ ಅಭಿವೃದ್ಧಿ ನಡೆದು ಮೈಸೂರು ನಮ್ಮ ದೇಶದಲ್ಲಿ ಕೈಗಾರಿಕೆಯ ಭೂಪಟದಲ್ಲಿ ಒಂದು ಅಗ್ರ ಪ್ರಧಾನ ಸ್ಥಾನವನ್ನು ಪಡೆದಿತ್ತು. ಇದಕ್ಕೆ ಐತಿಹಾಸಿಕ ಕಾರಣಗಳಿವೆ. ರಾಜ ಮಹಾರಾಜರುಗಳು ಕೈಗಾರಿಕೆಗಳಿಗೆ ಕೊಟ್ಟಂಥ ಪ್ರೋತ್ಸಾಹದ ಜೊತೆಗೆ ಆಗಿದ್ದಂಥ ದಿವಾನರುಗಳು ಅಂದರೆ ಸರ್ ಮಿರ್ಜಾ ಇಸ್ಮೈಯಿಲ್ ಅವರು, ಶ್ರೀ ಶೇಷಾದ್ರಿ ಐಯ್ಯರ್ ಅವರು, ಶ್ರೀ ರಂಗಾಚಾರ್ಲು ಅವರು ಮುಂತಾದವರ ದೂರದೃಷ್ಟಿಯಿಂದ ಮತ್ತು ಅವರು ನಮ್ಮ ಮೈಸೂರಿನ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ಹೆಚ್ಚಿಗೆ ಕಾರ್ಯಕರ್ತರಾಗಿದ್ದುದರಿಂದ ಅವರನ್ನು ನಾವು ಇಂದು ಸ್ಮರಿಸಿಕೊಳ್ಳಬೇಕಾಗಿದೆ. ಅಂದು ಒಂದು ಕಾಲದಲ್ಲಿ ನಮ್ಮ ರಾಜ್ಯದ ಕೈಗಾರಿಕೆಗಳು ನಾಗಾಲೋಟದಲ್ಲಿ ನಡೆಯಿತು. ಅದೀಗ ಮಾನ್ಯ ಶ್ರೀ ನಾಗಣ್ಣನವರು ನಿನ್ನೆ ಹೇಳಿದಂತೆ ಕುಂಠಿತವಾಯಿತು. ಇದಕ್ಕೂ ಕೂಡ ನಾನಾ ಕಾರಣಗಳಿವೆ. 1950ನೇ ಇಸವಿಯಲ್ಲಿ ಹಾಗೂ 1960 ನೇ ಇಸವಿಯಲ್ಲಿ ನಮ್ಮ ಕೈಗಾರಿಕೆಯ ಬೆಳವಣಿಗೆಯ ಪ್ರಮಾಣ ಯಾವ ಪ್ರಮಾಣದಲ್ಲಿ ಯಾವ ಗಾತ್ರದಲ್ಲಿ, ಯಾವ ವೇಗದಲ್ಲಿ ಹೋಗಬೇಕಾಗಿತ್ತೋ ಆ ರೀತಿಯಲ್ಲಿ ಹೋಗುವುದಕ್ಕೆ ಕಾರಣಾಂತರಗಳಿಂದ ಸಾಧ್ಯವಾಗಲಿಲ್ಲ. ಇದಕ್ಕೆ ಪ್ರಧಾನ ಕಾರಣವೇನೆಂದರೆ, ನಮ್ಮ ರಾಜ್ಯದಲ್ಲಿ ಉಂಟಾದಂಥ ವಿದ್ಯುಚ್ಛಕ್ತಿಯ ಅಭಾವ. ಶರಾವತಿ ವಿದ್ಯುಚ್ಛಕ್ತಿ ನಮ್ಮ ಕೈಗಾರಿಕೆಗಳಿಗೆ ದೊರಕುವವರೆಗೆ ನಾವು ಕೈಗಾರಿಕೆ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡುವುದಕ್ಕೆ, ಅದನ್ನು ವಿಕಾಸ ಮಾಡುವುದಕ್ಕೆ, ಅತಿ ಪ್ರಾಮುಖ್ಯವಾಗಿ ಬೇಕಾದಂಥ ವಿದ್ಯುತ್ ಉತ್ಪಾದನೆ ಏನಿದೆಯೋ ಅದು ನಮ್ಮ ರಾಜ್ಯದಲ್ಲಿರಲಿಲ್ಲ. ಶರಾವತಿ ಏನೋ ಬಂತು. ಅದು ಹೇಗೆ ಬಂತು ಅಂದರೆ ಹಲವಾರು ಕೈಗಾರಿಕೆಗಳನ್ನು ಪ್ರಾರಂಭ

---

† Indicates that the remarks or speeches have not been revised by the member concerned.

(ಶ್ರೀ ಎಸ್. ಎಂ. ಕೃಷ್ಣ)

ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದುದರ ಕಾರಣ ಶರಾವತಿ ವಿದ್ಯುಚ್ಛಕ್ತಿ ಬಂತು. ಈಗ ಒಂದು ಅಭಿಪ್ರಾಯ ಏನೆಂದರೆ, ಮೈಸೂರು ರಾಜ್ಯ ವಿದ್ಯುಚ್ಛಕ್ತಿಯಲ್ಲಿ ಸರ್‌ಪ್ಲಸ್ ಸ್ಟೇಟ್ ಆಗಿದೆ ಇವತ್ತಿನ ಪರಿಸ್ಥಿತಿಯನ್ನು ಗಮನಿಸಿದರೆ ಬಹುಶಃ ನಾವು ವಿದ್ಯುಚ್ಛಕ್ತಿಯ ಕ್ಷೇತ್ರದಲ್ಲಿ ಅನಾಗರೀಕವಾದಂಥ ಸ್ಥಿತಿಯಲ್ಲಿದ್ದೇವೆ. ಆದರೆ ಇನ್ನು ಕೈಗಾರಿಕೆಗಳನ್ನು ಹೆಚ್ಚಿಗೆ ಬೆಳೆಸಬೇಕು ಎನ್ನುವ ಏನೊಂದು ಕಳಕಳಿಯನ್ನು ನಿನ್ನೆ ಮಾತನಾಡಿದಂಥ ಪ್ರತಿಯೊಬ್ಬ ಸದಸ್ಯರು ವ್ಯಕ್ತಪಡಿಸಿದ್ದರೋ ಅದರ ಬಗ್ಗೆ ಇವತ್ತು ಯಾರೂ ಆ ಒಂದು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಇದರ ಬಗ್ಗೆ ಅಷ್ಟೇ ಕಳಕಳಿಯನ್ನು ಅದು ಹೊಂದಿದೆ ಎಂದು ನಾನಾದರೂ ಕೂಡ ಭಾವನೆ ಮಾಡುತ್ತೇನೆ. 1973ರ ಕೊನೆ ಅಥವಾ 1974ರ ಮೊದಲ ಭಾಗದಲ್ಲಿ ಮತ್ತೆ ಇದೇ ವಿದ್ಯುಚ್ಛಕ್ತಿ ಪ್ರಾರಂಭವಾಗುತ್ತದೆಂಬುದನ್ನು ನಾವು ಕಂಡಿದ್ದೇವೆ. ನಾವು ಕಾಳೀ ನದಿಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡಿ, ಮಾನ್ಯ ಮುಖ್ಯಮಂತ್ರಿಗಳು, ಆರ್ಥಿಕ ಮಂತ್ರಿಗಳು ಕೇಂದ್ರ ಸರ್ಕಾರದ ಜೊತೆಯಲ್ಲಿ ಬಹಳ ಬುದ್ಧಿವಂತಿಕೆಯಿಂದ ಸಮಾಲೋಚನೆ ಮಾಡಿ, ಕಾಳೀ ನದಿಗೆ ಏನು ಆಗತ್ಯವಾದ ಆದ್ಯತೆಯನ್ನು ಕೊಡಬೇಕೋ ಅದನ್ನು ದೊರಕಿಸಿ ಕೊಡುವುದು ಕೈಗಾರಿಕೆಯ ಅಭಿವೃದ್ಧಿಯ ದೃಷ್ಟಿಯಿಂದ ಯಥೋಚಿತವಾದುದೆಂದು ನಾನಾದರೂ ಭಾವನೆ ಮಾಡುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಇದುವರೆಗೂ ಒಟ್ಟು ಕೈಗಾರಿಕೆಗಳಲ್ಲಿ ಖಾಸಗೀ ಹಾಗೂ ಸರ್ಕಾರಿ ಉದ್ಯಮಗಳಲ್ಲಿ ನಾವು ಹಾಕಿರತಕ್ಕ ಬಂಡವಾಳ ಸುಮಾರು 320 ಕೋಟಿ ರೂಪಾಯಿಗಳು. ಆದರೆ ಇದು ಏನೇನೂ ಸಾಕಾಗುತ್ತಾ ಇಲ್ಲವೆಂದು ನಾನು ಹೇಳುತ್ತೇನೆ. ಅದರ ಬಗ್ಗೆ ಎರಡು ಅಭಿಪ್ರಾಯಗಳಿವೆ. ಈಗ ನಮ್ಮ ಮುಂದೆ ಇರತಕ್ಕದ್ದು ಮುಂದಿನ 10 ವರ್ಷಗಳಲ್ಲಿ ಇದರ ಪ್ರಗತಿ ಎಷ್ಟೆಂಬುದು. 1970 ನೇ ವರ್ಷದಲ್ಲಿ ಕೈಗಾರಿಕೆಗಳ ಬಗ್ಗೆ ಏನು ಕನಸನ್ನು ನಾವು ಕಾಣುತ್ತಿದ್ದೇವೋ ಅದರ ಒಂದು ವಿಹಂಗಮ ದೃಷ್ಟಿಯಿಂದ ನಾವು ನಮ್ಮ ಕೈಗಾರಿಕೆಗಳನ್ನು ಸಮೀಕ್ಷೆ ಮಾಡಬೇಕೆಂದು ಸದಸ್ಯರ ಹಾಗೂ ಅಧ್ಯಕ್ಷರ ಅಪ್ಪಣೆಯನ್ನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. 1970 ನೇ ಇಸವಿ ಏನಿದೆ ಅದು ಕೈಗಾರಿಕೆಗಳ ಬೆಳವಣಿಗೆಗೆ ನಿಖರವಾದಂಥ ವಾತಾವರಣವನ್ನು ಸೃಷ್ಟಿ ಮಾಡತಕ್ಕ ವರ್ಷವೆಂದು ನಾನು ಭಾವನೆ ಮಾಡುತ್ತೇನೆ. ಕೈಗಾರಿಕೆಗಳನ್ನು ಬೆಳಸತಕ್ಕದ್ದು ಕೇವಲ ಸರ್ಕಾರದ ಜವಾಬ್ದಾರಿ ಎಂಬುದಾಗಿ ನಾವು ಕೂರತಕ್ಕ ಕಾಲ ಇದಲ್ಲ. ತಮಗೇ ಗೊತ್ತಿರುವ ಹಾಗೆ ಸರ್ಕಾರದ ಸಂಪನ್ಮೂಲಗಳು ಈ ದಿವಸ ಬಹಳಮಟ್ಟಿಗೆ ಮಿತಿಯಾಗಿದೆ. ಆದ್ದರಿಂದ ಹೊಸ ಕೈಗಾರಿಕೆಗಳು ಈ ರಾಜ್ಯದಲ್ಲಿ ಸ್ಥಾಪನೆಯಾಗಬೇಕಾದರೆ ಸರ್ಕಾರವೇ ಅದನ್ನು ನೇರವಾಗಿ ಸ್ಥಾಪನೆ ಮಾಡಬೇಕು ಎನ್ನುವ ಆಕಾಂಕ್ಷೆ ಇದ್ದರೂ, ಇಚ್ಛೆ ಇದ್ದರೂ ಅದನ್ನು ಆಗು ಮಾಡುವುದಕ್ಕೆ ಸರ್ಕಾರದಲ್ಲಿ ಹಣಕಾಸಿನ ಕೊರತೆಯಿಂದ ಸಾಧ್ಯವಾಗುವುದಿಲ್ಲ. ಈ ಸಮಯದಲ್ಲಿ ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್ ಅವರು ಈ ಸಭೆಯಲ್ಲಿ ಐದು ಸೂತ್ರಗಳನ್ನು ಮಂಡಿಸಿದರು. ಅವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ದೊಡ್ಡ ದೊಡ್ಡ ಬಂಡವಾಳಷಾಹಿಗಳಿಗೆ, ಯಾರು ಮನಾಪಲಿ ಮಾಡಿಕೊಂಡಿದ್ದಾರೋ ಅವರಿಗೆ ಇನ್ನು ಮುಂದೆ ಉತ್ತೇಜನವನ್ನು ಕೊಡುವುದು ಸಾಧುವಾದುದಲ್ಲವೆಂಬ ತತ್ವವನ್ನು ನಾನು ಹಿಂದಿನಿಂದಲೂ ಒಪ್ಪಿಕೊಂಡಿರುವ ಮನುಷ್ಯ. ಆದರೆ ನಮ್ಮ ದೇಶದ ಸರ್ಕಾರೀ ಕ್ಷೇತ್ರಕ್ಕೆ ನಮ್ಮ ಕೈಗಾರಿಕೆಯ ಕ್ಷೇತ್ರದಲ್ಲಿ ಪ್ರಥಮ ಸ್ಥಾನ ಸಿಗಬೇಕು. ಡಾಮಿನೆಂಟ್ ಪೊಜಿಷನ್ ಸಿಗಬೇಕು. ನಮ್ಮ ದೇಶದ ಆರ್ಥಿಕ ಧೋರಣೆಗಳನ್ನು ಮತ್ತು ತತ್ವಗಳನ್ನು ಸರಿಯಾದಂಥ ರೀತಿಯಲ್ಲಿ ನಾವು ಪ್ರೊಜೆಕ್ಟ್ ಮಾಡಬೇಕಾದರೆ ನಮ್ಮ ದೇಶದಲ್ಲಿರತಕ್ಕ ಸರ್ಕಾರೀ ಉದ್ಯಮಗಳಿಗೆ ನಾವು ಆಗತ್ಯವಾದ ಮನ್ನಣೆಯನ್ನು ಕೊಡಬೇಕು, ಆದ್ಯತೆಯನ್ನು ಕೊಡಬೇಕು. ಅಂತಹ ತತ್ವಕ್ಕೆ ಈ ಸರ್ಕಾರ ಬದ್ಧವಾಗಿದೆ ಎನ್ನುವುದನ್ನು ನಾನು ಪುನಃ ಪ್ರತಿಪಾದನೆ ಮಾಡಲು ಇಚ್ಛೆಪಡುತ್ತೇನೆ. ಹಾಗೆಯೇ ಟೈರ್ಸ್ ಪ್ರಾಜೆಕ್ಟ್ ಬಗ್ಗೆ ಸೋಷಿಯಲಿಸ್ಟ್ ರಾಷ್ಟ್ರಗಳೊಡನೆ ಕೊಲ್ಯಾಬೋರೇಷನ್ ಅಗ್ರಿಮೆಂಟ್ ಮಾಡಿಕೊಳ್ಳಬೇಕೆಂದು ಶ್ರೀ ಎಂ. ಎಸ್. ಕೃಷ್ಣನ್‌ರವರು ಹೇಳಿದರು. ನಾನೂ ಆ ತತ್ವವನ್ನು ಒಪ್ಪಿಕೊಳ್ಳುತ್ತೇನೆ. ಇದುವರೆಗೆ ಅಮೇರಿಕ, ಇಂಗ್ಲೆಂಡ್ ಮುಂತಾದ ರಾಷ್ಟ್ರಗಳ ಕಡೆ ನೋಡುತ್ತಿದ್ದೇವೆ. ಈಗ ಹಂಗೇರಿ, ಜೆಕೋಸ್ಲೋವೇಕಿಯ, ರಷ್ಯ ಮುಂತಾದ ರಾಷ್ಟ್ರಗಳ ಕಡೆ ನೋಡುತ್ತಿದ್ದೇವೆ, ಮೈಸೂರಿನಲ್ಲಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಒಂದು ಟೈರ್ ಫ್ಯಾಕ್ಟರಿ ಪ್ರಾರಂಭಿಸಬೇಕೆಂದಿದೆ. ಅದಕ್ಕೆ ಖಾಸಗಿ ಬಂಡವಾಳ ಹಾಕಬೇಕಾಗಿದೆ. ಅದಕ್ಕೆ ಜೆಕೋಸ್ಲೋವೇಕಿಯಾದ ಕೊಲ್ಯಾಬೊರೇಷನ್ ಇದೆ. ಶ್ರೀ ಹನುಮೇಗೌಡರು ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ವಿಚಾರ ಹೇಳಿದರು. ಹಂಗೇರಿಯ ಜೊತೆಗೆ ಅದಕ್ಕೆ ಸಂಬಂಧಪಟ್ಟಂತೆ ಕೊಲ್ಯಾಬೊರೇಷನ್ ಮಾಡಿಕೊಳ್ಳಲು ಪ್ರಯತ್ನ ನಡೆದು ಹಾಕಿದ ಷರತ್ತುಗಳು ಕೇಂದ್ರ ಸರ್ಕಾರಕ್ಕೆ ಅನುಕೂಲಕರವಾಗಿ ಕಾಣದೇ ಹೋದುದರಿಂದ ಭಿನ್ನಾಭಿಪ್ರಾಯ ಬಂತು. ಹಾಗೆಯೇ ಮುಂದಿನ ಐದು ವರ್ಷಗಳಲ್ಲಿ ನಾನಾ ಉದ್ಯಮಗಳನ್ನು ಪ್ರಾರಂಭಿಸಿ ನಡೆಸಬೇಕೆಂಬ ಆಸೆಯನ್ನಿಟ್ಟುಕೊಂಡಿದ್ದೇವೆ.

Sri M. S. KRISHNAN (Malleswaram).—I request the Hon'ble Minister to yield for a moment. I am not referring to socialist countries. We have letters of intent for 34 industries. What has happened previously is, licences have been got by the Mysore Government and Government started industries. Those industries have not been running on profit, and then they have been handed over either to the private sector or this Government has requested the Central Government to take them over. We are worried as to what will happen if such a policy is followed. What does the Hon'ble Minister say about that ?

ಶ್ರೀ ಎಸ್. ಎಂ. ಕೃಷ್ಣ.—ನಾನು ಅದರ ಬಗ್ಗೆ ಸ್ಪಷ್ಟಮಾಡಿದ್ದೇನೆ. ಬಹಳ ವಿವರಗಳ ಬಗ್ಗೆ ನಾನು ಈಗ ಹೋಗಲು ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಪಾಲಿಸಿ ಪ್ರಶ್ನೆ ?

ಶ್ರೀ ಎಸ್. ಎಂ. ಕೃಷ್ಣ.—ಅದರ ವಿಚಾರದಲ್ಲಿ ನಮ್ಮ ನಿಮ್ಮಲ್ಲಿ ಭಿನ್ನಾಭಿಪ್ರಾಯ ಇಲ್ಲ. ಇಂಪ್ಲಿಮೆಂಟ್ ಮಾಡುವಾಗ ಅಲ್ಪಸ್ವಲ್ಪ ಭಿನ್ನಾಭಿಪ್ರಾಯ ಬರಲು ಅವಕಾಶವಿದೆ. ಆದರೆ ನಾವು ಹಾಕಿರುವ ಚೌಕಟ್ಟಿನಲ್ಲಿ ಭಿನ್ನಾಭಿಪ್ರಾಯ ಬಗೆಹರಿಸಲು ಸಾಧ್ಯವಿದೆ. ಈಗ ನನ್ನ ಕಲ್ಪನೆ ಪ್ರಕಾರ ಮುಂದಿನ 10 ವರ್ಷಗಳಲ್ಲಿ ನಮ್ಮ ಅಭಿವೃದ್ಧಿ ಕಾರ್ಪೊರೇಷನ್ ಸಕ್ರಿಯ ಪಾತ್ರ ವಹಿಸಿ ಕೆಲಸಮಾಡುವುದು, ಸುಮಾರು 200 ಕೋಟಿ ರೂಪಾಯಿಗಳವರೆಗೆ ಕಾರ್ಯಕ್ರಮ ಹಾಕಿದೆ. ಸಣ್ಣ ಉದ್ಯಮಗಳ ಕ್ಷೇತ್ರದಲ್ಲಿ ಸುಮಾರು 50 ಕೋಟಿ ರೂಪಾಯಿ, ಈಗಿರತಕ್ಕ ಕೈಗಾರಿಕೆಗಳೇನಿವೆ ಅವುಗಳನ್ನು ಅಭಿವೃದ್ಧಿಪಡಿಸಲು ಸುಮಾರು 30 ಕೋಟಿ ರೂಪಾಯಿ ವಿನಿಯೋಗಿಸಬೇಕೆಂಬ ಅಭಿಪ್ರಾಯವಿದೆ. ಖಾಸಗಿ ಬಂಡವಾಳ ಸುಮಾರು 200 ಕೋಟಿ ರೂಪಾಯಿ ಬರಬಹುದು ಎಂಬ ನಿರೀಕ್ಷೆಯಿದೆ. ಒಟ್ಟು 10 ವರ್ಷಗಳಲ್ಲಿ ಈ ರಾಜ್ಯದಲ್ಲಿ 500 ಕೋಟಿ ರೂಪಾಯಿಗಳ ಕೈಗಾರಿಕಾ ಚಟುವಟಿಕೆ ನಡೆಯಬೇಕೆಂಬ ಗುರಿಯಿದೆ. ಇದರ ಜೊತೆಗೆ ಕೇಂದ್ರ ಸರ್ಕಾರ ಮೈಸೂರು ರಾಜ್ಯದಲ್ಲಿ ಏನು ಯೋಜನೆ ಕೈಕೊಳ್ಳುವುದು ಎಂಬ ಸಮೀಕ್ಷೆ ನಡೆಸುವುದು ಬಹಳ ಅವಶ್ಯಕವಾಗಿದೆ. ಬಹುಶಃ ಮೈಸೂರು ರಾಜ್ಯದ ಕೈಗಾರಿಕೆಯ ಇತಿಹಾಸವನ್ನೇ ಬದಲಾವಣೆ ಮಾಡುವ ಒಂದು ಮಹತ್ಕಾರ್ಯ ಎಂದರೆ ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆ. ಈ ಕಾರ್ಖಾನೆಯ ಬಗ್ಗೆ ಇದ್ದಂಥ ಅಲ್ಪಸ್ವಲ್ಪ ಒಡಕಿನ ಶಬ್ದಗಳು ಮಾಯವಾಗಿರುವುದು ಈ ಸಭೆಯ ಎಲ್ಲ ಸದಸ್ಯರಿಗೂ ಸಮಾಧಾನ ತಂದಿರುವ ವಿಚಾರ. ಇದಕ್ಕಾಗಿ ಪ್ರಧಾನಿಯವರು ಮತ್ತು ಉಕ್ಕಿನ ಇಲಾಖೆಯ ಮಂತ್ರಿಗಳಾದ ಶ್ರೀ ಮೋಹನ ಕುಮಾರ ಮಂಗಳಂರವರು ಈ ಸಭೆಯ ಮತ್ತು ಸರ್ಕಾರದ ಅಭಿನಂದನೆಗೆ ಪಾತ್ರರಾಗಿದ್ದಾರೆ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಇದು ಬಹಳ ಅಗತ್ಯವಾಗಿದೆ. ಸುಮಾರು 750 ಕೋಟಿ ರೂಪಾಯಿಗಳ ಬಂಡವಾಳವನ್ನು ಕೇಂದ್ರ ಸರ್ಕಾರದವರು ಈ ವಿಜಯನಗರದ ಉಕ್ಕಿನ ಕಾರ್ಖಾನೆಯ ಮೇಲೆ ಹಾಕುವರು. ಇದರ ಬಗ್ಗೆ ಸ್ವಲ್ಪ ಯೋಚನೆಮಾಡಬೇಕು. ನಮ್ಮ ಮೈಸೂರು ರಾಜ್ಯ ಹುಟ್ಟಿದಂದಿನಿಂದ ಇವತ್ತಿನವರೆಗೆ ಕೇವಲ 320 ಕೋಟಿ ರೂಪಾಯಿಗಳ ಬಂಡವಾಳ ಹಾಕಿ ಕೈಗಾರಿಕೆಗಳ ಚಟುವಟಿಕೆ ಆರಂಭಿಸಿರುವಾಗ ಒಂದೇ ಒಂದು ಉಕ್ಕಿನ ಕಾರ್ಖಾನೆಗೆ ಸುಮಾರು 750 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕುತ್ತಿರುವುದು ಒಂದು ಮಹತ್ ಕಾರ್ಯ ಎಂಬುದನ್ನು ಯೋಚನೆಮಾಡಬೇಕು, ಇದನ್ನು ಕೇಂದ್ರ ಸರ್ಕಾರದವರೇ ಮಾಡುವರು. ಯಾವಾಗ ಇಂಥ ಒಂದು ಮಹಾ ಉಕ್ಕಿನ ಕಾರಾಗಾರ ಬರುವುದೋ ಆಗ ಅದರ ಜೊತೆಗೆ ನೂರಾರು ಸಹಸ್ರಾರು ಸಣ್ಣ ಉದ್ಯಮಗಳು ಅದರ ಸುತ್ತುಮುತ್ತ ಹರಡಲು ಅವಕಾಶವಾಗುವುದು. ಈಗಾಗಲೇ ವಿಜಯನಗರದ ಉಕ್ಕಿನ ಕಾರ್ಖಾನೆಯ ಬಗ್ಗೆ ರಾಜ್ಯ ಸರ್ಕಾರ ವ್ಯವಸ್ಥಿತವಾದ ಕಾರ್ಯಕ್ರಮ ತೆಗೆದುಕೊಂಡಿದೆ. ಇದಕ್ಕೆ 10 ಸಾವಿರ ಎಕರೆ ಪ್ರದೇಶ ಬೇಕು ಎಂಬುದಾಗಿ ಮೊದಲೇ ಕೇಂದ್ರ ಸರ್ಕಾರದವರು ನಮ್ಮನ್ನು ಕೇಳಿದರು. ಆದರೆ ಆ 10 ಸಾವಿರ ಎಕರೆ ಪೂರ್ತಿ ಇಂದು ಬೇಕಾಗಿಲ್ಲ, ಈಗ 6 ಸಾವಿರ ಎಕರೆ ಸಾಕು ಎಂದು ಕೇಂದ್ರ ಸರ್ಕಾರದವರು ತಿಳಿಸಿದ್ದಾರೆ. ಈಗಾಗಲೇ ರಾಜ್ಯ ಸರ್ಕಾರ 6 ಸಾವಿರ ಎಕರೆಯನ್ನು ಅಕ್ವೈರ್ ಮಾಡಿ ಅದರ ಬೆಳವಣಿಗೆಗೆ ಕಾರ್ಯಕ್ರಮ ರೂಪಿಸಲಾಗಿದೆ. ಮತ್ತು ರಾಜ್ಯ ಸರ್ಕಾರದ ಲೈಸಾನ್ ಆಫೀಸರನ್ನು ನೇಮಕ ಮಾಡಲಾಗಿದೆ. ಆ ಏರಿಯಾ ಡೆವಲಪ್ ಮಾಡಲು ಡೆವಲಪ್‌ಮೆಂಟ್ ಬೋರ್ಡಿಗೆ ತಿಳಿಸಲಾಗಿದೆ. ಈ ಕೈಗಾರಿಕೆ ಶೀಘ್ರದಲ್ಲಿ ಕಾರ್ಯ ಪ್ರಾರಂಭಿಸಲು ಏನು ಅನುಕೂಲ, ವ್ಯವಸ್ಥೆ ಮಾಡಬೇಕು, ಸಹಾಯ ಸಹಕಾರವೇನು ನೀಡಬೇಕು ಎಂದು ನೋಡಿ ಅದೆಲ್ಲವನ್ನು ಮಾಡಲು ಉನ್ನತ ಅಧಿಕಾರಿಗಳಿಗೆ ತಿಳಿಸಿ ನಮ್ಮ ಇಲಾಖೆ ಕಾರ್ಯಕ್ರಮ ತೆಗೆದುಕೊಂಡಿದೆ ಎಂದು ಈ ಸಭೆಗೆ ತಿಳಿಸುತ್ತೇನೆ.

(ಶ್ರೀ ಎಸ್. ಎಂ. ಕೃಷ್ಣ)

ಜೊತೆಗೆ ಈ ವಿಜಯನಗರದ ಉಕ್ಕಿನ ಕಾರ್ಖಾನೆ ಬಗ್ಗೆ ಶ್ರೀವರ್ಮಾ ಆರ್ಮುಗಂರವರು ಕೆಲವು ವಿಚಾರ ಹೇಳಿದರು. ಸೇಲಂನಲ್ಲಿ ಸ್ಥಾಪಿಸುವ ಕಾರ್ಖಾನೆಗೆ ಬೇಕಾದ್ದನ್ನು ತಯಾರಿಸಲು ಹೆಚ್ಚು ಅವಕಾಶವಿದೆ, ಇಲ್ಲಿ ಏನಾಗುವುದೋ ಎಂದು ಅನುಮಾನ ವ್ಯಕ್ತಮಾಡಿದ್ದರು. ಉಕ್ಕಿನ ಕಾರ್ಖಾನೆ ಎಲ್ಲಿ ಸ್ಥಾಪಿಸಲ್ಪಡಬೇಕು, ಏನು ಕೆಲಸ ಅಲ್ಲಿ ಆಗಬೇಕು ಎಂದು ತೀರ್ಮಾನ ಮಾಡುವವರು ಕೇಂದ್ರ ಸರಕಾರದವರು. ಅವರು ಸಮಗ್ರ ದೇಶದ ದೃಷ್ಟಿಯಿಂದ ಯಾವ ಯಾವ ಕಾರ್ಖಾನೆಯಲ್ಲೇನು ಮಾಡಬೇಕೆಂಬುದನ್ನು ತೀರ್ಮಾನ ಮಾಡುವರು ನಮ್ಮ ಉಕ್ಕಿನ ಕಾರ್ಖಾನೆಗೂ ಸೇಲಂ ಕಾರ್ಖಾನೆಗೂ ಹೋಲಿಕೆ ಮಾಡಿ ನೋಡಿದರೆ ನಮ್ಮದಕ್ಕೆ ಹೆಚ್ಚು ಅವಕಾಶವಿದೆ. ಇದಕ್ಕೆ ಈಗ ಹಾಕುವುದು 350 ಅಥವಾ 400 ಕೋಟಿ ರೂಪಾಯಿ. ಯೋಜನೆಯ ಅಂದಾಜು 700 ಕೋಟಿ ರೂಪಾಯಿ. ಆದುದರಿಂದ ನಮ್ಮ ಕಾರ್ಖಾನೆಯಲ್ಲಿ ಎಂಥ ಕೆಲಸ ಮಾಡಲು ಅವಕಾಶವಿದೆ ಅದರ ಬಗ್ಗೆ ಒತ್ತಾಯಮಾಡಬಹುದು. ಈಗ ಇರುವಂತೆ ಮುಂದುವರೆಯಬೇಕು ಎಂದು ನಿವೇದನೆ ಮಾಡುತ್ತೇನೆ. ಎರಡನೆಯದಾಗಿ ಕೇಂದ್ರ ಸರಕಾರದವರು ಕುದುರೆಮುಖ ಐರನ್ ಓರ್ ಪ್ರಾಜೆಕ್ಟ್‌ಗೆ ಸುಮಾರು 200 ಕೋಟಿ ರೂಪಾಯಿಗಳ ಒಂದು ಮಹಾ ಯೋಜನೆ ಮಾಡಿದ್ದಾರೆ. ಕಳೆದ ಸಾರಿ ದೆಹಲಿಗೆ ಹೋಗಿದ್ದಾಗ ಶ್ರೀ ಮೋಹನ ಕುಮಾರಮಂಗಳಂ ರವರಿಗೆ ಇದರ ಬಗ್ಗೆ ಹೇಳಿದೆ, ಮುಖ್ಯಮಂತ್ರಿಗಳು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ತತ್ವಶಃ ಈ ಕುದುರೆ ಮುಖ ಪ್ರಾಜೆಕ್ಟನ್ನು ಒಪ್ಪಿದ್ದಾರೆ. ಕೇಂದ್ರ ಸರಕಾರದವರು ಇಂದು ಸರಿದೂಗಿಸುವುದಕ್ಕೆ ಪ್ರಯತ್ನಮಾಡಿದ್ದಾರೆ. ಈಗ ವಿಜಯನಗರ ಉಕ್ಕಿನ ಕಾರ್ಖಾನೆ, ಮಂಗಳೂರು ಕಾರ್ಖಾನೆ ಮತ್ತು ಕುದುರೆಮುಖದ ಪ್ರಾಜೆಕ್ಟ್ ಈ ಮೂರಕ್ಕೆ ಮನ್ನಣೆ ಇದೆ. ಮಂಗಳೂರು ಫರ್ಟಿಲೈಜರ್ ಪ್ರಾಜೆಕ್ಟ್‌ಗೆ ಕೊಡುವ ನೂರು ಮೈಲಿ ಕ್ಷೇತ್ರದಲ್ಲಿ ಪರಿಶುದ್ಧವಾದ ಕೈಗಾರಿಕಾ ಚಟುವಟಿಕೆ ಪ್ರಾರಂಭವಾಗುವುದು. ಅದು ಆ ಪ್ರದೇಶವನ್ನು ಸರ್ವತೋಮುಖವಾಗಿ ಅಭಿವೃದ್ಧಿ ಪಡಿಸಲು ಅವಕಾಶ ಮಾಡಿ ಕೊಡುವುದು. ಆದುದರಿಂದ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಬಂಡವಾಳ ಹಾಕಿ ಕೈಗಾರಿಕೆಗಳನ್ನು ಬೆಳೆಸಲಾಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಹೆಚ್ಚು ಹೊಣೆ ಕೇಂದ್ರ ಸರಕಾರದಮೇಲಿದೆ. ದೋಣಿಮಲೈ ಐರನ್ ಓರ್ ಪ್ರಾಜೆಕ್ಟಿದೆ. ಮೈಸೂರು ರಾಜ್ಯದಲ್ಲಿ ಸಿಕ್ಕುವ ಉತ್ಕೃಷ್ಟವಾದ ಐರನ್ ಓರ್ ಏನಿದೆ ಅದನ್ನು ನಾವು ಈ ದಿವಸ ಬಿಕರಿಮಾಡುವುದು ಬುದ್ಧಿವಂತಿಕೆಯ ಕೆಲಸವಾಗಿದೆ. ಈಗ ಪ್ರಪಂಚದಲ್ಲಿ ತೀವ್ರವಾದಂಥ ಪೈಪೋಟಿ ಪ್ರಾರಂಭವಾಗಿದೆ. ಇಂಡಿಯಾ ದೇಶದ ಕಬ್ಬಿಣದ ಅದುರಿಗೆ ಆಸ್ಟ್ರೇಲಿಯಾ ದೇಶದ ಕಬ್ಬಿಣದ ಅದುರಿನಿಂದ ಪ್ರಚಂಡವಾದ ಪೈಪೋಟಿ ನಡೆಯುತ್ತಾ ಇದೆ. ಈ ಪೈಪೋಟಿ ಇನ್ನೂ ಹೆಚ್ಚಾಗುವುದಕ್ಕೆ ಮೊದಲೇ ನಮ್ಮಲ್ಲಿರುವ ಕಬ್ಬಿಣದ ಓರನ್ನು ಯಾರೇ ಕೊಂಡುಕೊಳ್ಳುವುದಕ್ಕೆ ಬರಲಿ ಈಗ ಜಪಾನಿಯವರು ಬಂದಿದ್ದಾರೆ. ಇನ್ನು ಮುಂದೆ ಯಾವುದೇ ದೇಶ ಬರಲಿ, ಯಾವುದೇ ರಾಷ್ಟ್ರ ಬರಲಿ, ನಮ್ಮ ಕಬ್ಬಿಣದ ಅದುರನ್ನು ನಾವು ಯಾರಿಗೆ ಬೇಕಾದರೂ ಮಾರುತ್ತೇವೆ. ಆದುದರಿಂದ ಈ ಕಬ್ಬಿಣದ ಅದುರಿನ ಯೋಜನೆ ಏನು ಇದೆ, ಅದು ಇನ್ನೂ ಕ್ಷಿಪ್ರದಲ್ಲಿ, ಹೆಚ್ಚಿನ ತೀವ್ರಗತಿಯಲ್ಲಿ ಮುಂದೆ ಹೋಗಬೇಕು ಎನ್ನತಕ್ಕಂಥಾದ್ದು ನಮ್ಮ ಆಸೆ. ಅದಕ್ಕೆ ಒಂದೇ ಒಂದು ವಿಘ್ನ ಏನೆಂದರೆ...

9.30 A.M.

ಶ್ರೀ ಎಂ. ಎಸ್. ಕೃಷ್ಣನ್.—ಕುದುರೆಮುಖ ಐರನ್ ಓರ್ ಪ್ರಾಜೆಕ್ಟನ್ನು ದೊಡ್ಡ ಪ್ರಾಜೆಕ್ಟ್‌ನ್ನಾಗಿ ಮಾಡಬೇಕೆಂದು ಹೇಳಿದುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಬೇರೆ ರಾಷ್ಟ್ರಗಳು ನಮ್ಮ ಕಬ್ಬಿಣದ ಅದುರುಗಳನ್ನು ಕೊಂಡುಕೊಳ್ಳುವುದಕ್ಕೆ ತಯಾರು ಆಗಿದ್ದರೆ ಆಗಬಹುದು. ಬರೀ ಜಪಾನಿಯವರ ಜೊತೆಗೆ ಅಗ್ರಿಮೆಂಟ್ ಮಾಡಿಕೊಂಡು ಅದಿರನ್ನು ಪೈಪು ಮೂಲಕ ಟ್ಯಾಂಕರ್‌ಗೆ ಹಾಕುವಂತೆ ಮಾಡಿದ್ದೀರಿ. ಬೇರೆ ರಾಷ್ಟ್ರದವರು ಈ ರೀತಿಯಲ್ಲಿ ಪೆಲೆಟೈಸೇಷನ್ ಪ್ಲಾಂಟ್ ಹಾಕಿಕೊಡಬೇಕು ಎಂದು ಹೇಳಿದ್ದಾರೆ. ಅದಕ್ಕೆ ತಾವು ಏನು ಯೋಚನೆ ಮಾಡಿದ್ದೀರಿ ?

ಶ್ರೀ ಎಸ್. ಎಂ. ಕೃಷ್ಣ.—ಪೆಲೆಟೈಸೇಷನ್ ಪ್ಲಾಂಟ್ ಹಾಕಬೇಕು ಎನ್ನುವುದು ಆ ಯೋಜನೆಯಲ್ಲಿ ಅಡಕವಾಗಿದೆ, ಜೊತೆಗೆ ಕಬ್ಬಿಣದ ಅದುರನ್ನು ಕ್ಷಿಪ್ರವಾಗಿ ಸಾಗಿಸಬೇಕು ಎನ್ನತಕ್ಕಂಥಾದ್ದು ಇದೆ. ಇನ್ನು ನಮ್ಮ ಕೆಲವು ಮುಖ್ಯ ಕೈಗಾರಿಕೆಗಳ ಬಗ್ಗೆ ಸಮೀಕ್ಷೆ ಮಾಡಬೇಕಾಗಿದೆ. ಅದಕ್ಕೆ ಹೋಗುವುದಕ್ಕೆ ಮುನ್ನ ಕೇಂದ್ರ ಸರ್ಕಾರದವರು ಮೈಸೂರು ರಾಜ್ಯದಲ್ಲಿ ಇದುವರೆಗೆ ಕೈಗಾರಿಕಾ ಕ್ಷೇತ್ರದಲ್ಲಿ ಏನು ಬಂಡವಾಳ ಹಾಕಿದ್ದಾರೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ನಾನು ಪಾರ್ಲಿಮೆಂಟ್ ಸದಸ್ಯನಾಗಿದ್ದಾಗ ಒಂದು ಅಭಿಪ್ರಾಯ ದೇಶದಲ್ಲಿ ಮೂಡಿ ಬಂದಿತ್ತು. ಕೇಂದ್ರ ಸರ್ಕಾರದ ಉದ್ಯಮಗಳು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದೆ, ಕ್ರೋಢೀಕೃತವಾಗಿದೆ, ಮೈಸೂರಿಗೆ ಎಲ್ಲಾ ಉದ್ಯಮಗಳೂ ಹೊರಟು ಹೋಗುತ್ತಿವೆ ಎಂದು ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿರತಕ್ಕಂಥ ನನ್ನ ಸ್ನೇಹಿತರು ಹೇಳುತ್ತಿದ್ದರು. ಅದು ಎಷ್ಟು ತಪ್ಪು ಅಭಿಪ್ರಾಯ ಎನ್ನತಕ್ಕದ್ದು ಈ ಸಭೆಯ ಮುಂದೆ ಮಂಡಿಸತಕ್ಕ ಅಂಕಿಅಂಶಗಳು ಸಾಬೀತು ಮಾಡುತ್ತವೆ. In the First Five Year Plan allocation for industries in Central Sector was Rs. 45.3 Crores. Central Investment in Mysore State was just 7.1 percent. In the II Five-Year Plan allocation for industries in Central Sector was 694 crores of rupees. Central investment in Mysore State came down to 3.3 per cent. In the III Five Year Plan the allocation in the Central Sector was Rs. 1144 crores and the Central investment in Mysore State rose to 17.2 per cent. In the IV Five Year Plan it was Rs. 3150 crores. Our percentage rose to 32.4 per cent ಇದರಿಂದ ಏನು ಸ್ಪಷ್ಟಪಡುತ್ತದೆ ಎಂದರೆ ಕೇಂದ್ರದವರು ಮೈಸೂರಿನಲ್ಲಿ ಇನ್‌ವೆಸ್ಟ್‌ಮೆಂಟ್ ಏನು ಅಗತ್ಯವಾಗಿ ಹಾಕಬೇಕೋ ಅದಕ್ಕಿಂತ ಕಡಿಮೆ ಹಾಕಿದ್ದಾರೆಯೇ ಹೊರತು ಹೆಚ್ಚು ಹಾಕಲಿಲ್ಲ ಎಂದು ಈಗ ನಾನು ಮಂಡಿಸಿರತಕ್ಕಂಥ ಅಂಕಿ ಅಂಶಗಳಿಂದ ಅರ್ಥವಾಗುತ್ತದೆ ಎಂದು ನಾನು ಈ ಸದನಕ್ಕೆ ತಿಳಿಸಲಿಚ್ಛಿಸುತ್ತೇನೆ. ಸರ್ಕಾರದ ಉದ್ದಿಮೆಗಳು ಲಾಭದಾಯಕವಾಗಿ ಕೆಲಸ ಮಾಡಬೇಕು ಎನ್ನತಕ್ಕಂಥಾದ್ದು ಎಲ್ಲ ಸದಸ್ಯರ ಏಕಮುಖ ಅಭಿಪ್ರಾಯವಾಗಿದೆ. ನಮ್ಮ ಅಭಿಪ್ರಾಯ ಕೂಡ ಸರ್ಕಾರದ ಉದ್ಯಮದಲ್ಲಿರತಕ್ಕ ಕಂಪನಿಗಳು ಚೆನ್ನಾಗಿ ಕೆಲಸ ಮಾಡಬೇಕು ಎನ್ನತಕ್ಕಂಥಾದ್ದು. ನಮ್ಮಲ್ಲಿರತಕ್ಕ ಎನ್.ಜಿ.ಇ.ಎಫ್. 1970-71ನೇ ಇಸವಿಯಲ್ಲಿ ಸುಮಾರು 15 ಲಕ್ಷ ರೂಪಾಯಿ ಲಾಭವನ್ನು ಮಾಡಿದೆ. ಹಾಗೆಯೇ 1971-72 ನೇ ಇಸವಿಯಲ್ಲಿ 40 ಲಕ್ಷ ರೂಪಾಯಿ ಲಾಭವನ್ನು ಮಾಡಿದೆ, ಮೈಸೂರು ಷುಗರ್ ಕಂಪನಿ 1970-71 ನೇ ಇಸವಿಯಲ್ಲಿ ನೂರು ಲಕ್ಷ ರೂಪಾಯಿ ಲಾಭವನ್ನು ಮಾಡಿದೆ. ಹಾಗೆಯೇ ಹಟ್ಟಿ ಗೋಲ್ಡ್ ಮೈನ್ಸ್ 1971-72 ನೇ ಇಸವಿಯಲ್ಲಿ 23 ಲಕ್ಷ ರೂಪಾಯಿ ಲಾಭವನ್ನು ಮಾಡಿತ್ತು. ಹಟ್ಟಿ ಗೋಲ್ಡ್ ಮೈನ್ಸ್ ಬಗ್ಗೆ 60 ಲಕ್ಷ ರೂಪಾಯಿ ಚಿನ್ನ ಹಾಗೆಯೇ ಇದೆ ಎಂದು ಹೇಳಿದರು. ಗೋಲ್ಡ್ ಕಂಟ್ರೋಲ್ ಜಾರಿಯಲ್ಲಿದೆ, ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ರಿಸರ್ವ್ ಬ್ಯಾಂಕ್ ನಮ್ಮ ಚಿನ್ನದ ಗಣಿ ಹಾಗೂ ಕೇಂದ್ರ ಸರ್ಕಾರ ಈ ಮೂರು ಭಾಗಗಳಲ್ಲಿ ಕೆಲಸಕಾರ್ಯಗಳು ಆಗಬೇಕಾಗಿದೆ. ಕೇಂದ್ರ ಸರ್ಕಾರದಿಂದ ನಮಗೆ ಆಶ್ವಾಸನೆ ದೊರಕಿದೆ, 60 ಲಕ್ಷ ರೂಪಾಯಿನ ಚಿನ್ನ ಏನು ಇದೆ ಅದನ್ನು ರಿಸರ್ವ್ ಬ್ಯಾಂಕ್‌ನವರು ತೆಗೆದುಕೊಳ್ಳುತ್ತಾರೆ ಎಂದು. ಅದರ ಜೊತೆಗೆ 4 ಕೋಟಿ ರೂಪಾಯಿಗಳ ಸಾಲವನ್ನು ಮಾಡಿದ್ದಾರೆ. ಈ 4 ಕೋಟಿ ರೂಪಾಯಿಗಳ ಸಾಲಕ್ಕೆ ಬಡ್ಡಿಯನ್ನು ಪ್ರತಿ ತಿಂಗಳೂ ಪ್ರತಿ ವರ್ಷವೂ ಕಟ್ಟಿಕೊಂಡು ಹೋಗಬೇಕಾಗಿದೆ. ಈ ಸಮಸ್ಯೆ ಅತಿ ಶೀಘ್ರದಲ್ಲೇ ಬಗೆಹರಿಯುತ್ತದೆ ಎನ್ನತಕ್ಕ ವಿಷಯ ಇದೆ. ಮೈಸೂರು ಲ್ಯಾಕ್ ಅಂಡ್ ಪೈಂಟ್ ವರ್ಕ್ಸ್ ಈ ಸಾರಿ ಸುಮಾರು 2 ಲಕ್ಷ ರೂಪಾಯಿ ಕಡಿಮೆ ಲಾಭವನ್ನು ಮಾಡಿವೆ. ರೆಫ್ಕೋ ಕಾರ್ಬೈಡ್ 3 ಲಕ್ಷ 49 ಸಾವಿರ ರೂಪಾಯಿ ಲಾಭವನ್ನು 1971-72ನೇ ಇಸವಿಯಲ್ಲಿ ಮಾಡಿದೆ. ಹಾಗೆಯೇ ಮೈಸೂರು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ $12\frac{1}{2}$ ಲಕ್ಷ ರೂಪಾಯಿ ಲಾಭವನ್ನು ಮಾಡಿದೆ, ಮೈಸೂರು ಐರನ್ ಅಂಡ್ ಸ್ಟೀಲ್, ಭದ್ರಾವತಿ 59 ಲಕ್ಷ ರೂಪಾಯಿ ಲಾಭವನ್ನು ಮಾಡಿದೆ, ಮೈಸೂರು ಸ್ಟೇಟ್ ಕ್ರೋಮ್ ಟ್ಯಾನಿಂಗ್ ಕಂಪನಿಯವರು 30 ಲಕ್ಷ ರೂಪಾಯಿ ಲಾಭವನ್ನು ಮಾಡಿದ್ದಾರೆ. ಈ ರೀತಿ ಸರ್ಕಾರದ ಕಂಪನಿಗಳು ಎಲ್ಲವೂ ಕೂಡ ಲಾಭವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದೆ ಎನ್ನುವುದು ಸ್ವಲ್ಪ ಸಮಾಧಾನವಾದ ಮಾತು.

SRI M. S. KRISHNAN.—The profit earned by the Bhadravathi Iron and Steel Limited was stated to be one crore of rupees. How is it that the Minister has reduced it to Rs. 59 lakhs.

ಶ್ರೀ ಎಸ್. ಎಂ. ಕೃಷ್ಣ.—ಒಂದು ಕೋಟಿ ರೂಪಾಯಿ ಲಾಭ ಮಾಡಬೇಕೆಂದು ಅವರು ಇಚ್ಛೆ ಮಾಡುತ್ತಾ ಇದ್ದರು. ಡಿಪಾರ್ಟ್‌ಮೆಂಟ್‌ಲಿ ಮ್ಯಾನೇಜ್ಡ್ ಗೌರ್ನಮೆಂಟ್ ಕನ್‌ಸರ್ನ್ಸ್ ಇದರಲ್ಲಿ ಮಾತ್ರ ಅಲ್ಪಸ್ವಲ್ಪ ನಿರಾಸೆಗೆ ಕಾರಣವಾಗಿದೆ ಎನ್ನತಕ್ಕಾಂಥಾದ್ದನ್ನು ಒಪ್ಪಬೇಕಾಗಿದೆ. ಗೌರ್ನಮೆಂಟ್ ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ, ಮೈಸೂರು ಮತ್ತು ಶಿವಮೊಗ್ಗ, 14 ಲಕ್ಷ ರೂಪಾಯಿ ಲಾಭವನ್ನು ಮಾಡಿದೆ. ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ 33 ಲಕ್ಷ ರೂಪಾಯಿ ಲಾಭವನ್ನು

(ಶ್ರೀ ಎಸ್. ಎಂ. ಕೃಷ್ಣ)

ಮಾಡಿದೆ. ಗೌರ್ನಮೆಂಟ್ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್ 7½ ಲಕ್ಷ ರೂಪಾಯಿ ನಷ್ಟವನ್ನು ಅನುಭವಿಸಿದೆ. ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್, ಮರ್ಕೆರ, 89 ಸಾವಿರ ರೂಪಾಯಿ ನಷ್ಟದಲ್ಲಿ ಇವೆ. ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ 25 ಲಕ್ಷ ರೂಪಾಯಿ ನಷ್ಟವನ್ನು ಅನುಭವಿಸಿದೆ. ಆದರೆ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಬಗ್ಗೆ ನಾನು ಒಂದು ಸಮಾಧಾನ ಹೇಳಿದರೆ ಅದು ನನ್ನ ಮೇಲೆ ಬರುತ್ತದೆ ಎನ್ನುವುದು ಗೊತ್ತು. ಆದರೂ ಕೂಡ ಹೇಳುತ್ತೇನೆ 1969-70 ರಲ್ಲಿ 40 ಲಕ್ಷ ರೂಪಾಯಿ ನಷ್ಟ ಇದ್ದುದನ್ನು ಕಷ್ಟಪಟ್ಟು 25 ಲಕ್ಷಕ್ಕೆ ಇಳಿಸಿದ್ದಾರೆ. ಹಾಗೆಯೇ ಮೈಸೂರು ಇಂಪ್ಲಿಮೆಂಟ್ ಫ್ಯಾಕ್ಟರಿ, ಹಾಸನ ಇದು 9 ಲಕ್ಷ ರೂಪಾಯಿ ನಷ್ಟದಲ್ಲಿ ಕೆಲಸ ಮಾಡುತ್ತಾ ಇದೆ. ನಷ್ಟದಲ್ಲಿ ಕೆಲಸ ಮಾಡುತ್ತಾ ಇರುವ ನೇರವಾಗಿ ಸರ್ಕಾರದವರೇ ನಡೆಸುತ್ತಾ ಇರತಕ್ಕಂಥ ಕೈಗಾರಿಕೆಗಳ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವುದು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅಂಥಾ ಉದ್ಯಮಗಳ ಬಗ್ಗೆ ನಮ್ಮ ಇಲಾಖೆ ಗಮನವನ್ನು ಹರಿಸುತ್ತದೆ. ಹೇಗೆ ಉತ್ತಮಪಡಿಸಬೇಕು ಹೇಗೆ ಇದನ್ನು ಲಾಭದಾಯಕವಾಗಿ ಬಂಡವಾಳವನ್ನಾಗಿ ಪರಿವರ್ತನೆ ಮಾಡಬೇಕು ಎನ್ನುವ ಬಗ್ಗೆ ನಾವು ಈಗಾಗಲೇ ಕಾರ್ಯಕ್ರಮ ಕೈಗೊಂಡಿದ್ದೇವೆ. ಬಹುಶಃ ಈ ವರ್ಷದ ಕೊನೆ ಹೊತ್ತಿಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೋ ಅವುಗಳೆಲ್ಲವನ್ನೂ ಕೂಡ ಕಾರ್ಯ ರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕ ವಿಶ್ವಾಸವನ್ನು ನಾವು ಪಡೆದಿದ್ದೇವೆ.

ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ವಿಚಾರದಲ್ಲಿ ಸಾಕಾದಷ್ಟು ಟೀಕೆಗಳು ಬಂದಿವೆ. ಮಾನ್ಯ ದೇವೇಗೌಡರು, ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ಕೂಡ ಇದರ ಬಗ್ಗೆ ಸುದೀರ್ಘವಾದ ಅಧ್ಯಯನವನ್ನು ನಡೆಸಿದ್ದಾರೆ. ಬಹಳ ಸಂತೋಷ. ನಮ್ಮ ಸರ್ಕಾರದ ಉದ್ದಿಮೆಗಳು ಯಾವುವು ನಷ್ಟದಲ್ಲಿ ನಡೆಯುತ್ತಿವೆ, ಅದರ ಬಗ್ಗೆ ನಮ್ಮ ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಕಮಿಟಿ ಆನ್ ಪಬ್ಲಿಕ್ ಅಂಡರ್‌ಟೇಕಿಂಗ್ಸ್, ಈ ಎರಡೂ ಸಮಿತಿಗಳು ಸುದೀರ್ಘವಾಗಿ, ಅಧ್ಯಯನ ಮಾಡಿ ಸರ್ಕಾರಕ್ಕೆ ತಮ್ಮ ಶಿಫಾರಸುಗಳನ್ನು ಮಾಡಿ ಈ ಕಂಪೆನಿಗಳನ್ನು ನಾವು ಹೇಗೆ ಲಾಭದ ದಾರಿಯಲ್ಲಿ ತೆಗೆದುಕೊಂಡು ಹೋಗಬೇಕು ಎನ್ನುವುದರ ಬಗ್ಗೆ ತಿಳುವಳಿಕೆ ಕೊಡಬೇಕು, ಮಾರ್ಗದರ್ಶನ ಮಾಡಬೇಕು ಎಂದು ಸರ್ಕಾರ ಅಪೇಕ್ಷೆ ಪಡುತ್ತದೆ.

ಫ್ಯಾನ್ ವಿಚಾರ ಬಂತು. ಫ್ಯಾನ್ ಬಗ್ಗೆ ಅಗ್ರಿಮೆಂಟ್ ಏನಾಗಿದೆ ಅದರಿಂದ ನಮಗೆ ಪ್ರತಿಕೂಲವೇ ಹೆಚ್ಚಾಗಿದೆ ಎನ್ನುವ ಬಗ್ಗೆ ನನಗೆ ಯಾವ ಅನುಮಾನವೂ ಇಲ್ಲ. ಬಹುಶಃ ನಾನು ಕೈಗಾರಿಕಾ ಮಂತ್ರಿಯಾಗಿ, ಅಂಥ ಒಪ್ಪಂದಕ್ಕೆ ನಮ್ಮ ಇಲಾಖೆಯ ಅಧಿಕಾರಿಗಳು ರುಜು ಹಾಕುವುದಕ್ಕೆ ಅವಕಾಶ ಕೊಡುತ್ತಿರಲಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಬಹುಶಃ ಇದು ಮಿಸ್ ಕ್ಯಾಲ್ಕುಲೇಷನ್ ಇದೆಯೋ ಅಥವಾ ಅಗ್ರಿಮೆಂಟ್ ನಡೆದಾಗ ಸಾಕಾದಷ್ಟು ತೀವ್ರವಾಗಿ, ಸಾಕಾದಷ್ಟು ಪ್ರಮಾಣದಲ್ಲಿ ಅಧ್ಯಯನ ನಡೆಯಲಿಲ್ಲವೋ ಎನ್ನುವುದನ್ನು ಈಗ ಹೇಳುವುದಕ್ಕೆ ಬರುವುದಿಲ್ಲ. ಇಷ್ಟನ್ನು ಮಾತ್ರ ನಾನು ಹೇಳುತ್ತೇನೆ, ಬಹುಶಃ ಇದು ಮಿಸ್ ಕ್ಯಾಲ್ಕುಲೇಷನ್ ಅಥವಾ ಲ್ಯಾಕ್ ಆಫ್ ಅಪ್ರಿಸಿಯೇಷನ್ ಆಫ್ ಫ್ಯಾಕ್ಟ್ಸ್ ಇದರಿಂದ ಈ ಒಂದು ಅಗ್ರಿಮೆಂಟ್ ನಡೆದು ಹೋಗಿದೆ. ಈಗ ಸರ್ಕಾರದ ಕೈಗಳು ಕಟ್ಟಿ ಹೋಗಿವೆ. ಈ ಅಗ್ರಿಮೆಂಟನ್ನು ನಾವು ಈ ದಿವಸ ಹೊಡೆದು ಹಾಕಬಹುದು. ಆದರ ಒಂದು ಮಾತನ್ನು ಈ ಸದನದವರು ಗಂಭೀರವಾಗಿ ಪರಿಶೀಲಿಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಕೈಗಾರಿಕಾ ಇಲಾಖೆಯವರು ಇನ್ನು ಮುಂದೂ ಕೂಡ ಖಾಸಗಿ ಜನರ ಜೊತೆಯಲ್ಲಿ ಒಪ್ಪಂದಗಳನ್ನು ಆಗಿಂದಾಗ್ಗೆ ಮಾಡಿಕೊಳ್ಳಲೇಬೇಕಾಗುತ್ತದೆ. ಏಕೆಂದರೆ ಕೈಗಾರಿಕಾ ವಿಕಾಸ, ಕೈಗಾರಿಕಾ ಅಭಿವೃದ್ಧಿ ನಡೆಯುವುದಕ್ಕೆ ಸಾಧ್ಯವಾಗುವುದಕ್ಕೆ ಖಾಸಗಿ ಬಂಡವಾಳ ಹಾಗೂ ಸರ್ಕಾರಿ ಬಂಡವಾಳ ಎರಡೂ ಜೊತೆಯಲ್ಲಿ ಮುಂದೆಯೂ ಹೋಗಬೇಕಾಗುತ್ತದೆ. ಈ ಅಗ್ರಿಮೆಂಟ್ ಏಕಾಏಕಿ ಕ್ಯಾನ್ಸಲ್ ಮಾಡುತ್ತ ಹೋದರೆ, ರಿವೋಕ್ ಮಾಡುತ್ತ ಹೋದರೆ ಅದರಿಂದ ಏನಾದರೂ ಕೆಟ್ಟ ಪರಿಣಾಮ ನಮ್ಮ ರಾಜ್ಯದ ಕೈಗಾರಿಕಾ ಅಭಿವೃದ್ಧಿಗೆ ಬರಬಹುದೋ ಏನೋ ಎನ್ನುವ ಶಂಕೆ ನನ್ನನ್ನು ಕಾಡುತ್ತಿದೆ. ಅಂದ ಮೇಲೆ ಈ ಅಗ್ರಿಮೆಂಟಿನ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕು. ನಿರಂತರವಾಗಿ ಹತ್ತಿಪ್ಪತ್ತು ವರ್ಷ ಫ್ಯಾನುಗಳನ್ನು ಕಂಪೆನಿಯವರಿಗೆ ಕಡಮೆ ದರದಲ್ಲಿ ಕೊಟ್ಟುಕೊಂಡು ಹೋಗುವುದಕ್ಕೆ ಸಾಧ್ಯವಾಗಲಾರದೋ ಏನೋ ಎಂದೆನ್ನಿಸುತ್ತದೆ. ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಗೆ ಸರ್ಕಾರದವರು ಸಹಾಯ ಮಾಡದೆ ಹೋದರೆ ಅದನ್ನು ಮುಚ್ಚಬೇಕಾದ ಪರಿಸ್ಥಿತಿ ಬರುತ್ತದೆ. ಆದುದರಿಂದ ನಾವು ಇದರ ಬಗ್ಗೆ ಯೋಚನೆ ಮಾಡುವುದಕ್ಕೆ ಸರ್ಕಾರಕ್ಕೆ ಬಹಳ ಅವಕಾಶವನ್ನು ಕೊಡಬೇಕು ಎಂದು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ವಿರೋಧಪಕ್ಷದ ನಾಯಕರು, ಶ್ರೀ ಬಂಗಾರಪ್ಪನವರು, ಶ್ರೀ ಕೋಣಂದೂರುಲಿಂಗಪ್ಪನವರು, ಸರ್ವತೋಮುಖವಾಗಿ ಭಾಷಣ ಮಾಡಿ ಖುದ್ದೂಸ್ ಅನ್ವರ್ ಅವರು ಎಲ್ಲರೂ ಭದ್ರಾವತಿ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಭದ್ರಾವತಿ ನಮ್ಮ ರಾಜ್ಯದ ಅತ್ಯಂತ ಹೆಮ್ಮೆಯ ಕಾರ್ಖಾನೆ. ಹಿರಿಯ ಕಾರ್ಖಾನೆಯೂ ಹೌದು, ಹೆಮ್ಮೆಯ ಕಾರ್ಖಾನೆಯೂ ಹೌದು. ಸಂಪೂರ್ಣವಾಗಿ ಸರ್ಕಾರಿ ಬಂಡವಾಳದಿಂದ, ಮೈಸೂರಿನ ಮಕ್ಕಳು ಕಟ್ಟಿರತಕ್ಕ ಕಾರ್ಖಾನೆ ಅದು. ಶ್ರೀ ಎಂ. ವಿಶ್ವೇಶ್ವರಯ್ಯನವರ ಆಶೀರ್ವಾದದಿಂದ ಬೆಳೆದಿರತಕ್ಕ ಕಾರ್ಖಾನೆ; ಇಡೀ ಇಂಡಿಯಾ ದೇಶಕ್ಕೆ ಒಂದು ಕಾಲದಲ್ಲಿ ಮಾದರಿಯಾಗಿದ್ದ ಕಾರ್ಖಾನೆ ಈ ಭದ್ರಾವತಿ ಕಾರ್ಖಾನೆ. ಈ ಹೊತ್ತು ಭದ್ರಾವತಿ ಕಾರ್ಖಾನೆ ಬಗ್ಗೆ ಸಾಕಾದಷ್ಟು ಜಿಜ್ಞಾಸೆ, ಸಾಕಾದಷ್ಟು ಗಡಿಬಿಡಿ, ಸಾಕಾದಷ್ಟು ಗೊಂದಲ ಉಂಟಾಗಿರತಕ್ಕುದು ನಮ್ಮೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಭದ್ರಾವತಿ ಕಾರ್ಖಾನೆಯನ್ನು ಅನೇಕ ತಂಡಗಳು ಕೆಲವಾರು ವರ್ಷಗಳಿಂದ ಅಧ್ಯಯನ ಮಾಡುವುದಕ್ಕೆ ಪ್ರಯತ್ನ ಮಾಡಿವೆ. ಕೇಂದ್ರ ಸರ್ಕಾರದ ಒಂದು ತಂಡ, ಹೈದರಾಬಾದ್ ಅಡ್ಮಿನಿಸ್ಟ್ರೇಷನ್ ಸ್ಟಾಫ್ ಕಾಲೇಜ್‌ನಿಂದ ಬಂದಿರುವ ತಂಡ, ಜಮಷೆಡ್‌ಪುರದ ಟಿಸ್ಕೋ ತಂಡ ಹೀಗೆ ಇನ್ನೂ ನಾಲ್ಕಾರು ತಂಡಗಳು ಬಂದು ಅಧ್ಯಯನ ಮಾಡಿವೆ. ಭದ್ರಾವತಿಯಲ್ಲಿ ಈಗಲೂ ಕೂಡ ಒಬ್ಬ ವಿದೇಶಿ ಇಂಜಿನಿಯರ್ ಇದ್ದಾರೆ ಎಂದು ಮಾನ್ಯ ಸದಸ್ಯರಾದ ಖುದ್ದೂಸ್ ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಆ ಪ್ರಸ್ತಾಪಕ್ಕೆ ಹೋಗುವುದಿಲ್ಲ. ಕಾರಣವೇನೆಂದರೆ ಅವರು ಹೊರಟುಹೋಗಿದ್ದಾರೆ, ಅವರು ನಮ್ಮ ದೇಶವನ್ನೇ ಬಿಟ್ಟು ಹೋಗಿದ್ದಾರೆ. ಆದುದರಿಂದ ಅದು ಅಪ್ರಕೃತವಾಗುತ್ತದೆ. ಈಗ ನಾನು ಹೇಳತಕ್ಕ ವಿಚಾರ ಸಂಪೂರ್ಣವಾಗಿ ನೂರಕ್ಕೆ ನೂರು ಭಾಗ ಮೈಸೂರು ಜನಗಳಿಂದಲೇ ನಡೆಸುತ್ತಿರತಕ್ಕ ಕಾರ್ಖಾನೆ, ಈ ಭದ್ರಾವತಿ ಕಾರ್ಖಾನೆ. ಈಗ ಅಲ್ಲಿನ ಒಂದು ವಿಶೇಷವಾದ ಪರಿಸ್ಥಿತಿ ಏನೆಂದರೆ ಮೈಸೂರು ರಾಜ್ಯ ಸರ್ಕಾರದ ಬಂಡವಾಳ 60 ಭಾಗ ಮತ್ತು ಕೇಂದ್ರ ಸರ್ಕಾರದ ಬಂಡವಾಳ 40 ಭಾಗ ಇರತಕ್ಕುದು. ಅದುದರಿಂದಲೇ ನಾವು ಏನೇ ಕೆಲಸ ಮಾಡಬೇಕಾದರೂ ಭದ್ರಾವತಿ ಕಾರ್ಖಾನೆಯ ಬಗ್ಗೆ ಕೇಂದ್ರ ಸರ್ಕಾರದೊಡನೆ ಆಗಿಂದಾಗ್ಗೆ ಸಮಾಲೋಚನೆ ಮಾಡಿ ಅವರ ಅನುಮತಿಯನ್ನು ಪಡೆದು ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಜೊತೆಗೆ ಭದ್ರಾವತಿ ಕಾರ್ಖಾನೆಯ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಗಳೂ ಇದ್ದಾರೆ. ಆದುದರಿಂದ ಅಲ್ಲಿ ಇನ್ನು ಮುಂದೆ ಯಾವ ವಿಧವಾದ ಗೊಂದಲಕ್ಕೂ ಕೂಡ ಕಾರಣವಿಲ್ಲ, ಅವಕಾಶವೂ ಕೂಡ ಇಲ್ಲ ಎನ್ನುವುದು ಮಾನ್ಯ ಸದಸ್ಯರು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕಾದ ವಿಚಾರ.

ಭದ್ರಾವತಿಯಲ್ಲಿ ಇದುವರೆಗೆ ಏಕೆ ಬಹಳ ನಷ್ಟವಾಯಿತು ಎನ್ನುವುದರ ಬಗ್ಗೆ ಹಲವಾರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾಲ್ಕು ವಿಚಾರಗಳನ್ನು ಈ ಬಗ್ಗೆ ಮಾನ್ಯ ಸದನದ ಗಮನಕ್ಕೆ ತಂದು ಅಂಕಿ ಅಂಶಗಳನ್ನು ಕೊಟ್ಟು ಈ ನಷ್ಟಗಳು ಸಂಭವಿಸುವುದಕ್ಕೆ ಕಾರಣ ಮತ್ತು ಈ ಕಾರ್ಖಾನೆ ಈಗ ನಡೆಯುತ್ತಿರುವ ಬಗ್ಗೆ ಈ ಎರಡನ್ನೂ ಕೂಡ ನಾನು ಸದನದ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ.

ಭದ್ರಾವತಿ ಕಾರ್ಖಾನೆಯಲ್ಲಿ ನಾನಾವಿಧವಾದ ಪಿಗ್ ಐರನ್ ಪ್ರೊಡಕ್ಷನ್ 1970-71ನೇ ಇಸವಿಯಲ್ಲಿ 77,478 ಟನ್ ಮತ್ತು 1971-72 ರಲ್ಲಿ 1,22,552 ಟನ್ ಆಗಿದೆ. 77 ಸಾವಿರ ಟನ್‌ಗಳಿಂದ, ಒಂದು ಲಕ್ಷ 22 ಸಾವಿರ ಟನ್‌ಗಳಿಗೆ ಪಿಗ್ ಐರನ್ ಪ್ರೊಡಕ್ಷನ್ ಹೆಚ್ಚಾಗಿದೆ ಎನ್ನುವುದನ್ನು ತಾವು ಗಮನಿಸಬೇಕು. ಹಾಗೆಯೇ ಸ್ಟೀಲ್ ಇನ್‌ಗಾಟ್ಸ್ 1970-71 ರಲ್ಲಿ 1 ಲಕ್ಷ 6 ಸಾವಿರ ಟನ್ ಇದ್ದುದು 1971-72 ರಲ್ಲಿ ಒಂದು ಲಕ್ಷ 23 ಸಾವಿರ ಟನ್ ಪ್ರೊಡಕ್ಷನ್ ಆಗಿದೆ. ಹಾಗೆಯೇ ಫಿನಿಷ್ಡ್ ಸ್ಟೀಲ್‌ನಲ್ಲಿ 1970-71 ರಲ್ಲಿ 95,900 ಟನ್ ಪ್ರೊಡಕ್ಷನ್ ಆಗಿದ್ದರೆ 1971-72 ರಲ್ಲಿ ಒಂದು ಲಕ್ಷ 34 ಸಾವಿರ ಟನ್ ಮಾಡಿದ್ದಾರೆ. ಇದು ಏನನ್ನು ಸ್ಪಷ್ಟಪಡಿಸುತ್ತದೆ ಎಂಬುದನ್ನು ನೋಡಬೇಕು. ನಾನು ನಿನ್ನೆಯೇ ಹೇಳಿದಂತೆ ಮಾನ್ಯ ಖುದ್ದೂಸ್ ಅನ್ವರ್ ಅವರು ನಮ್ಮ ಸ್ಟೀಲ್ ಎಕ್ಸ್‌ಪರ್ಟ್. ಅವರೇ ಈ ಸ್ಟೀಲ್ ಮಿಲ್ಲನ್ನು ಬೆಳೆಸಿದವರು. ಆದುದರಿಂದ ನಮ್ಮ ಸ್ಟೀಲ್ ಮಿಲ್ಲಿನಲ್ಲಿ ಈಗ ಒಂದು ಲಕ್ಷ 34 ಸಾವಿರ ಟನ್ ಉತ್ಪಾದನೆಯಾಗುತ್ತಿದೆ. ಮುಂದಿನ ವರ್ಷ ಒಂದು ಲಕ್ಷ 73 ಸಾವಿರ ಟನ್‌ವರೆಗೂ ಹೋಗಬಹುದು. ನಮ್ಮ ಅಂಟಿಸಿಪೇಟೆಡ್ ಪ್ರೊಡಕ್ಷನ್ ಹಾಗೆಯೇ ಸ್ಟೀಲ್ ಇನ್‌ಗಾಟ್ಸ್ ಮುಂದಿನ ವರ್ಷಕ್ಕೆ ಒಂದು ಲಕ್ಷ 60 ಸಾವಿರ ಟನ್‌ಗೆ ಹೋಗಬಹುದು ಎಂದು ಯೋಚನೆ ಮಾಡುತ್ತಿದ್ದೇವೆ. ಅದೇ ರೀತಿ ಪಿಗ್ ಐರನ್ ಒಂದು ಲಕ್ಷ 50 ಸಾವಿರ ಟನ್‌ಗೆ ಹೋಗಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಇನ್ನು ಸೇಲ್ಸ್ ಬಗ್ಗೆ ಹೇಳಬೇಕೆಂದರೆ, 1970-71 ರಲ್ಲಿ 67 ಲಕ್ಷ ರೂಪಾಯಿ ಪಿಗ್ ಐರನ್ ಮಾಡಿದ್ದೇವೆ, 1971-72 ರಲ್ಲಿ 149 ಲಕ್ಷ ರೂಪಾಯಿ ಪಿಗ್ ಐರನ್ ಮಾಡಿದ್ದೇವೆ. ಮೈರ್ಲ್ಡ್

(ಶ್ರೀ ಎಸ್. ಎಂ. ಕೃಷ್ಣ)

ಸ್ಟೀಲ್ ತೆಗೆದುಕೊಂಡರೆ 1970-71 ರಲ್ಲಿ 441 ಲಕ್ಷ ರೂಪಾಯಿನಷ್ಟು ಮತ್ತು 1971--72 ರಲ್ಲಿ 788 ಲಕ್ಷ ರೂಪಾಯಿನಷ್ಟು ಮಾಡಿದ್ದೇವೆ.

1972-73ನೇ ಇಸವಿಯಲ್ಲಿ 10.24 ಲಕ್ಷ ರೂಪಾಯಿನ ಮೈಲ್ಡ್ ಸ್ಟೀಲ್ ಅನ್ನು ಮಾಡಬೇಕಾಗಿ ಯೋಚನೆ ಮಾಡುತ್ತಾ ಇದ್ದೇವೆ. ಸ್ಪೆಷಲ್ ಸ್ಟೀಲ್ 1970-71 ರಲ್ಲಿ 809 ಲಕ್ಷ ರೂಪಾಯಿಗಳ ಮಾರಾಟ ಮಾಡಿದ್ದೆವು. 1971-72ರಲ್ಲಿ 12.68 ಲಕ್ಷ ರೂಪಾಯಿಗಳ ಮಾರಾಟ ಮಾಡಿದ್ದೇವೆ. 1970-71 ರಲ್ಲಿ 1.37 ಲಕ್ಷ ರೂಪಾಯಿಗಳು, 1971-72 ರಲ್ಲಿ 144 ಲಕ್ಷ ರೂಪಾಯಿಗಳ ಸಿಮೆಂಟನ್ನು ಮಾರಾಟ ಮಾಡಿದ್ದೇವೆ. ಒಟ್ಟು 19ಕೋಟಿ ರೂಪಾಯಿಗಳ ಸೇಲ್ಸ್ ಆಯಿತು. ಭದ್ರಾವತಿ ಕಾರ್ಖಾನೆಯಲ್ಲಿ 1971-72ನೇ ಇಸವಿಯಲ್ಲಿ ಸೇಲ್ಸ್ 30 ಕೋಟಿ ರೂಪಾಯಿಗಳನ್ನು ದಾಟಿ ಹೋಗಿದೆ. ನಮ್ಮ ಅಂಕಾಕ್ಷೆ ಪ್ರಕಾರ ಈ ಕಾರ್ಯ ನಡೆದರೆ, ನಾವು 40 ಕೋಟಿ ರೂಪಾಯಿಗಳನ್ನು ಈ ವರ್ಷ ದಾಟಬೇಕು ಎನ್ನುವ ಟಾರ್ಗೆಟ್ ಇಟ್ಟುಕೊಂಡಿದ್ದೇವೆ. ಕೆಲವರು ಮಾನ್ಯ ಸ್ನೇಹಿತರುಗಳು ಭದ್ರಾವತಿಯ ಫ್ಯಾಕ್ಟರಿಯಲ್ಲಿ ಲಾಸ್ ಆಗಿರುವುದಕ್ಕೆ ಕಾರಣ ಏನು ಎಂದು ಕೇಳಿದರು. ಈ ಕಾರ್ಖಾನೆ ನಷ್ಟವನ್ನು ಅನುಭವಿಸಬೇಕಾದರೆ, ನಾನಾ ಕಾರಣಗಳು ಇವೆ. ಉದಾಹರಣೆಗಾಗಿ ಅದಕ್ಕೆ ಬೇಕಾಗಿರತಕ್ಕ ರಾಮೆಟೀರಿಯಲ್ಸ್ ಬೆಲೆಗಳು ದಿನೇದಿನೇ ಹೆಚ್ಚಾಗುತ್ತಾ ಹೋಗುತ್ತಿವೆ. ಎರಡು ಉದಾಹರಣೆಗಳು ಕೋಲ್ ಮತ್ತು ಕೋಕ್. 1967 ನೇ ಇಸವಿಯಲ್ಲಿ ಕೋಲ್‌ನ ಬೆಲೆ ಒಂದು ಟನ್‌ಗೆ 37ರೂಪಾಯಿ ಇತ್ತು. 1970-71 ರಲ್ಲಿ 39 ರೂಪಾಯಿಗೆ ನಿಂತಿತ್ತು. 1971-72 ರಲ್ಲಿ ಒಂದು ಟನ್‌ಗೆ 44 ರೂಪಾಯಿಗಳನ್ನು ಕೊಟ್ಟು ಕೊಂಡಿದ್ದೇವೆ. ಇನ್ನು ಕೋಕ್‌ನ ಬೆಲೆ 1970-71 ರಲ್ಲಿ 105 ರೂಪಾಯಿ ಆಗಿದೆ, ಈ ದಿವಸ ಕೋಕ್‌ನ ಬೆಲೆ 125ರೂಪಾಯಿಗಳಿಗೆ ಏರಿದೆ. ಕೋಕ್ ಮತ್ತು ಕೋಲ್ ಎರಡನ್ನೂ ಬಂಗಾಳದಿಂದ ತರಿಸಬೇಕಾಗಿದೆ. ಅಲ್ಲಿಂದ ಇದು ರೈಲ್ವೆ ವ್ಯಾಗನ್‌ಗಳಲ್ಲಿ ಬರಬೇಕಾಗಿದೆ. ಈ ಚಾರಕೋಲ್ 67-68 ರಲ್ಲಿ 126 ರೂಪಾಯಿ ಇತ್ತು. ಈಗ 198 ರೂಪಾಯಿ ಆಗಿದೆ. ನಮ್ಮ ಸ್ನೇಹಿತರಾದಂಥ ಶ್ರೀಮಾನ್ ಪಾಟೀಲರು, ಸಭೆ ಸೇರಿಸಿ ಈ ಚಾರ್‌ಕೋಲ್ ರೇಟ್ ಹಿಂದೆ ಮಾಡಿದ್ದು ಕಡಿಮೆ ಇದೆ, ಇದನ್ನು ಈಗ ಜಾಸ್ತಿ ಮಾಡಬೇಕು, ಅರಣ್ಯ ಸಂಪತನ್ನು ನಾಶ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಕೋಕ್ ಬೆಲೆ ಜಾಸ್ತಿಯಾಗಿದೆ. ಇದರಿಂದ ಸ್ವಲ್ಪಮಟ್ಟಿಗೆ ನಷ್ಟ ಉಂಟಾಯಿತು ಎನ್ನತಕ್ಕಂಥಾದನ್ನು ಸಭೆ ಗಮನಿಸಬೇಕಾಗಿದೆ. ಕಾರ್ಮಿಕರ ವಿಚಾರದಲ್ಲಿ ಒಂದು ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಭದ್ರಾವತಿ ಕಾರ್ಖಾನೆಯಲ್ಲಿ ಮಿನಿಮಮ್ ಬೇಸಿಕ್ ವೇಜ್ 31-8-1970ರಲ್ಲಿ 163ರೂಪಾಯಿ ಇತ್ತು. 1-9-1970ರಲ್ಲಿ ಜಾಯಿಂಟ್ ನೆಗೋಷಿಯೇಷನ್ ಮೂಲಕ ಏನು ಸಂಧಾನ ನಡೆಯಿತೋ ಅದರ ಮೂಲಕ 240 ರೂಪಾಯಿಗಳು ಆಗಿವೆ. This is inclusive of Rs. 33 as interim relief. ಈ ಒಂದೇ ಒಂದು ಸುಧಾರಣೆಯಿಂದ ನಮ್ಮ ಕಾರ್ಖಾನೆ 93ಲಕ್ಷ ರೂಪಾಯಿಗಳನ್ನು ವೇಜಸ್ ಮೂಲಕ ಹೆಚ್ಚು ಕೊಡಬೇಕಾಗಿ ಬಂತು ಎಂದು ಮಾನ್ಯ ಸದಸ್ಯರು ಗಮನಿಸಬೇಕು ಎಂಬುದಾಗಿ ನಾನು ಆಸೆ ಪಡುತ್ತೇನೆ. ಹಾಗೆ ಸಿಮೆಂಟ್ ಕಾರ್ಖಾನೆಯ ಕೆಲಸಗಾರರಿಗೂ ಮತ್ತು ಉಕ್ಕಿನ ಕಾರ್ಖಾನೆಯ ಕೆಲಸಗಾರರಿಗೂ ವೇತನದಲ್ಲಿ ವ್ಯತ್ಯಾಸವಿತ್ತು ಉಕ್ಕಿನ ಕಾರ್ಖಾನೆಯ ಕೆಲಸಗಾರರಿಗೆ 30 ರೂಪಾಯಿ ಜಾಸ್ತಿ ಸಿಗುತ್ತಿತ್ತು. ಒಂದೇ ಛಾವಣಿಯಲ್ಲಿ ಕೆಲಸ ಮಾಡುವ ಕಾರ್ಮಿಕ ನೌಕರರಿಗೆ ಅನುಕೂಲವಾಗಲೀ ಎನ್ನುವ ದೃಷ್ಟಿಯಿಂದ ಸಿಮೆಂಟ್ ಕಾರ್ಖಾನೆಯ ಕೆಲಸಗಾರರಿಗೂ ಈ 30 ರೂಪಾಯಿಗಳ ವ್ಯತ್ಯಾಸವನ್ನು ಸರಿಪಡಿಸಿದುದರಿಂದ ಸ್ವಲ್ಪ ಹೆಚ್ಚು ಖರ್ಚು ಉಂಟಾಯಿತು. ಈ ಎಲ್ಲಾ ಕಾರಣಗಳಿಂದ ಕಾರ್ಖಾನೆಗಳು ನಷ್ಟವನ್ನು ಅನುಭವಿಸಬೇಕಾಗಿ ಬಂತು ಎನ್ನುವುದನ್ನು ಮಾನ್ಯ ಸದಸ್ಯರು ಗಮನಿಸಬೇಕು ಎಂದು ನಾನಾದರೂ ಪ್ರಾರ್ಥನೆ ಮಾಡುತೇನೆ. ಜೊತೆಗೆ ನಮ್ಮ ಕಬ್ಬಿಣಕ್ಕೆ ಮಾರ್ಕೆಟನಲ್ಲಿ ತೀವ್ರವಾದ ಪೈಪೋಟಿ ಇತ್ತು. ಈ ಪೈಪೋಟಿಯನ್ನು ಎದುರಿಸಕ್ಕದ್ದು ಬಹಳ ಕಷ್ಟ. ಭದ್ರಾವತಿ ಕಾರ್ಖಾನೆಯಲ್ಲಿ ತಯಾರಾದಂಥ ಕಬ್ಬಿಣಕ್ಕೆ ಇಡೀ ನಮ್ಮ ದೇಶದಲ್ಲಿ ಒಳ್ಳೆಯ ಹೆಸರು ಇದೆ ಎನ್ನತಕ್ಕದ್ದು ನಾವು ಹೆಮ್ಮೆಯಿಂದ ಸ್ಮರಿಸಕೊಳ್ಳಬೇಕಾಗಿದೆ. ಈ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು, ಅಧಿಕಾರಿಗಳು ಮತ್ತು ಸಂಬಂಧಪಟ್ಟವರೆಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಇಡೀ ದೇಶದ ಯಾವ ಭಾಗಕ್ಕೆ ಹೋದರೂ ಭದ್ರಾವತಿಯ ಕಬ್ಬಿಣಕ್ಕೆ ಹೆಚ್ಚಿನ ಬೇಡಿಕೆ ಇದೆ. ಅದಕ್ಕೆ ಬಹಳ ತೀವ್ರತರವಾದ ಪೈಪೋಟಿ ಖಾಸಗೀ ಕ್ಷೇತ್ರದಿಂದ ಬರುತ್ತಿದೆ. ಬಾಂಬೆಯಲ್ಲಿರುವ ಒಂದೆರಡು ಕಂಪೆನಿಗಳು, ಅಂದರೆ, ಟಾಟಾ ಒಂದು ಕಡೆ, ಮತ್ತು ಮಹೀಂದ್ರ ಇನ್ನೊಂದು ಕಡೆ, ಪೈಪೋಟಿ ಮಾಡುತ್ತಿವೆ. ಭದ್ರಾವತಿಯಲ್ಲಿ ಇನ್ನುಮುಂದೆ ಮಾಡಬೇಕಾದ ಕೆಲವು ವಿಚಾರಗಳ ಬಗ್ಗೆ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ದೇವೇಗೌಡರು ಬಹಳ ಪ್ರಮುಖ್ಯವಾದ ಸಲಹೆಯನ್ನು

ಕೊಟ್ಟಿದ್ದಾರೆ. ಅದನ್ನು ಬಹಳ ಜನ ಸದಸ್ಯರು ಅನುಮೋದನೆ ಮಾಡಿದ್ದಾರೆ. ಅದು ಏನೆಂದರೆ, ಕೈಗಾರಿಕಾ ಕ್ಷೇತ್ರದಲ್ಲಿ ಒಂದು ಇಂಡಸ್ಟ್ರಿಯಲ್ ಕೆಡರ್ ಆಗಬೇಕು ಎಂದು. ಈ ಮಾತನ್ನು ನಾನೂ ಒಪ್ಪುತ್ತೇನೆ. ನಾವು ಸಹ ಇದನ್ನು ಒಪ್ಪದೇ ವಿಧಿಯಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಘೋರ್ಪಡೆಯವರ ನೇತೃತ್ವದಲ್ಲಿ ಎಸ್ಟಿಮೇಟ್ ಕಮಿಟಿ ಕೆಲವು ಶಿಫಾರಸ್‌ಗಳನ್ನು ಮಾಡಿದೆ. ಅವನ್ನು ಎಷ್ಟು ಮಟ್ಟಿಗೆ ಜಾರಿಗೆ ತಂದಿದ್ದೀರಿ, ಅಥವಾ ತಂದಿಲ್ಲ, ಎಂದು ಹೇಳಿದರೆ ಸಂತೋಷ.

ಶ್ರೀ ಎಸ್. ಎಂ. ಕೃಷ್ಣ.—ಇಂಡಸ್ಟ್ರಿಯಲ್ ಕೇಡರ್ ಏನು ಇದೆ ಅದನ್ನು ಮಾಡಬೇಕು ಎಂದು ನಾವು ಕೂಡ ಉದ್ದೇಶ ಪಟ್ಟಿದ್ದೇವೆ. ಕಾರ್ಖಾನೆಗಳಲ್ಲಿ ತರಬೇತಿ ಪಡೆದು ಇರತಕ್ಕ ಅಧಿಕಾರಿಗಳ ಒಂದು ಪೂಲ್ ಮಾಡಬೇಕು ಎನ್ನತಕ್ಕಂಥಾದ್ದನ್ನು ತತ್ವಶಃ ನಾವು ಒಪ್ಪಿದ್ದೇವೆ. ಮತ್ತು ಅದರ ರೂಪರೇಖೆಗಳನ್ನು ಮುಂದಿನ ತಿಂಗಳಲ್ಲಿ ನಾವು ಸ್ಪಷ್ಟವಾಗಿ ಆಚರಣೆಗೆ ತರಬೇಕಾಗಿದೆ. ಒಂದು ಮಾತನ್ನು ನಾನು ಒಪ್ಪುತ್ತೇನೆ, ಎಲ್ಲಾ ಸಮಸ್ಯೆಗೂ ಕೂಡ ಐ.ಎ.ಎಸ್. ಎಂಬ ಮೂರು ಶಬ್ದಗಳು ಸಂಜೀವಿನಿ ಎಂದು ನಾವು ಯಾರೂ ತಿಳಿದುಕೊಂಡಿಲ್ಲ. ಕೆಲವರು, ಕ್ರಿಟಿಸೈಸ್ ಮಾಡಿದರು, ಐ.ಎ.ಎಸ್. ಆಫೀಸರುಗಳನು ಅಲ್ಲಿಗೆ ಹಾಕುತ್ತಾರೆ ಎಂದು ಐ.ಎ.ಎಸ್. ಅಧಿಕಾರಿಗಳು ಬಹುಶಃ ಖಾಸಗೀ ಕಾರ್ಖಾನೆಯಲ್ಲಿ ಇರತಕ್ಕ ಪರಿಣತರಷ್ಟೆ, ಪರಿಣತೆಯನ್ನು ಪಡಿದಿದ್ದಾರೆ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಭದ್ರಾವತಿ ಕಾರ್ಖಾನೆಯಲ್ಲಿ ಈಗಾಗಲೇ ಕೆಲವು ಸ್ಟ್ರಕ್ಚರಲ್ ಚೇಂಜಸ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಒಂದು ಸ್ಟ್ರಕ್ಚರಲ್ ಚೇಂಜಸ್ ಮಾಡಬೇಕು ಎಂದು ಏನು ಆಸೆ ಇದೆ ಅದನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಇನ್ನು ಕೆಲವು ತಿಂಗಳು ನಮಗೆ ಅವಕಾಶ ಬೇಕಾಗುತ್ತದೆ. ಶ್ರೀಮಾನ್ ಖುದ್ದೂಸ್ ಅನ್ವರ್ ಸಾಹೇಬ್ ಅವರು ಹೇಳಿದರು, ಮೆಟಲರ್ಜಿಸ್ಟ್ ಯಾವುದೋ ಒಂದು ಕಡೆಗೆ ಹಾಕಿದ್ದೇವೆ ಎಂದು. ಅದರಲ್ಲಿ ಸಾಕಾದಷ್ಟು ಸತ್ಯವಿದೆ. ಅದನ್ನು ನಾವು ಸರಿಪಡಿಸುವುದಕ್ಕೆ ಈಗಾಗಲೇ ಗಮನವನ್ನು ಹರಿಸಿದ್ದೇವೆ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಬಂಗಾರಪ್ಪನವರು ಭದ್ರಾವತಿ ಕಾರ್ಖಾನೆಯ ಬಗ್ಗೆ ಬಂಗಾರದಂಥ ಮಾತುಗಳನ್ನು ಆಡದೆ ಕಬ್ಬಿಣದಂಥ ಮಾತುಗಳನ್ನು ಆಡಿದ್ದಾರೆ. ಅವರು ಆರೋಪಣೆ ಮಾಡಬೇಕು ಎನ್ನುವ ಆವೇಶದಲ್ಲಿ ಅಂಕಿ ಅಂಶಗಳನ್ನು ಸಭೆಯ ಮುಂದೆ ಇಟ್ಟರು. ಕೋಕ್ ಕೋಲ್ ಬಗ್ಗೆ ಕೊಟ್ಟಿರತಕ್ಕ ಕಮಿಷನ್ ವಿಚಾರದಲ್ಲಿ

10-00 A.M.

7 ಲಕ್ಷದ 60 ಸಾವಿರ ರೂಪಾಯಿ ಕಮಿಷನ್ ಕೊಟ್ಟಿದ್ದಾರೆ ಎಂದು ಏನು ಹೇಳಿದ್ದಾರೆ ಅದು 4—5 ವರ್ಷಗಳಲ್ಲಿ ಕೊಟ್ಟಿರತಕ್ಕಂಥದ್ದು. ಸಭೆಯಲ್ಲಿ ಬಂದಿರತಕ್ಕ ಟೀಕೆಗಳನ್ನು ಗಮನದಲ್ಲಿ ಇಟ್ಟುಕೊಂಡು ಭದ್ರಾವತಿ ಕಾರ್ಖಾನೆಗೆ ಬೇಕಾದ ಕೋಕ್ ಮತ್ತು ಕೋಲ್ ಇವುಗಳೆಲ್ಲವನ್ನೂ ಮಧ್ಯವರ್ತಿ ಸಹಾಯವನ್ನು ಉಪಯೋಗಿಸದೆ ನಾವೇ ನೇರವಾಗಿ ಕೇಂದ್ರ ಸರ್ಕಾರದ ಸಹಾಯದಿಂದ ಕೋಕ್ ಮತ್ತು ಕೋಲ್ ಮೈನ್ಸ್‌ನಿಂದ ತೆಗೆದುಕೊಂಡಿದ್ದೇವೆ. ಆದುದರಿಂದ ಕೋಲ್ ಮತ್ತು ಕೋಕ್ ವಿಚಾರದಲ್ಲಿ ಮಧ್ಯವರ್ತಿಗಳು ಬರತಕ್ಕ ಅವಕಾಶವಿಲ್ಲವೆಂಬುದನ್ನು ಸಭೆ ಗಮನಿಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಇನ್ನು ಸೇಲ್ಸ್ ವಿಚಾರದಲ್ಲಿ, ಕಮಿಷನ್ ಕೊಡುವ ಬಗ್ಗೆ ಸಭೆಯಲ್ಲಿ ಟೀಕೆಗಳು ಬಂದಿವೆ. ಆಗ ನಾನು ಹೇಳಿಕೆಯನ್ನು ಕೊಟ್ಟೆ. [ಮೈಸೂರು] ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಏನು ಇದೆ ಆ ಸಂಸ್ಥೆಯ ಮೂಲಕ ಕಬ್ಬಿಣದ ಎಲ್ಲಾ ಪದಾರ್ಥಗಳನ್ನು ಮಾರುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಈ ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಭದ್ರಾವತಿ ಕಾರ್ಖಾನೆಯ ಏಜೆನ್ಸಿ ಲಿಸ್ಟ್‌ನಲ್ಲಿ ಇದೆ. ಅದನ್ನು ಈ ದಿವಸ ಜೀವಂತ ಮಾಡಬೇಕು ಎಂದು ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ. ಇನ್ನು ಮುಂದೆ ಬಹುಶಃ ನನ್ನ ಕಲ್ಪನೆಯಲ್ಲಿ, ನನ್ನ ಯೋಚನೆಯಲ್ಲಿ, ಮೈಸೂರು ಸೇಲ್ಸ್‌ಗೆ ಇಂಟರ್‌ನ್ಯಾಷನಲ್, ಸೇಲ್ಸ್ ಪ್ರೊಮೋಷನ್ ವರ್ಕ್‌ನಲ್ಲಿ ಆದಷ್ಟು ಪ್ರಮುಖವಾದ ಪ್ರಯತ್ನವನ್ನು ಮಾಡುತ್ತದೆ ಎಂದು ತಿಳಿದುಕೊಂಡಿದ್ದೇನೆ. ಆ ಉದ್ದೇಶದಿಂದ ಈ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಭದ್ರಾವತಿಯ ರೈಯಾನಲ್ ಆಫೀಸ್‌ಗಳನ್ನು ಮದ್ರಾಸ್, ಬಾಂಬೆ, ಕಲ್ಕತ್ತದಲ್ಲಿ ತೆಗೆಯಲು ಸಂಪೂರ್ಣ ಸಜ್ಜು ಮಾಡಬೇಕು, ಮತ್ತು ಅವಶ್ಯವಾಗಿ ಅಲ್ಲಿ ಆಗ ಬೇಕು ಎಂದು ಕಂಡು ಬಂದರೆ ಇನ್ನು ಕೆಲವು ಜನ ಚುರುಕು ಆಗಿರತಕ್ಕ ಯುವಕ ಇಂಜಿನಿಯರ್‌ಗಳನ್ನು ರಿಕ್ರೂಟ್ ಮಾಡಿಕೊಂಡು ಸೇಲ್ಸ್ ಪ್ರೊಮೋಷನ್ ವರ್ಕ್ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಬಹುಷಃ ಈ ಸದನ ಅದಕ್ಕೆ ಒಪ್ಪುತ್ತದೆ ಎಂದು ನಾನು ಭಾವನೆ ಮಾಡುತ್ತೇನೆ. ಈ ಭದ್ರಾವತಿ ಬಗ್ಗೆ ನಾನಾ ವಿಧವಾದಂಥ ಟೀಕೆ ಟಿಪ್ಪಣಿಗಳು ಪತ್ರಿಕೆಯಲ್ಲಿ ಬಂದಿದೆ. ಈ ಶಾಸನ ಸಭೆಯಲ್ಲಿಯೂ ಬಂದಿದೆ ಮತ್ತು ಹೊರಗಡೆ

(ಶ್ರೀ ಎಸ್. ಎಂ. ಕೃಷ್ಣ)

ಕೂಡ ಬಂದಿದೆ. ಇವೆಲ್ಲ ಸಲಹೆಗಳನ್ನು ಕೂಡ ಸುದೀರ್ಘವಾಗಿ ಪರಿಶೀಲಿಸುತ್ತಿದ್ದೇವೆ. ಬಹುಶಃ ಈ ಸೆಷನ್ ಅಡ್ಜರ್ನ್ ಆಗುವ ಹೊತ್ತಿಗೆ ಸರ್ಕಾರದ ನಿಲುವನ್ನು, ಸರ್ಕಾರದ ಧೋರಣೆಯನ್ನು ಸ್ಪಷ್ಟಪಡಿಸುವುದಕ್ಕೆ ಈ ಸಭೆಯಲ್ಲಿ ಕಾಲಾವಕಾಶವನ್ನು ಕೇಳುತ್ತೇನೆ. ಒಂದು ಮಾತ್ರ ಶ್ರೀಮಾನ್ ದೇವೇಗೌಡರು ನಿನ್ನೆ ಪ್ರಸ್ತಾಪ ಮಾಡಿದರು. ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ ಅವರು ಏನನ್ನು ನೋಡುತ್ತಿದ್ದಾರೆ ಎಂದು. ನಾನು ಆ ಬಗ್ಗೆ ಹೇಳಿಕೆ ಕೊಡುವಾಗ ಅವುಗಳೆಲ್ಲವನ್ನು ನಾನು ನಮೂದಿಸುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛೆಪಡುತ್ತೇನೆ. ಇನ್ನು ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಈ ಸದನದ ಅಪ್ಪಣೆ ಕೇಳುತ್ತಿದ್ದೇನೆ. ಒಂದನೆಯದು ನಮ್ಮ ಬಳ್ಳಾರಿ ವಿಜಯನಗರ ಉಕ್ಕಿನ ಕಾರ್ಖಾನೆ, ಎರಡನೆಯದು, ಮಂಗಳೂರು ಪರ್ಟಿಲೈಸರ್ ಮತ್ತು ಕುದುರೆಮುಖ ಐರನ್ ಓರ್ ಯೋಜನೆ ಇದರ ಜೊತೆಗೆ ಅಗತ್ಯವಾಗಿ ನಮ್ಮ ರಾಜ್ಯಕ್ಕೆ ಆಗಬೇಕಾದುದು ಆಯಿಲ್ ರಿಫೈನರಿ. ಪೆಟ್ರೋಲ್ ಕೆಮಿಕಲ್ ಕಾಂಪ್ಲೆಕ್ಸನ್ನು ನಾವು ಆಲೋಚನೆ ಮಾಡುತ್ತಿದ್ದೇವೆ. ಈ ಪೆಟ್ರೋ ಕೆಮಿಕಲ್ ಕಾಂಪ್ಲೆಕ್ಸ್ ಸಂಪೂರ್ಣವಾಗಿ ಆಗಬೇಕಾದರೆ ನಮ್ಮ ರಾಜ್ಯಕ್ಕೆ ಅತ್ಯವಶ್ಯವಾಗಿ ಆಯಿಲ್ ರಿಫೈನರಿ ಆಗಲೇಬೇಕು. ಕೇಂದ್ರ ಸರ್ಕಾರದ ಮುಂದೆ ಆಗಿಂದಾಗ್ಗೆ ನಮ್ಮ ಬೇಡಿಕೆಯನ್ನು ಮಂಡಿಸುತ್ತಿದ್ದೇವೆ. ನಮ್ಮ ರಾಜ್ಯದ ಸಂಸತ್ ಸದಸ್ಯರು ಎಲ್ಲರೂ ಕೂಡ ಕೇಂದ್ರ ಸರ್ಕಾರದ ಮೇಲೆ ಸಾಕಾದಷ್ಟು ಪ್ರಭಾವವನ್ನು ಇದರ ಬಗ್ಗೆ ಬೀರುತ್ತಿದ್ದಾರೆ ಮತ್ತು ಮುಖ್ಯಮಂತ್ರಿಗಳು ಇದರ ಬಗ್ಗೆ ಸಾಕಷ್ಟು ಆಸಕ್ತಿ ವಹಿಸುತ್ತಿದ್ದಾರೆ. ನಮ್ಮ ರಾಜ್ಯಕ್ಕೆ ಅಗತ್ಯವಾಗಿ ಆಯಿಲ್ ರಿಫೈನರಿ ಮಾಡಿಕೊಡಬೇಕು ಎಂದು ಕೇಂದ್ರ ಸರ್ಕಾರವನ್ನು ನಾವು ಕೇಳುತ್ತಿದ್ದೇವೆ. ನಮ್ಮ ಸರ್ಕಾರದ ಉದ್ಯಮಗಳಲ್ಲಿ ಕಾರ್ಮಿಕರಿಗೆ ಪ್ರಾತಿನಿಧ್ಯವನ್ನು ಕೊಡಬೇಕು ಎನ್ನತಕ್ಕ ಒಂದು ತತ್ವ ಏನು ಇದೆ ಆ ತತ್ವವನ್ನು ಭಾವನಾತ್ಮಕವಾಗಿ ಈ ಕಡೆ ಕೂತಿರತಕ್ಕ ನಾವು ಸಂಪೂರ್ಣವಾಗಿ ಒಪ್ಪಿರತಕ್ಕ ತತ್ವ. ಆದರೆ ಒಂದು ವಿಚಾರವನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಈ ಸರ್ಕಾರಿ ಉದ್ಯಮಗಳಲ್ಲಿ ಹಾಕಿರತಕ್ಕ ಬಂಡವಾಳ ಯಾರದು? ಇಲ್ಲಿ ಹಾಕಿರತಕ್ಕ ಕೋಟ್ಯಾನು ಕೋಟಿ ರೂಪಾಯಿ ಬಂಡವಾಳ ಜನಗಳು ಕೊಟ್ಟಿರತಕ್ಕ ತೆರಿಗೆ. ಆದುದರಿಂದ they are in a way participating indirectly. They have elected you and me. Are we not answerable to the people? You are answerable. I am sure I am also answerable to the people. Equity capital is participation. ತಾತ್ವಿಕವಾಗಿ ಆಗಲೇ ಪಾರ್ಟಿಸಿಪೇಟ್ ಮಾಡಿದ್ದೇವೆ. ಇದು ಒಂದು ಮುಖ. ಇನ್ನೊಂದು ಮುಖ, ಎಂ. ಎಸ್. ಕೃಷ್ಣನ್ ಅವರು ಲೇಬರ್ ಲೀಡರ್, ಶ್ರೀ ವಾಟಾಳ್ ನಾಗರಾಜ್ ಅವರು ಲೀಡರ್ ಇವರಿಬ್ಬರಿಗೆ ಕೇಳುತ್ತಿದ್ದೇನೆ, ಕೋಣಂದೂರು ಲಿಂಗಪ್ಪನವರಿಗೂ ಕೇಳುತ್ತಿದ್ದೇನೆ, ನನ್ನ ಇರಾದೆ ಮತ್ತು ಸರ್ಕಾರದ ಇರಾದೆ ಲೇಬರ್ ರೆಪ್ರೆಸೆಂಟೇಷನ್ ಅನ್ನು ಎನ್.ಜಿ.ಇ.ಎಫ್. ಮ್ಯಾನೇಜ್‌ಮೆಂಟ್‌ನಲ್ಲಿ ಕೊಡಬೇಕು ಎನ್ನತಕ್ಕದ್ದು. ಯಾರನ್ನು ಲೇಬರ್ ರೆಪ್ರೆಸೆಂಟೇಟಿವ್ ಆಗಿ ಮಾಡಬೇಕು? ಅದನ್ನು ತೀರ್ಮಾನ ಮಾಡತಕ್ಕವರು ಯಾರ್‍ಯಾರು? ಎನ್.ಜಿ.ಇ.ಎಫ್. ನಲ್ಲಿ 2 ಯೂನಿಯನ್‌ಗಳು ಇವೆ.

ಶ್ರೀ ಡಿ. ದೇವರಾಜ್ ಅರಸ್.—ನೀವು ಹೇಳಿದವರಿಗೆ ಮಾಡಿಕೊಂಡು ಹೋದರೆ ಆಯಿತು?

ಶ್ರೀ ಎಂ. ಎಸ್. ಕೃಷ್ಣನ್.—ಕೆಲಸಗಾರರು ಯಾರನ್ನೂ ತೀರ್ಮಾನ ಮಾಡುತ್ತಾರೋ ಅವರಿಗೆ ಕೊಡಿ.

ಶ್ರೀ ಎಸ್. ಎಂ. ಕೃಷ್ಣ.—ಶ್ರೀಮಾನ್ ಕೃಷ್ಣನ್‌ರವರು ಹೇಳಿದಮೇಲೆ ಜಾಯಿಂಟ್ ನೆಗೋಸಿಯೇಷನ್ ಸ್ಟೀರ್ ಕಮಿಟಿ ಇಲ್ಲಿ ಬಂದಿತ್ತು. ಕೃಷ್ಣನ್‌ರವರು ಪ್ರತಿನಿಧಿಸತಕ್ಕ ಕಾರ್ಮಿಕರ ಮಹಾನಾಯಕರು ಬಂದಿದ್ದರು. ಅವರ ಜೊತೆಗೆ ಪ್ರಸ್ತಾಪ ಮಾಡಿದೆ. ನಾನು ಸಮಾಜವಾದದಲ್ಲಿ ನಂಬಿಕೆ ಇರತಕ್ಕಂಥವನು. ಸರ್ಕಾರಿ ಉದ್ಯಮಗಳಲ್ಲಿ ಕಾರ್ಮಿಕರಿಗೆ ಪ್ರಾತಿನಿಧ್ಯವನ್ನು ಕೊಡಬೇಕು ಎಂದು ಅಚಲವಾಗಿ ಅದಕ್ಕೆ ಕಟ್ಟುಬಿದ್ದಿರುವವನು. ಪ್ರಾತಿನಿಧ್ಯ ಹೇಗೆ ದೊರಕಿಸಿಕೊಡಬೇಕು, ಇದರ ಬಗ್ಗೆ ತಿಳುವಳಿಕೆ ಕೊಡಬೇಕೆಂದು ಅವರನ್ನು ಕೇಳಿದಾಗ ಆ ಪ್ರಶ್ನೆಗೆ ಅವರಿಂದ ಉತ್ತರ ಕಂಡುಬಂದಿಲ್ಲ. 3 ಯೂನಿಯನ್‌ಗಳು ಏನು ಇವೆ, ಐ.ಎನ್.ಟಿ.ಯು.ಸಿ, ಎ.ಐ.ಟಿ.ಯು.ಸಿ, ಎಚ್.ಎಂ.ಎಸ್. ಅವುಗಳ ಪ್ರತಿನಿಧಿಗಳು ಅದರ ಬಗ್ಗೆ ಏನೂ ಸ್ಪಷ್ಟವಾಗಿ ಹೇಳಿಲ್ಲ. ಆದುದರಿಂದ ಕಾರ್ಮಿಕ ನಾಯಕರುಗಳಿಗೆ ಕಾರ್ಮಿಕ ಸಂಘಸಂಸ್ಥೆಗಳು ಇದರ ಬಗ್ಗೆ ಆಳವಾಗಿ ಯೋಚನೆ ಮಾಡಿ ಕಾರ್ಮಿಕರ ಪ್ರತಿನಿಧಿಗಳನ್ನು ಮ್ಯಾನೇಜ್‌ಮೆಂಟ್ ಬೋರ್ಡಿನಲ್ಲಿ ನೇಮಿಸುವ ಸೂತ್ರವನ್ನು

ಕೊಟ್ಟರೆ ಸರ್ಕಾರ ಅದರ ಬಗ್ಗೆ ತೀವ್ರವಾಗಿ ಪರಿಶೀಲನೆಮಾಡಿ ಕಾರ್ಯವನ್ನು ಮಾಡುತ್ತದೆ ಎಂದು ನಾನು ಭರವಸೆಯನ್ನು ಕೊಡುತ್ತೇನೆ.

ನಮ್ಮ ದೇಶದಲ್ಲಿ ಅತ್ಯಂತ ಹಿರಿದಾದ ಸಮಸ್ಯೆ ಏನು ಎಂದರೆ ನಿರುದ್ಯೋಗ ಸಮಸ್ಯೆ. ಈ ಪೆಡಂಭೂತ ನಿರುದ್ಯೋಗ ಸಮಸ್ಯೆಯನ್ನು ಸರ್ಕಾರದವರು, ಸಾರ್ವಜನಿಕರು ಮತ್ತು ಸದನ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ನಾವು ಯಾವಾಗ ಈ ಸಮಸ್ಯೆಯನ್ನು ಸಂಪೂರ್ಣ ವಾಗಿ ಪರಿಹಾರ ಮಾಡುತ್ತೇವೆ ಎನ್ನತಕ್ಕ ಧೈರ್ಯ ಇಲ್ಲದೆ ಹೋದರೂ ಈ ಸಮಸ್ಯೆ ಪರಿಹಾರ ಮಾಡುವುದಕ್ಕೆ ಇಲಾಖೆಗಳು ತಮ್ಮ ಕೆಲಸಕಾರ್ಯಗಳನ್ನು ಮಾಡಬೇಕಾಗಿವೆ. ಅದಕ್ಕೋಸ್ಕರ ನಾನು ಎರಡು ಸ್ಕೀಂಗಳನ್ನು ಈ ಸಂದರ್ಭದಲ್ಲಿ, ನಮ್ಮ ಇಂಡಸ್ಟ್ರಿ ಡಿಪಾರ್ಟಮೆಂಟಿಗೆ ಸಂಬಂಧಪಟ್ಟ ಹಾಗೆ ಸಭೆಯ ಮುಂದೆ ಮಂಡಿಸಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಒಂದು, ನಮ್ಮ ಸಣ್ಣ ಉದ್ಯಮಗಳು ಏನಿವೆ ಅವು ಬೆಳೆಯುತ್ತ ಇರಬೇಕು, ಸಣ್ಣ ಉದ್ಯಮಗಳು ನಮ್ಮ ರಾಜ್ಯದಲ್ಲಿ ಹೆಚ್ಚು ಪ್ರಮಾಣದಲ್ಲಿ ಬೆಳೆಯಬೇಕು ಎನ್ನುವುದನ್ನು ನಾವೆಲ್ಲರೂ ಒಪ್ಪಬೇಕು. ರಾಜ್ಯದಲ್ಲಿ ಇಂದು ಹತ್ತು ಸಾವಿರ ಸ್ಮಾಲ್ ಇಂಡಸ್ಟ್ರೀಸ್‌ಗಳು ಇರಬೇಕೆಂದು ಒಂದು ಘಟಕಮಾಡ ಲಾಗಿದೆ. ಇದರಲ್ಲಿ ಸುಮಾರು ಎರಡು ಸಾವಿರ ಇಂಡಸ್ಟ್ರಿಗಳು ಇನ್ನೂ ರಿಜಿಸ್ಟರು ಆಗದೆ ಇರತಕ್ಕಂತಹವು ಕೊನೆಯ ಪಕ್ಷ ಮುಂದಿನ ಐದನೇ ಯೋಜನೆ ಅವಧಿಯೊಳಗೆ ಒಂದೊಂದು ಜಿಲ್ಲೆಯಲ್ಲೂ ಒಂದುನೂರು ಸಣ್ಣ ಕೈಗಾರಿಕೆ ಘಟಕಗಳು ಇರಬೇಕು, ಅದರಂತೆ ಪ್ರಾರಂಭ ಮಾಡಬೇಕೆಂದೂ ಯೋಚನೆ ಇದೆ. ಇವೊತ್ತು ನಮಗೆ ಬಂದಿರುವ ತೊಂದರೆ ಏನೆಂದರೆ ನಮ್ಮ ಸದನದ ಸದಸ್ಯರು ಹಾಗೂ ನನ್ನ ಸ್ನೇಹಿತರೂ ಆದ ಶ್ರೀ ತಾವರೆಯವರು ನನಲ್ಲಿ ಬಂದು ಒಂದು ಮಾತು ಹೇಳಿದರು. ನಾನು ರಾಜಕೀಯದಲ್ಲಿ ಇದ್ದರೂ ಅದನ್ನು ಬಿಟ್ಟು ನಾನೇ ಸ್ವಂತವಾದ ಒಂದು ಕೈಗಾರಿಕೆ ಉದ್ಯಮ ಹಾಕಬೇಕೆಂದು ಇದ್ದೇನೆ. ಇದಕ್ಕಾಗಿ ಯಾವ ರೀತಿಯಾದ ಕೈಗಾರಿಕೆಯನ್ನು ಸರಕಾರದವರು ಸಲಹೆ ಮಾಡುತ್ತಾರೆ ಎಂದು ನನ್ನನ್ನು ಕೇಳಿದರು. ನನಗೆ ತಿಳಿದಮಟ್ಟಿಗೆ ಎಲ್ಲಿ ಯಾವ ಕೈಗಾರಿಕೆ ಮಾಡುವುದಕ್ಕೆ ಸಾಧ್ಯ ಎನ್ನುವುದಕ್ಕೆ ಉತ್ತರ ಕೊಡುವುದು ಆಗಲಿಲ್ಲ. ಏಕೆಂದರೆ ನಮ್ಮ ಇಲಾಖೆಯಲ್ಲಿ ಯಾವ ಯಾವ ರೀತಿಯ ಕೈಗಾರಿಕೆಗಳನ್ನು ಮಾಡಬೇಕು ಎನ್ನುವುದಕ್ಕೆ ಸಾಕಾದಷ್ಟು ಅಂಕೆ ಅಂಶಗಳು ಇಲ್ಲ. ಜೊತೆಗೆ ಸಣ್ಣ ಕೈಗಾರಿಕೆಗಳ ಬಗ್ಗೆ ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಲು ನಮ್ಮಲ್ಲಿ ಸಾಕಾದಷ್ಟು ಎಕ್ಸ್‌ಪರ್ಟಗಳು ಇಲ್ಲ. ಸಾಕಾದಷ್ಟು ವ್ಯವಸ್ಥೆ ಮಾಡಲು ಸರಿಯಾದ ಸವಲತ್ತುಗಳೂ ಇಲ್ಲ. ಆದುದರಿಂದ ಸರಕಾರದವರು ಯಾವುದಾದರೂ ಒಂದು ಇಲಾಖೆ ರಿಪೋರ್ಟ ಬೇಕಾದರೆ ಮೊದಲು ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ಹೋಗಬೇಕು. ಅವರಕಡೆ ಇಲ್ಲ ಎಂದರೆ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ಹೋಗಬೇಕು. ಇಲ್ಲವೇ ಸ್ಮಾಲ್ ಇಂಡಸ್ಟ್ರೀಸ್ ಸರ್ವಿಸ್ ಇನ್‌ಸ್ಟಿಟ್ಯೂಟ್ ಇವರ ಕಡೆ ಹೋಗಬೇಕಾಗುತ್ತದೆ. ಈ ರೀತಿ ಗರುಡಗಂಭ ಸುತ್ತುವುದನ್ನು ತಪ್ಪಿಸಬೇಕೆಂದು ಸರಕಾರ ಇದಕ್ಕೆ ವಿರಾಮ ಹಾಕಿದೆ. ಇನ್ನು ಮುಂದೆ ರಾಜ್ಯದಲ್ಲಿ ಇರುವ ಸ್ಟೇಟ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್, ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೋರೇಷನ್, ಮತ್ತು ಇಂಡಸ್ಟ್ರಿಯಲ್ ಇನ್‌ಸ್ಟಿಟ್ಯೂಟು ಇವು ಮೂರು ಇಲಾಖೆಗಳನ್ನು ಸಮನ್ವಯಗೊಳಿಸಿ ಒಂದೇ ಸ್ಥಳದಲ್ಲಿ ಪ್ರಾಜೆಕ್ಟ್ ರಿಪೋರ್ಟ ದೊರೆಯುವಂತೆ ಏರ್ಪಾಡು ಮಾಡಬೇಕೆಂದು ಸರಕಾರ ಉದ್ದೇಶ ಮಾಡಿದೆ. ಮತ್ತು ತಾತ್ವಿಕವಾಗಿ ಸರಕಾರ ಇದನ್ನು ಮಾಡಬಹುದು ಎಂದು ನಿರ್ಧಾರವನ್ನು ತೆಗೆದುಕೊಂಡಿದೆ. ಇದಕ್ಕಾಗಿ ನಮಗೆ ಒಳ್ಳೆಯ ಟೆಕ್ನಿಷಿಯನ್‌ಗಳು, ಎಕ್ಸ್‌ಪರ್ಟಗಳು ಎಂದರೆ Experts in the field of Chemical Industries, Experts in the field of Electronic Industries, Experts in the field of Engineering I dustries, and Experts in other fields ಬೇಕಾಗಿದ್ದಾರೆ.

ನಮ್ಮ ಇಲಾಖೆಯಲ್ಲಿ ರಿಕ್ರೂಟು ಮಾಡಿಕೊಂಡು ಯಾವಯಾವ ಭಾಗದಲ್ಲಿ ಸಣ್ಣ ಕೈಗಾರಿಕೆ ಗಳನ್ನು ಸ್ಥಾಪನೆ ಮಾಡಬೇಕೆಂದು ಸರಕಾರ ಇಷ್ಟಪಡುತ್ತದೋ ಅಂತಹ ಕಡೆಗಳಲ್ಲಿ ಒಂದು ಪ್ರಾಜೆಕ್ಟು ರಿಪೋರ್ಟನ್ನು ತಯಾರು ಮಾಡಿ ಅದನ್ನು ಮುಂದೆ ಕೈಗಾರಿಕೆಮಾಡಬೇಕೆಂದು ಬರುವ ಪ್ರಾಸ್‌ಪೆಕ್ಟೀವ್ ಎಂಟರ್‌ಪ್ರನರ್ಸ್‌ಗಳಿಗೆ ಕೊಡಬೇಕೆಂದು ಸರಕಾರ ಉದ್ದೇಶಿಸಿದೆ. ಮತ್ತು ಇದರ ಬಗ್ಗೆ ಸರಕಾರ ತೀರ್ಮಾನ ಮಾಡಿದೆ. ಇಂತಹ ಎಕ್ಸ್‌ಪರ್ಟಗಳನ್ನು ಪರ್ಮನೆಂಟಾಗಿ ತೆಗೆದು ಕೊಳ್ಳಬೇಕೆಂದೇನೂ ಇಲ್ಲ. We can buy their services on contractual basis for a period of three or four years. They are known to be acknowledged experts in their own field. In india there is no dearth for Experts. ಈಗ ಇಂತಹ ಎಕ್ಸ್‌ಪರ್ಟ ಇಂಜಿನಿಯರುಗಳು ಪರದೇಶಗಳಲ್ಲಿ ಎಂದರೆ, ಅಮೇರಿಕಾ, ಕ್ಯಾನಡಾ

(ಶ್ರೀ ಎಸ್. ಎಂ. ಕೃಷ್ಣ)

ಆಸ್ಟ್ರೇಲಿಯಾ ಹಾಗೂ ರಷ್ಯಾ ದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಹೊರದೇಶಗಳಿಗೆ ಹೋಗಿದ್ದಾಗ ಇಂತಹ ಎಕ್ಸ್‌ಪರ್ಟುಗಳನ್ನು ನೋಡಿದಾಗ ಅವರೆಲ್ಲಾ ನನಗೆ ಆಗ ತಿಳಿಸಿದರು, ನಾವು ಅಲ್ಲಿ 8000 ಡಾಲರುಗಳು ಹಾಗೂ 200 ಪೌಂಡುಗಳಷ್ಟು ವೇತನವನ್ನು ತಿಂಗಳಿಗೆ ಪಡೆಯುತ್ತಿದ್ದೇವೆ. ನಿಮ್ಮ ರಾಜ್ಯದಲ್ಲಿ ನಮ್ಮನ್ನು ಉಪಯೋಗಿಸಿಕೊಳ್ಳಲಾಗಲಿಲ್ಲ. ಪರದೇಶಗಳವರು ನಮ್ಮನ್ನು ಇಲ್ಲಿ ತೆಗೆದುಕೊಂಡಿದ್ದಾರೆ. ಈಗಲೂ ನಿಮ್ಮ ಕೈಗಾರಿಕೆಗಳಲ್ಲಿ ನಮಗೆ ಅವಕಾಶ ಕೊಟ್ಟರೆ ನಾವು ವಾಪಸು ಬರಲು ತಯಾರಾಗಿದ್ದೇವೆಂದೂ ಹೇಳಿದರು ಮತ್ತು ಅಂತಹವರನ್ನು ನಾವು ಇಲ್ಲಿಗೆ ಕರೆಸಿದರೆ ಅವರೂ ಬರಲು ಇಷ್ಟಪಡುತ್ತಾರೆ.

ನಮ್ಮ ದೇಶದಲ್ಲಿರುವ ದೊಡ್ಡ ಸ್ಟೀಲು ಕಾರ್ಖಾನೆಗಳಲ್ಲಿ ಕೂಡ ನಮ್ಮ ರಾಜ್ಯದ ಎಕ್ಸ್‌ಪರ್ಟುಗಳು ಕೆಲಸಮಾಡುತ್ತಿದ್ದಾರೆ. ಹಿಂದೆ ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸ ಮಾಡಿದವರು ಇಂದು ರೂರ್‌ಕೆಲಾ ಭಿಲ್ಲೈ ಹಾಗೂ ದುರ್ಗಾಪುರ ಸ್ಟೀಲ್ ಪ್ಲಾಂಟುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲ ನಮ್ಮ ರಾಜ್ಯದ ಕನ್ನಡಿಗರು ಪಬ್ಲಿಕ್ ಅಕೌಂಟು ಸಮಿತಿಯ ಚೇರ್ಮನ್ನರಾದ ಮಾನ್ಯ ಶ್ರೀ ದೇವೇಗೌಡರವರು ಹಾಗೂ ಶ್ರೀ ಕೆ. ಹೆಚ್. ರಂಗನಾಥರವರೂ ಕೂಡ ಈಚೆಗೆ ಅಲ್ಲಿಗೆ ಹೋಗಿ ಅಲ್ಲಿ ನಮ್ಮ ಜನ ಕೆಲಸ ಮಾಡುತ್ತಿರುವುದನ್ನು ನೋಡಿಕೊಂಡು ಬಂದಿದ್ದಾರೆ. ಇವರೆಲ್ಲಾ ನಮ್ಮ ರಾಜ್ಯಕ್ಕೆ ಬರಲು ಇಷ್ಟವುಳ್ಳವರಾಗಿದ್ದಾರೆ.

All of them have expressed unconditional desire to come back to Mysore if we only provide an opportunity to them. I am only hoping that this giant Vijayanagar Steel complex will provide the needed opportunity for all Engineers to come back to Mysore State. ಇದರ ಪ್ರಸ್ತಾವನೆ ಮಾಡತಕ್ಕ ಕಾಲದಲ್ಲಿ ನಮ್ಮ ರಾಜ್ಯ ಒಂದು ಅದೃಷ್ಟವಂತ ರಾಜ್ಯ ಎಂದು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲೇ ಕಬ್ಬಿಣದ ಕಾರ್ಖಾನೆ ಇರುವುದು. ಇದಕ್ಕೆ ಹೊಂದಿಕೊಂಡಂತೆ ಈಗ ವಿಜಯನಗರದ ಉಕ್ಕಿನ ಕಾರ್ಖಾನೆಯೂ ಬರುತ್ತಿದೆ. ಉಕ್ಕಿನ ಕೈಗಾರಿಕೆಯ ಮಟ್ಟಿಗೆ ಹೇಳಬೇಕಾದರೆ ಈಗ ಆಂಧ್ರದಲ್ಲಿರುವ ವಿಶಾಖಪಟ್ಟಣದಲ್ಲಿ ಉಕ್ಕಿನ ಕಾರ್ಖಾನೆ ಇಲ್ಲ, ತಮಿಳುನಾಡಿನಲ್ಲಿರುವ ಸೇಲಂನಲ್ಲಿ ಉಕ್ಕಿನ ಕಾರ್ಖಾನೆ ಇಲ್ಲ. ನಮ್ಮ ರಾಜ್ಯ ಒಂದರಲ್ಲೇ ಇಂತಹ ಒಂದು ಉಕ್ಕಿನ ಕಾರ್ಖಾನೆ ಭದ್ರಾವತಿಯಲ್ಲಿದೆ. ಮುಂದೆ ನಮ್ಮ ರಾಜ್ಯದಲ್ಲಿ ವಿಜಯನಗರದ ಉಕ್ಕಿನ ಕಾರ್ಖಾನೆ ಆರಂಭವಾದಾಗ ನಮಗೆ ಸುಮಾರು ಇಪ್ಪತ್ತೈದು ಸಹಸ್ರ ಜನ ಇಂಜನೀಯರುಗಳು ಹಾಗೂ ಎಕ್ಸ್‌ಪರ್ಟುಗಳು ಹಾಗೂ ಇಂಜನೀಯರಿಂಗು ಗ್ರಾಜುಯೇಟುಗಳು ಬೇಕಾಗುತ್ತಾರೆ ಮತ್ತು ಡಿಪ್ಲೋಮಾ ಹೋಲ್ಡರುಗಳು ಬೇಕಾಗುತ್ತಾರೆ ಹಾಗೂ ಇಂಡಸ್ಟ್ರಿಯಲ್ ಟ್ರೇನಿಂಗ್ ಸರ್ಟಿಫಿಕೇಟು ಪಡೆದಿರುವಂತಹ ಯುವಕರು ಬೇಕಾಗುತ್ತಾರೆ. ಇವರನ್ನೆಲ್ಲಾ ನಾವು ರೆಕ್ರೂಟು ಮಾಡುವಾಗ ಯಾವ ರೀತಿ ನಾವು ಮಾಡಬೇಕಾಗುತ್ತೆ ಎಂದರೆ ಎರಡು ಅರ್ಜಿಗಳು ಸರಕಾರಕ್ಕೆ ಬಂದಾಗ ಒಂದು ಟ್ರೇನ್ಡ್ ಆಗಿರುವವರದೂ ಬರುತ್ತದೆ ಮತ್ತು ಅನ್‌ಟ್ರೇನ್ಡ್ ಆಗಿರವವರದೂ ಬರುತ್ತದೆ. ಇದರಲ್ಲಿ ನಮ್ಮ ಪಾಲಿಸಿ ಪ್ರಕಾರ ಮೊದಲಿಗೆ ಟ್ರೇನಿಂಗು ಅರ್ಹತೆ ಪಡೆದಿರುವವರನ್ನು ಮೊದಲು ರಿಕ್ರೂಟು ಮಾಡಿ ಆ ನಂತರ ಅನ್‌ಟ್ರೇನ್ಡ್ ಆಗಿರುವವರನ್ನು ತೆಗೆದುಕೊಳ್ಳುತ್ತೇವೆ. ಟ್ರೇನಿಂಗ್ ಆಗಿರುವವರಿಗೆ ಮೊದಲನೇ ಪ್ರಾಧಾನ್ಯತೆ ಕೊಡತಕ್ಕದ್ದು. ಮೈಸೂರಿನಲ್ಲಿರುವ ಭದ್ರಾವತಿ ಉಕ್ಕಿನ ಕಾರ್ಖಾನೆಯಲ್ಲಿ ವಿಜಯನಗರದ ಉಕ್ಕಿನ ಕಾರ್ಖಾನೆಗೆ ಬೇಕಾಗತಕ್ಕ ಇಂಜನೀಯರುಗಳು, ಡಿಪ್ಲೊಮಾ ಹೋಲ್ಡರುಗಳು ಇವರಿಗೆ ಸರಿಯಾದ ಒಂದು ತರಬೇತಿ ಕೊಟ್ಟು ಅವರನ್ನು ವಿಜಯನಗರದಲ್ಲಿರುವ ಉಕ್ಕಿನ ಕಾರ್ಖಾನೆಗೆ ತೆಗೆದುಕೊಳ್ಳುವ ಪ್ರಯತ್ನ ಮಾಡಬೇಕೆಂದು ಇದೆ. ಇದಕ್ಕಾಗಿ ಸರಕಾರದವರು ಒಂದು ಫೀಜಬಿಲಿಟಿ ರಿಪೋರ್ಟನ್ನು ಇನ್ನೆರಡು ವರ್ಷದೊಳಗೆ ಮಾಡಬೇಕೆಂದು ಇದ್ದಾರೆ. ಈ ರಿಪೋರ್ಟು ಮಾಡಿದ ಮೇಲೆ ಪ್ರಾಜೆಕ್ಟ್ ರಿಪೋರ್ಟು ಮಾಡಬೇಕಾಗುತ್ತೆ. ಒಂದು ಪ್ರಾಜೆಕ್ಟ್ ರಿಪೋರ್ಟು ಮಾಡಲು ಸುಮಾರು 12-18 ತಿಂಗಳ ಕಾಲ ಬೇಕಾಗುತ್ತದೆ. ಇವನ್ನೆಲ್ಲಾ ತಯಾರು ಮಾಡಿದ ಮೇಲೆ ಈ ಕಾರ್ಖಾನೆ ಜನರನ್ನು ರೆಕ್ರೂಟು ಮಾಡುವ ಕೆಲಸ ಆರಂಭವಾಗುತ್ತದೆ. ರೆಕ್ರೂಟುಮೆಂಟು ಸ್ಟೇಜಿನಲ್ಲಿ ಮೈಸೂರು ರಾಜ್ಯಕ್ಕೆ ಇರುವಷ್ಟು ಅನುಕೂಲ ಬೇರೆ ರಾಜ್ಯಗಳಲ್ಲಿ ಇಲ್ಲ. ಇದಕ್ಕಾಗಿ ಒಂದು ಟ್ರೇನಿಂಗ್ ಪ್ರೋಗ್ರಾಂ ಸ್ಕೀಂನ್ನು ತಯಾರು ಮಾಡಿ ವಿದ್ಯಾವಂತ ಇಂಜಿನೀಯರುಗಳಿಗೆ ಬದ್ರಾವತಿಯಲ್ಲಿ ತರಬೇತಿ ಕೊಡಬೇಕೆಂದು ಸರಕಾರ ಉದ್ದೇಶ ಮಾಡಿದೆ ಎಂದು ಇಲ್ಲಿ ಹೇಳಲು ಇಚ್ಛಿಸುತ್ತೇನೆ. ನಾವು ಕೂಡ ಇವರ ಬಗ್ಗೆ ಕೇಂದ್ರ ಸರಕಾರಕ್ಕೆ ಒಂದು ಸ್ಕೀಂನ್ನು ಕಳುಹಿಸಿದ್ದೆವು. ಅದನ್ನು ಕೇಂದ್ರ ಸರಕಾರದವರು ಒಪ್ಪಿ ನಮಗೆ ವಾಪಸು

ಕಳುಹಿಸಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಮಾಲೀಕರುಗಳಿಗೆ ಸಾಕಾದಷ್ಟು ಹಣದ ಅನುಕೂಲ ಇಲ್ಲ. ಅವರು ತರಬೇತಿ ಪಡೆದ ಗ್ರಾಜುಯೇಟು ಇಂಜಿನೀಯರು ಗಳನ್ನು ನೇಮಕ ಮಾಡಿಕೊಳ್ಳಬೇಕಾದರೆ ಅವರಿಗೆ ತಿಂಗಳಿಗೆ 400 ರೂಪಾಯಿಗಳವರೆಗೆ ಸಂಬಳ ಕೊಡಬೇಕಾಗುತ್ತದೆ. ಅದಕ್ಕಾಗಿ ಅವರು ಈಗ ಏನು ಮಾಡುತ್ತಿದ್ದಾರೆಂದರೆ ಇತರ ಕೈಗಾರಿಕೆ ಗಳಲ್ಲಿ ಫೋರ್‌ಮನ್ ಆಗಿ ಚೆನ್ನಾಗಿ ಕೆಲಸ ಮಾಡಿರುವವರನ್ನು ನೇಮಕ ಮಾಡಿಕೊಂಡು ಕಡಿಮೆ ಸಂಬಳ ಕೊಡುತ್ತಿದ್ದಾರೆ. ಇದಕ್ಕಾಗಿ ನಾವು ಕೇಂದ್ರ ಸರಕಾರಕ್ಕೆ ಕಳುಹಿಸಿರುವ ಸ್ಕೀಂ ಪ್ರಕಾರ ಇಂತಹ ಸಣ್ಣ ಕೈಗಾರಿಕೆ ಉದ್ಯಮಗಳಲ್ಲಿ ನೇಮಿಸಿಕೊಳ್ಳುವ ಇಂಜಿನೀಯರಿಂಗ್ ಗ್ರ್ಯಾಜು ಯೇಟುಗಳಿಗೆ 400 ರೂಪಾಯಿಗಳ ಸಂಬಳ ಕೊಟ್ಟರೆ ಆಗ ಸರಕಾರದವರು ಇದರ ಅರ್ಧದಷ್ಟನ್ನು ಆ ಸಣ್ಣ ಕೈಗಾರಿಕೆಗಳಿಗೆ ಸಹಾಯ ಮಾಡಬೇಕೆಂದು ಉದ್ದೇಶ ಮಾಡಲಾಗಿದೆ. ಎಂದರೆ ಮಾಲೀಕರು ಅರ್ಧ ಸಂಬಳ ಹಾಗೂ ಸರಕಾರದವರು ಅರ್ಧಸಂಬಳ ಕೊಟ್ಟು ಆ ಕೈಗಾರಿಕೆಗಳನ್ನು ಮುಂದೆ ತರಲು ಅನುಕೂಲವಾಗುತ್ತದೆ. ಇದೇ ರೀತಿ ಡಿಪ್ಲೋಮಾ ಹೋಲ್ಡರುಗಳನ್ನು ಅಥವಾ ಐ. ಟಿ. ಐ. ಸರ್ಟಿಫಿಕೇಟು ಹೋಲ್ಡರುಗಳನ್ನು ನೇಮಕ ಮಾಡಿಕೊಂಡು ಅವರಿಗೆ 300 ರೂಪಾಯಿಗಳಷ್ಟು ಸಂಬಳ ಕೊಟ್ಟರೆ ಇದರಲ್ಲಿ ಸರಕಾರ ಅರ್ಧದಷ್ಟು ಸಂಬಳವನ್ನು ಸಹಾಯವಾಗಿ ಕೊಡುತ್ತದೆ ಮತ್ತು ಕೈಗಾರಿಕೆ ಮಾಲೀಕರು ಅರ್ಧದಷ್ಟು ಹಣ ಕೊಡುತ್ತಾರೆ. ಎಂದರೆ 150 ರೂಪಾಯಿಗಳನ್ನು ಸರಕಾರ ಕೊಡುತ್ತದೆ ಮತ್ತು ಕೈಗಾರಿಕೆ ಸಂಸ್ಥೆ ಉಳಿದ 150 ರೂಪಾಯಿಗಳನ್ನು ಕೊಡುತ್ತದೆ. ಇದರಿಂದಾಗಿ ಎಲ್ಲ ಕೈಗಾರಿಕಾ ಸಂಸ್ಥೆಗಳಲ್ಲೂ ಎಕ್ಸ್‌ಪರ್ಟು ಗಳನ್ನು ನೇಮಿಸಿಕೊಳ್ಳಲು ಒಂದು ಅವಕಾಶ ಸಿಗುತ್ತದೆ ಮತ್ತು ಅವು ಚೆನ್ನಾಗಿ ಬೆಳೆಯಲು ಅನುಕೂಲವಾಗುತ್ತದೆ ಮತ್ತು ಇದರಿಂದ ಸ್ವಲ್ಪಮಟ್ಟಿಗೆ ನಿರುದ್ಯೋಗದ ಬವಣೆಯೂ ಕಡಿಮೆ ಯಾಗುತ್ತದೆ ಮತ್ತು ಡಿಪ್ಲೋಮೊ ಹೋಲ್ಡರುಗಳನ್ನು ನೇಮಕ ಮಾಡುವ ಸಮಸ್ಯೆಯೂ ಪರಿಹಾರ ವಾದಂತಾಗುತ್ತದೆ.

ಎರಡನೇದು ಇನ್ನು ಮುಂದಿನ ಐದು ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು ಇನ್ನೂರು ಇಂಜನೀಯರಿಂಗು ಷೆಡ್ಸ್‌ಗಳನ್ನು ಹಾಕಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ವರ್ಷ 200 ಷೆಡ್ಸ್‌ಗಳನ್ನು ಹಾಕುತ್ತೇವೆ. ಕಳೆದ ವರ್ಷ 176 ಷೆಡ್ಡುಗಳನ್ನು ಹಾಕಿಯಾಗಿದೆ. ಇನ್ನು ಮುಂದಿನ ಐದನೇ ಯೋಜನೆ ಅವಧಿಯೊಳಗೆ 200 ಇಂಡಸ್ಟ್ರಿಯಲ್ ಷೆಡ್ಸ್‌ಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಮಾಡಬೇಕೆಂದು ಇದೆ ಮತ್ತು ಎಲ್ಲೆಲ್ಲಿ ಇಂಡಸ್ಟ್ರಿಯಲ್ ಪೊಟೆನ್‌ಷಿಯಲ್ ಇದೆಯೋ ಅವನ್ನೆಲ್ಲಾ ಗುರುತಿಸಿ ಅಲ್ಲಿ ಷೆಡ್ಡುಗಳನ್ನು ಹಾಕುತ್ತೇವೆ ಎಂದು ಈ ಸಮಯದಲ್ಲಿ ತಿಳಿಸಲು ಇಚ್ಛೆ ಪಡುತ್ತೇನೆ.

ಮತ್ತೊಂದು ವಿಚಾರವೆಂದರೆ, ನಮ್ಮ ಬೆಂಗಳೂರಿನಲ್ಲಿ ಟಾಟಾ ಇನ್‌ಸ್ಟಿಟ್ಯೂಟ್ ಇದೆ. ಅದು ನಮ್ಮ ಇಡೀ ದೇಶಕ್ಕೆ ಅತ್ಯಂತ ಮಾದರಿಯಾಗಿರತಕ್ಕಂಥ ಉನ್ನತವಾದಂಥ ಸೈಂಟಿಫಿಕ್ ಇನ್ಸ್ಟಿಟ್ಯೂ ಷನ್ ಆಗಿದೆ. ಆದರೆ ಇದುವರೆಗೆ ನಮ್ಮ ಮೈಸೂರು ಸರ್ಕಾರಕ್ಕೂ ಈ ಇನ್‌ಸ್ಟಿಟ್ಯೂಷನ್‌ಗೂ ಹೆಚ್ಚಿನ ಸಂಬಂಧವಿರಲಿಲ್ಲ. ಈಗ ಧವನ್ ಅವರು ಸ್ಪೇಸ್ ರೀಸರ್ಚ್ ಕಮೀಷನ್ ಅಧ್ಯಕ್ಷರಾಗಿದ್ದಾರೆ. ಅವರು ಇಂಡಿಯನ್ ಸೈನ್ಸ್‌ಇನ್‌ಸ್ಟಿಟ್ಯೂಟ್‌ನ ಡೈರೆಕ್ಟರ್ ಕೂಡ ಆಗಿದ್ದಾರೆ. ಅವರು ಮುಖ್ಯ ಮಂತ್ರಿಗಳನ್ನು, ಮಾನ್ಯ ಆರ್ಥಿಕ ಮಂತ್ರಿಗಳನ್ನು ಮತ್ತು ಇತರೇ ಮಂತ್ರಿಗಳನ್ನು ಭೇಟಿ ಮಾಡಿ ಸರ್ಕಾರಕ್ಕೂ ಈ ಸೈಂಟಿಫಿಕ್ ಇನ್‌ಸ್ಟಿಟ್ಯೂಷನ ಸೈಂಟಿಸ್ಟ್‌ಗಳಿಗೂ ಮಧ್ಯೆ ಒಂದು ರ್‍ಯಾಪೋರ್ಟ್ ಪ್ರಾರಂಭವಾಗಬೇಕು ಎಂದು ಹೇಳಿದ್ದಾರೆ. ಈಗ ಕೇಂದ್ರಸರ್ಕಾರದಲ್ಲಿ ಪ್ರಧಾನಮಂತ್ರಿಗಳಿಗೂ ಮತ್ತು ಹೆಸರಾಂಥ ವಿಜ್ಞಾನಿಗಳಿಗೂ ನೇರವಾದ ರ್‍ಯಾಪೋರ್ಟ್ ಅಂದರೆ ಸಂಪರ್ಕ ಇದೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಇದುವರೆಗೆ ಡೈರೆಕ್ಟಾಗಿ ಇರಲಿಲ್ಲ. ಇನ್ನು ಮುಂದೆ ಸರ್ಕಾರಕ್ಕೂ ಮತ್ತು ಈ ಇನ್‌ಸ್ಟಿಟ್ಯೂಷನ್‌ಗೂ ಮಧ್ಯೆ ನೇರವಾದ ಸಂಪರ್ಕ ಇಟ್ಟುಕೊಳ್ಳಬೇಕೆಂದು ಯೋಚನೆ ಮಾಡಿ ಅದರ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ.

ಇನ್ನು ಮೈಸೂರಿನ ಜನರಿಗೆ ಕೈಗಾರಿಕೆಗಳಲ್ಲಿ ಹೆಚ್ಚಾಗಿ ಕೆಲಸ ಸಿಗುತ್ತಿಲ್ಲ ಎಂಬುದಾಗಿ ಅನೇಕ ಮಾನ್ಯ ಸದಸ್ಯರು ಹೇಳಿದರು. ಎಲ್ಲ ಉದ್ಯಮದಾರರಿಗೂ ಕೂಡ ನಾವು ಈ ಬಗ್ಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹೇಳಿದ್ದೇವೆ. ಅವರನ್ನು ಟೀಗೆ ಕರೆದಾಗ, ಅವರು ನಮ್ಮನ್ನು ಊಟಕ್ಕೆ ಕರೆದಾಗಲೆಲ್ಲಾ ಇದನ್ನು ಹೇಳಿಕೊಂಡು ಬಂದಿದ್ದೇವೆ. ಕೇಂದ್ರಸರ್ಕಾರದ ಉದ್ಯಮಗಳಲ್ಲಿಯೂ ಸಹ ಮೈಸೂರಿನವರಿಗೆ ಸಾಕಾದಷ್ಟು ಪ್ರಮಾಣದಲ್ಲಿ ಪ್ರಾತಿನಿಧ್ಯ ಕೊಡಬೇಕೆಂಬ ಬಗ್ಗೆ ಆಗಿಂದಾಗ್ಗೆ ಕೇಂದ್ರಸರ್ಕಾರದ ಗಮನವನ್ನು ಸೆಳೆದಿದ್ದೇವೆ. ನಮ್ಮ ಮುಖ್ಯಮಂತ್ರಿಗಳು ಸಹ ಕೇಂದ್ರಸರ್ಕಾರದ ಜೊತೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಮಾಡುತ್ತಲೇ ಬಂದಿದ್ದಾರೆ.

(ಶ್ರೀ ಎಸ್. ಎಂ. ಕೃಷ್ಣ)

ಇನ್ನು ಭೂಗರ್ಭ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಇಲಾಖೆ ಬಹಳ ಕೆಲಸ ಮಾಡಿದೆ. ಮಾನ್ಯ ಸದಸ್ಯರು ಚಿತ್ರದುರ್ಗದ ಕಡೆಗೆ ಹೋದರೆ ಅಲ್ಲಿರುವ ಕಾಪರ್ ಕಂಪನಿಯನ್ನು ಸಂದರ್ಶಿಸಬೇಕು. ಈ ಕಂಪನಿ ಸುಂದರವಾದಂಥ ಆವರಣದಲ್ಲಿ ಪ್ರಕೃತಿದತ್ತವಾದಂಥ ಆವರಣದಲ್ಲಿ ಇವೆ. ಒಂದು ಕಡೆ ಚಿತ್ರದುರ್ಗದ ಕೋಟೆಗಳು ಇನ್ನೊಂದು ಕಡೆ ಸಹ್ಯಾದ್ರಿ ಪರ್ವತಗಳು, ಇವುಗಳ ನಡುವೆ ಈ ಕಂಪನಿ ಇದೆ. ಇದಕ್ಕೆ 20 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. 1974ನೇ ಇಸವಿಯಲ್ಲಿ ಈ ಕಂಪನಿಯ ಕೆಲಸ ಪ್ರಾರಂಭವಾಗುತ್ತದೆ.

ಕೈಮಗ್ಗದ ಬಗ್ಗೆ ಮಾನ್ಯ ನಂಜಯ್ಯನಮಠ ಅವರು, ಮಾನ್ಯ ನಾಗಣ್ಣನವರು ಮಾತನಾಡಿದ್ದಾರೆ. ಮಾನ್ಯ ಭಂಗಿ ಅವರಿಗೆ ಮಾತನಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಈ ಕೈಮಗ್ಗದ ನತದೃಷ್ಟ ಜನರ ಬಗ್ಗೆ ಕಳಕಳಿ ಇಟ್ಟುಕೊಂಡಿದ್ದಾರೆಂಬುದು ನನಗೆ ಗೊತ್ತು. ಸರ್ಕಾರ ಕೂಡ ಈ ಜನರ ಬಗ್ಗೆ ಸಂಪೂರ್ಣವಾದ ಸಹಾನುಭೂತಿ ಹೊಂದಿದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಕೇವಲ ಕಣ್ಣೀರ ಸಹಾನುಭೂತಿ ಬೇಕಾಗಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಆ ರೀತಿ ತಾವು ಹೇಳುತ್ತೀರಾ ಎಂಬುದು ನನಗೆ ಗೊತ್ತಿತ್ತು. ನಮ್ಮದು ಕೇವಲ ಕಣ್ಣೀರ ಸಹಾನುಭೂತಿ ಅಲ್ಲ. ಹೃದಯಾಂತರಾಳದಿಂದ ಬರುತ್ತಿರುವ ಸಹಾನುಭೂತಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಇನ್ನು ಅವರು ಸ್ವರ್ಗವನ್ನು ಮುಟ್ಟಬಹುದು.

ಶ್ರೀ ಎಸ್. ಎಂ. ಕೃಷ್ಣ.—ತಾವು ಯಾವ ರೀತಿ ಬೇಕಾದರೂ ತಿಳಿದುಕೊಳ್ಳಿ. ಆದರೆ ಈ ನೇಕಾರರ ವಿಚಾರದಲ್ಲಿ ಪ್ರಸ್ತಾಪ ಮಾಡುವಾಗ ಮಾತ್ರ ಸರ್ಕಾರ ಅವರ ಬಗ್ಗೆ ಬಹಳಮಟ್ಟಿಗೆ ಕಳಕಳಿಯನ್ನು ಇಟ್ಟುಕೊಂಡಿದೆ. ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ನಾವು ಕಟ್ಟುಬಿದ್ದಿದ್ದೇವೆ. ಅವರ ಒಂದು ಬೆಂಬಲದಿಂದ ಈ ಸರ್ಕಾರ ಹುಟ್ಟಿದೆ. ಆದ್ದರಿಂದ ಅವರ ಸ್ಥಿತಿಗತಿಗಳನ್ನು ಸಂಪೂರ್ಣವಾಗಿ ನಾವು ಗಮನಿಸಿದ್ದೇವೆ. ಅನೇಕ ಮಂದಿ ಸ್ನೇಹಿತರು ಇವರಿಗಾಗಿಯೇ ಒಂದು ಪ್ರತ್ಯೇಕ ಇಲಾಖೆ ಮಾಡಬೇಕು, ಡೈರೆಕ್ಟೊರೇಟ್ ಮಾಡಬೇಕು ಎಂಬ ಒತ್ತಾಯವನ್ನು ಆಗಿಂದಾಗ್ಗೆ ಮಾಡುತ್ತಲೇ ಇದ್ದಾರೆ. ನಾವು ಸಹ ಆ ಒಂದು ಒತ್ತಾಯವನ್ನು ತತ್ವಶಃ ಒಪ್ಪಿದ್ದೇವೆ. ಅವರ ಬಗ್ಗೆ ಎಲ್ಲ ರೀತಿಯ ಗಮನವನ್ನು ಸರ್ಕಾರ ಕೊಡುತ್ತದೆ. ಇವರಿಗಾಗಿಯೇ ಪ್ರತ್ಯೇಕವಾದ ಡೈರೆಕ್ಟೊರೇಟ್ ಆಂಧ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಈಗ ಇದೆ. ಅದರಂತೆ ಮೈಸೂರು ರಾಜ್ಯದಲ್ಲಿಯೂ ಏತಕ್ಕೆ ಇರಬಾರದು ಎಂಬ ಬಗ್ಗೆ ನಾವು ತೀವ್ರವಾದಂಥ ಆಲೋಚನೆಯನ್ನು ಮಾಡುತ್ತಿದ್ದೇವೆ. ಆ ಬಗ್ಗೆ ಅನತಿ ದೂರದಲ್ಲಿಯೇ ಒಂದು ನಿರ್ಧಾರ ಕೈಕೊಳ್ಳುತ್ತೇವೆಂದು ಹೇಳುತ್ತೇನೆ.

ಮಾನ್ಯ ರುದ್ರಪ್ಪನವರು ಹೊಸದುರ್ಗದಲ್ಲಿ ಒಂದು ಸಿಮೆಂಟ್ ಕಾರ್ಖಾನೆಯನ್ನು ಪ್ರಾರಂಭ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದರು. 10—12 ವರ್ಷಗಳ ಕೆಳಗೆ ಒಬ್ಬರು ಸಿಮೆಂಟ್ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತೇನೆಂದು ಮುಂದೆ ಬಂದಾಗ, ನಾನು ಅವರಿಗೆ ಮಾಡಿ ಎಂದು ಹೇಳಿದ್ದಲ್ಲದೆ, ಅವರನ್ನು ದೆಹಲಿಗೆ ಕೂಡ ಕರೆದುಕೊಂಡು ಹೋಗಿದ್ದೆ. ಅಲ್ಲಿ ಸಿಮೆಂಟ್ ತಯಾರು ಮಾಡಲು ಬೇಕಾದ ಲೈಮ್ ಸ್ಟೋನ್ ಸಾಕಷ್ಟು ಇದೆ ಎಂಬುದು ಗೊತ್ತು. ಆದರೆ ಒಂದು ತೊಡಕು ಎಂದರೆ ಆ ಭಾಗಕ್ಕೆ ರೈಲ್ವೆ ಲೈನ್ ಇಲ್ಲ. ಸುಮಾರು 12—15 ಮೈಲಿಗಳವರೆಗೆ ರೈಲ್ವೆ ಲೈನ್ ಹಾಕಬೇಕಾಗಿದೆ. ಈ ಲೈನ್ ಹಾಕಿಸಿಕೊಡಲು ಮಾನ್ಯ ಹನುಮಂತಯ್ಯನವರ ಆಶೀರ್ವಾದಬೇಕು. ಈ ಕಾರ್ಖಾನೆಯನ್ನು ಪ್ರಾರಂಭ ಮಾಡಲು ಈಗಾಗಲೇ ಕೇಂದ್ರ ಸರ್ಕಾರದವರು ಒಬ್ಬರಿಗೆ ಲೆಟರ್ ಆಫ್ ಇಂಟೆಂಟ್ ಕೊಟ್ಟುಬಿಟ್ಟಿದ್ದಾರೆ. ಆದರೆ ಅವರು ಸರ್ಕಾರಕ್ಕೆ ಕಾಗದ ಬರೆದು, ಕಂಪನಿಯನ್ನು ರಿಜಿಸ್ಟರ್ ಮಾಡಿಸಲು ಹಣವಿಲ್ಲ, ಸಹಾಯ ಮಾಡಿ ಎಂದು ಕೇಳಿದ್ದಾರೆ. ಅವರ ಹತ್ತಿರ ಒಂದು ಟೈಪ್‌ರೈಟರ್ ಮತ್ತು ಕೆಲವು ಮರದ ಸಾಮಾನುಗಳನ್ನು ಬಿಟ್ಟರೆ ಬೇರೆ ಏನೂ ಇಲ್ಲ ಎಂಬುದಾಗಿ ಮಾನ್ಯ ರುದ್ರಪ್ಪನವರು ಹೇಳಿದರು.

ಶ್ರೀ ಎಂ. ವಿ. ರುದ್ರಪ್ಪ (ಹೊಸದುರ್ಗ).—ಅವರ ಹತ್ತಿರ ಫೋನ್ ಕೂಡ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸಿಮೆಂಟ್ ಕಾರ್ಪೊರೇಷನ್ ಅವರಿಗೆ ವಹಿಸಿಕೊಟ್ಟರೆ, ಅವರೇ ಪ್ರಾರಂಭ ಮಾಡುತ್ತಾರೆ ;

ಶ್ರೀ ಎಸ್. ಎಂ. ಕೃಷ್ಣ.—ಅವರು ಈಗಾಗಲೇ ಸೇಡಂನಲ್ಲಿ ಒಂದನ್ನು ವಹಿಸಿಕೊಂಡು ಮಾಡುತ್ತಿದ್ದಾರೆ. ಈಗ ಲೆಟರ್ ಆಫ್ ಇಂಟೆಂಟ್ ಬೇರೆಯವರ ಹೆಸರಿನಲ್ಲಿ ಇರುವುದರಿಂದ, ನಾವು ಏನೂ ಮಾಡುವುದಕ್ಕೂ ಆಗುವುದಿಲ್ಲ. ಹೊಸದಾಗಿ ಅರ್ಜಿ ಹಾಕುವುದಕ್ಕೂ ಸಹ ಬರುವುದಿಲ್ಲ.

ಶ್ರೀ ಎಂ. ವಿ. ರುದ್ರಪ್ಪ.—ಮಾನ್ಯ ಮಂತ್ರಿಗಳು ಏನೂ ಮಾಡುವುದಕ್ಕೂ ಆಗುವುದಿಲ್ಲ ಎಂದು ಹೇಳಿದರು. ಇರುವ ಪರಿಸ್ಥಿತಿಯನ್ನು ಕೇಂದ್ರಸರ್ಕಾರದ ಗಮನಕ್ಕೆ ತಂದು, ಸರ್ಕಾರದ ವತಿಯಿಂದಲೇ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಅದನ್ನು ವಿಚಾರ ಮಾಡುತ್ತೇನೆ. ಶ್ರೀಮಾನ್ ರುದ್ರಪ್ಪನವರು ಮತ್ತು ಶ್ರೀಮಾನ್ ರಾಚೇಗೌಡರು ನಮ್ಮ ರಾಜ್ಯದಲ್ಲಿರುವ ಕುರಿ ಸಂಪತ್ತಿನ ಉಪಯೋಗವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು ಎಂಬ ಬಗ್ಗೆ ಸೂಚನೆ ಕೊಟ್ಟರು. ನಮ್ಮ ರಾಜ್ಯದಲ್ಲಿ ನಾನಾ ತರಹದ ಕುರಿಗಳಿವೆ. ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಬನ್ನೂರು ಕುರಿಯ ರುಚಿ ಗೊತ್ತೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನಾನು ಮೊನ್ನೆ ಬಳ್ಳಾರಿಯ ಕಡೆ ಪ್ರವಾಸ ಹೋದಾಗ, ಮೊಳಕಾಲ್ಮೂರು, ಚೆಳ್ಳಕೆರೆ, ಚಿತ್ರದುರ್ಗ, ರಾಯಚೂರು, ಹಟ್ಟಿ ಗೋಲ್ಡ್ ಮೈನ್ಸ್, ಹಿರಿಯೂರು ಮುಂತಾದ ಕಡೆಗಳಲ್ಲಿ ಕುರಿಯ ಸಂಪತ್ತು ಹೆಚ್ಚಾಗಿರುವುದನ್ನು ನೋಡಿದೆ. ಇಷ್ಟೊಂದು ಹೇರಳವಾದ ಕುರಿ ಸಂಪತ್ತು ನಮ್ಮ ರಾಜ್ಯದಲ್ಲಿರುವಾಗ, ಆ ಕುರಿಗಳ ತುಪ್ಪಟವನ್ನು ಅಭಿವೃದ್ಧಿ ಮಾಡುವುದಕ್ಕೆ ಏನಾದರು ಮಾಡಬೇಕೆಂದು ತೀವ್ರವಾದಂಥ ಆಲೋಚನೆ ಮಾಡುತ್ತಿದ್ದೇವೆ. ಊಲ್ ಬೋರ್ಡನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ಅನತಿದೂರದಲ್ಲಿಯೇ ಒಂದು ನಿರ್ಧಾರ ಕೈಕೊಳ್ಳುತ್ತೇವೆ.

ಮಾನ್ಯ ಜಯಪ್ರಕಾಶ್‌ನಾರಾಯಣ್, ಮಾನ್ಯ ಪುಟ್ಟದಾಸ್, ಮಾನ್ಯ ಪುಟ್ಟರಂಗನಾಥ್ ಅವರು ಡಿಮ್ಯಾಂಡ್ ಮೇಲೆ ಭಾಷಣ ಮಾಡದಿದ್ದರೂ ಸಹ ನನ್ನ ಹತ್ತಿರ ಸಂಭಾಷಣೆ ಮಾಡಿ ಚರ್ಮದ ಕೈಗಾರಿಕೆ ಬಗ್ಗೆ ಒಂದು ಬೋರ್ಡ್ ಮಾಡಬೇಕೆಂದು ಹೇಳಿದರು. ಕೇವಲ ಬೋರ್ಡ್‌ಗಳನ್ನು ಮಾಡುವ ಮಾತ್ರದಿಂದಲೇ ಚರ್ಮದ ಕೈಗಾರಿಕೆ ಒಳ್ಳೆಯ ಅಭಿವೃದ್ಧಿಯಾಗುತ್ತದೆಂದು ನಾನು ನಂಬುವುದಿಲ್ಲ. ಇದನ್ನೇ ನಂಬಿಕೊಂಡು ಜೀವನ ಮಾಡತಕ್ಕಂಥ ಜನರು ನಮ್ಮ ರಾಜ್ಯದಲ್ಲಿ ಸಹಸ್ರಾರು ಜನರು ಇದ್ದಾರೆ. ಅವರಿಗೂ ಕೂಡ ಸ್ವಲ್ಪಮಟ್ಟಿಗೆ ಸವಲತ್ತುಗಳನ್ನು ಮಾಡಿಕೊಡಬೇಕಾಗಿದೆ. ಇವೊತ್ತು ಖಾದಿ ಬೋರ್ಡ್ ಆಶ್ರಯದಲ್ಲಿ ನಾನಾ ತರಹದ ಸೊಸೈಟಿಗಳನ್ನು ಏನು ಮಾಡಿದ್ದೇವೆ, ಆ ಸೊಸೈಟಿಗಳಲ್ಲಿ ಚರ್ಮದ ಕೋಆಪರೇಟೀವ್ ಸೊಸೈಟಿಗಳು ಸಹ ಇವೆ. ಬಹುಶಃ ಅವುಗಳಲ್ಲಿ ಶೇಕಡ 90ರಷ್ಟು ಮೂಲೆಗೆ ಬಿದ್ದಿವೆ ಎಂದು ಹೇಳಿದ್ದಾರೆ. ಈ ರೀತಿ ಮೂಲೆಗೆ ಬಿದ್ದಿರುವ ಸೊಸೈಟಿಗಳ ವಿಚಾರವನ್ನು ಮರೆತು ಹೊಸದಾಗಿ ಯಾವುದಾದರೂ ಒಂದು ಸ್ಕೀಮನ್ನು ಜಾರಿಗೆ ತರಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಲೆದರ್ ಪೊಟೆನ್‌ಷಿಯಲ್ ಸರ್ವೆ ಮಾಡುವುದಕ್ಕಾಗಿ ಮದ್ರಾಸ್ ರಾಜ್ಯದ ಸೆಂಟ್ರಲ್ ಲೆದರ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನವರು ಸರ್ವೆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

10-30 A.M.

ಸೆಂಟ್ರಲ್ ಲೆದರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರು ಮೈಸೂರು ರಾಜ್ಯದ ಸರ್ವೆ ಕೆಲಸವನ್ನು ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಅವರಿಂದ ಸರ್ವೆ ರಿಪೋರ್ಟ್ ಬಂದಮೇಲೆ ಬಡವರಿಗೆ ಮತ್ತು ಸಮಾಜದಲ್ಲಿ ಯಾರು ದುರ್ಬಲರಾಗಿದ್ದಾರೆಯೋ ಅಂಥವರಿಗೆ ಅನುಕೂಲವಾಗತಕ್ಕಂಥಾ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಕಲ್ಬುರ್ಗಿ ಎಂ. ಎಸ್. ಕೆ. ಮಿಲ್ಲಿನ ಬಗ್ಗೆ ಮಾನ್ಯ ಸದಸ್ಯರು ಬಹಳ ತೀಕ್ಷ್ಣವಾದ ಟೀಕೆಗಳನ್ನು ಮಾಡಿದ್ದಾರೆ. ಮತ್ತು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಆ ಸಲಹೆಗಳನ್ನು ಸ್ವಾಗತ ಮಾಡುತ್ತೇನೆ. ಎಂ. ಎಸ್. ಕೆ. ಮಿಲ್ಲು ಕಾರಣಾಂತರಗಳಿಂದ ನಾನಾ ವಿಧವಾದ ಬದಲಾವಣೆಗಳನ್ನು ಕಳೆದ 5—6 ವರ್ಷಗಳಲ್ಲಿ ಪಡೆದಿದೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಎನ್‌ಕ್ವೈರಿ ಸಮಿತಿಯನ್ನು ನೇಮಕ ಮಾಡಿದ್ದಾರೆ. ರಾಜ್ಯ ಸರ್ಕಾರದವರ ಸಲಹೆಯ ಮೇಲೆ ಕೇಂದ್ರ ಸರ್ಕಾರದವರು ಅದರ ಎನ್‌ಕ್ವೈರಿಯನ್ನು ಈಗಾಗಲೇ ಪ್ರಾರಂಭ ಮಾಡಿ ಆ ಎನ್‌ಕ್ವೈರಿ ರಿಪೋರ್ಟ್ ಬಂದಮೇಲೆ ಅದರ ಆಧಾರದಮೇಲೆ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ರೆಗ್ಯುಲೇಷನ್ ಆಕ್ಟ್ ಪ್ರಕಾರ ಈಗಾಗಲೇ ಅವರು ಒಂದು ವರದಿಯನ್ನು ಸಲ್ಲಿಸಿದ್ದಾರೆ. ಆ ವರದಿಯನ್ನು ಅವರು ರಾಜ್ಯಸರ್ಕಾರಕ್ಕೆ ಕಳುಹಿಸಿದ ಮೇಲೆ, ಎಂ. ಎಸ್. ಕೆ. ಮಿಲ್ಲಿನ ಸುಧಾರಣೆ

(ಶ್ರೀ ಎಸ್. ಎಂ. ಕೃಷ್ಣ)

ಆಗಬೇಕಾದರೆ ಏನು ತತ್ವಗಳನ್ನು ಅನುಸರಿಸಬೇಕು ಎನ್ನತಕ್ಕಂಥಾ ವಿಚಾರಗಳನ್ನು ಅವರು ಅವರ ವರದಿಯಲ್ಲಿ ನಮೂದಿಸಿದ್ದಾರೆಯೋ ಅವುಗಳ ಬಗ್ಗೆ ನಾವು ಸೂಕ್ತ ಕ್ರಮಗಳನ್ನು ತೆಗೆದು ಕೊಳ್ಳುತ್ತೇವೆ.

ಖಾದಿ ಬೋರ್ಡಿನ ವಿಚಾರದಲ್ಲಿ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಬಹಳ ಆಗ್ರಹ ಪೂರ್ವಕವಾಗಿ ಮಾತನಾಡಿದ್ದಾರೆ. ಖಾದಿ ಬೋರ್ಡು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಧಾಟಿಯಲ್ಲಿ ಕೆಲವರು ಮಾತನಾಡಿದ್ದಾರೆ ಮತ್ತು ಆ ಬಗ್ಗೆ ವೈಯ್ಯಕ್ತಿಕವಾಗಿ ನನಗೆ ಕೆಲವು ಪತ್ರ ಗಳನ್ನು ಕೂಡ ಅವರು ಬರೆದಿದ್ದಾರೆ. ಖಾದಿ ಬೋರ್ಡು ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳನ್ನು ಜಾರಿಗೆ ತರುವುದಕ್ಕೋಸ್ಕರ ರಚನೆಯಾಗಿರತಕ್ಕ ಒಂದು ಮಂಡಲಿ. ಈ ಒಂದು ಮಂಡಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡಿ ತನ್ನ ಉದ್ದೇಶವನ್ನು ಸಾರ್ಥಕಗೊಳಿಸತಕ್ಕ ರೀತಿಯಲ್ಲಿ ಕೆಲಸ ಮಾಡಬೇಕೆಂಬುದು ನಮ್ಮೆಲ್ಲರ ಆಶೆ. ಅದರಲ್ಲಿ ಲೋಪದೋಷಗಳು ಇದ್ದರೆ ಅವುಗಳನ್ನು ತಿದ್ದು ವುದಕ್ಕೆ ಮತ್ತು ಅಂಥಾ ಗಹನವಾದ ಆಪಾದನೆಗಳೇನಾದರೂ ಕಂಡು ಬಂದರೆ ಅವುಗಳನ್ನು ಕೂಲಂಕಷವಾಗಿ ತನಿಖೆ ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಈಗ ಈ ಬಗ್ಗೆ ಬಂದಿರತಕ್ಕ ಆರೋಪಣೆಗಳನ್ನು ತನಿಖೆ ಮಾಡಿಸುತ್ತೇನೆ ಎಂದು ನಾನು ಮಾನ್ಯ ಸದಸ್ಯರಿಗೆ ಈ ಸಮಯದಲ್ಲಿ ಹೇಳುತ್ತೇನೆ.

ಕಾಯರ್ ಬೋರ್ಡ್ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ಕಾಯರ್ ಇಂಡಸ್ಟ್ರಿಯಿಂದ ತಯಾರಾದ ವಸ್ತುಗಳನ್ನು ನಮ್ಮ ರಾಷ್ಟ್ರದಿಂದ ಹೊರದೇಶಕ್ಕೆ ಕಳುಹಿಸುವುದರಿಂದ ನಮ್ಮ ರಾಷ್ಟ್ರಕ್ಕೆ 12 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಅದರಲ್ಲಿ ನಮ್ಮ ಮೈಸೂರಿಗೆ 2 ಲಕ್ಷ ರೂಪಾಯಿಗಳ ಕಾಂಟ್ರಿಬ್ಯೂಷನ್, ಕೇಂದ್ರ ಸರ್ಕಾರದಿಂದ ಬರುತ್ತದೆ. ಆದ್ದರಿಂದ ಕಾಯರ್ ಇಂಡಸ್ಟ್ರಿಯು ಬೆಳವಣಿಗೆ ಹೆಚ್ಚು ಆಗಬೇಕಾಗಿದೆ.

ಹಾಸನದ ಶ್ರೀಮಾನ್ ಹನುಮೇಗೌಡರು ಹಾಸನದ ಇಂಡಸ್ಟ್ರಿಯಲ್ ಎಸ್ಟೇಟಿನ ವಿಚಾರ ವನ್ನು ಹೇಳಿದ್ದಾರೆ. ಈಗಾಗಲೇ ಅಲ್ಲಿ 4 ಎಸ್ಟೇಟುಗಳು ಇವೆ. ಹಾಸನಕ್ಕೆ ಹೊಸ ಎಸ್ಟೇಟುಗಳನ್ನು ಬೇಕಾದರೆ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಎಸ್ಟೇಟ್ ಬೇಕು ಎಂದು ಹೇಳತಕ್ಕ ಉದ್ದಿಮೆದಾರರು ತಮ್ಮ ಭಾಗದ ಹಣವನ್ನು ಡಿಪಾಜಿಟ್ ಮಾಡಿದರೆ ಆ ಮೇಲೆ ನಾವು ಅಲ್ಲಿಗೆ ಇಂಡಸ್ಟ್ರಿಯಲ್ ಎಸ್ಟೇಟ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಟೆಕ್ಸ್‌ಟೈಲ್ ಮಿಲ್ ರಾಯಚೂರಿನಲ್ಲಿ ಈಗಾಗಲೇ ಒಂದು ಸ್ಪಿನ್ನಿಂಗ್ ಮಿಲ್ ಇದೆ. ಆದ್ದರಿಂದ ಮತ್ತೊಂದು ಟೆಕ್ಸ್‌ಟೈಲ್ ಮಿಲ್ಲಿನ ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಎಂಬುದನ್ನು ನಾವು ನೋಡಬೇಕಾಗಿದೆ.

ಆಸ್‌ಬೆಸ್ಟೋಸ್‌ಷೀಟ್ಸ್ ಕಾರ್ಖಾನೆಯನ್ನು ಹುಬ್ಬಳಿ ಧಾರವಾಡದ ಮಧ್ಯದಲ್ಲಿ ಸ್ಥಾಪನೆ ಮಾಡುವ ಉದ್ದೇಶ ಇದೆ. ಆದ್ದರಿಂದ ಯಾರಾದರೂ ಖಾಸಗೀ ಉದ್ದಿಮೆದಾರರನ್ನು ಕರೆದು ಕೊಂಡು ಬಂದರೆ ಅವರಿಗೆ ಏನು ಸಹಕಾರ ಮತ್ತು ಸೌಲಭ್ಯಗಳು ಬೇಕೋ ಅವುಗಳೆಲ್ಲವನ್ನೂ ಕೊಡುವುದಕ್ಕೆ ಪ್ರಯತ್ನ ಮಾಡಬಹುದು.

ಬ್ರೂಯರೀಸ್ ಈಗಾಗಲೇ ಪ್ರೈವೇಟ್ ಸೆಕ್ಟಾರಿನಲ್ಲಿ ಬೆಂಗಳೂರಿನಲ್ಲಿ ಯುನೈಟೆಡ್ ಬ್ರೂಯರೀಸ್, ಮತ್ತು ಕೋತ ಬ್ರೂಯರೀಸ್, ನಂದೀ ಬ್ರೂಯರೀಸ್ ಇವೆ. ರಾಜ್ಯದಲ್ಲಿ ಅವುಗಳ ಆವಶ್ಯಕತೆಗಳನ್ನು ಗಮನಿಸಿ ಅನಂತರ ಅವುಗಳಿಗೆ ಲೈಸೆನ್ಸ್ ಕೊಡುತ್ತೇವೆ. ಪಬ್ಲಿಕ್ ಸೆಕ್ಟಾರಿನಲ್ಲಿ ಇವುಗಳಿಗೆ ಅವಶ್ಯಕತೆ ಇದೆಯೋ ಇಲ್ಲವೋ ಈ ಬಗ್ಗೆ ನನಗೆ ಸ್ವಲ್ಪ ಅನುಮಾನ ಇದೆ.

ಡೆವಲಪ್‌ಮೆಂಟ್ ಆಫ್ ಷುಗರ್‌ಫ್ಯಾಕ್ಟರಿಯ ಬಗ್ಗೆ ಹೇಳುವುದಾದರೆ ಈಗ ಕೆಲವು ಷುಗರ್ ಫ್ಯಾಕ್ಟರಿಗೆ ಲೈಸೆನ್ಸ್ ಬಂದಿವೆ. ಅವು ನಾನಾ ಹಂತದಲ್ಲಿವೆ.

ಊದುಬತ್ತಿ ಫ್ಯಾಕ್ಟರಿಯ ಬಗ್ಗೆ ಹೇಳಬೇಕಾದರೆ ಈಗ ನಮ್ಮ ರಾಜ್ಯದಲ್ಲಿ ಕಾಡಮದ್ದು, 'ಗೋಕಾಕ್, ನಗರ, ದೂದ್‌ಗಂದ್ ಮುಂತಾದ ಪ್ರದೇಶಗಳಲ್ಲಿ' ಊದುಬತ್ತಿಯ ಕೈಗಾರಿಕೆಗಳು ನಡೆಯುತ್ತಾ ಇವೆ.

ಜಾಯಿಂಟ್ ಸೆಕ್ಟಾರ್ ಉದ್ದಿಮೆಗಳ ವಿಚಾರವಾಗಿ ಹೇಳಬೇಕಾದರೆ ನಮ್ಮ ಪ್ರಧಾನ ಮಂತ್ರಿಗಳು ಜಾಯಿಂಟ್ ಸೆಕ್ಟಾರಿನಲ್ಲಿ ಉದ್ದಿಮೆಯನ್ನು ನಡೆಸುವುದಕ್ಕೆ ನಮ್ಮ ರಾಜ್ಯದಲ್ಲಿ ಮಾಗ್ಜಿಮಮ್ ಉಪಯೋಗಿಸಿಕೊಳ್ಳಬಹುದು ಎನ್ನುವ ಮಾತನ್ನು ಹೇಳಿದ್ದಾರೆ. ಜಾಯಿಂಟ್

ಸೆಕ್ಟಾರ್ ಉದ್ದಿಮೆಯಲ್ಲಿ ಸರ್ಕಾರದ ಬಂಡವಾಳ ಇರುತ್ತದೆ, ಮತ್ತು ಖಾಸಗಿಯವರ ಬಂಡವಾಳವೂ ಇರುತ್ತದೆ. ಎರಡು ಬಂಡವಾಳವೂ ಸೇರಿ ನಮ್ಮ ರಾಜ್ಯದಲ್ಲಿ ಸರ್ವತೋಮುಖವಾದ ಕೈಗಾರಿಕಾಭಿವೃದ್ಧಿಗೆ ನಾಂದಿಯಾಗುತ್ತದೆಂದು ನಾನು ಭಾವಿಸುತ್ತೇನೆ. ಇಷ್ಟು ಹೇಳಿ ಮಾನ್ಯ ಸದಸ್ಯರೆಲ್ಲರೂ ನಮ್ಮ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳಿಗೆ ತಮ್ಮ ಅನುಮತಿಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಬೆಂಗಳೂರಿನಲ್ಲಿರತಕ್ಕ ಕೈಗಾರಿಕೆಗಳಲ್ಲಿ ಮೈಸೂರಿನ ಜನತೆಗೆ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿಲ್ಲ ಎಂದು ಅನೇಕರು ಹೇಳುತ್ತಿದ್ದಾರೆ. ನಮ್ಮ ಬೆಂಗಳೂರಿನ ಸುತ್ತಮುತ್ತ ಇರತಕ್ಕ ಪ್ರದೇಶಗಳಲ್ಲಿ ಅನೇಕ ನಿರುದ್ಯೋಗಿಗಳು ಇದ್ದಾರೆ. ಆದ್ದರಿಂದ ಸಾಧ್ಯವಾದಷ್ಟು ಮಟ್ಟಿಗೆ ಕೇಂದ್ರ ಸರ್ಕಾರದ ಮತ್ತು ಇತರ ಕೈಗಾರಿಕೆಗಳಲ್ಲಿ ನಮ್ಮ ಮೈಸೂರಿನವರಿಗೆ ಹಾಗೂ ಈಗ ಬೆಂಗಳೂರಿನ ಸುತ್ತಮುತ್ತ ಇರತಕ್ಕ ಪ್ರದೇಶಗಳಲ್ಲಿ ನಿರುದ್ಯೋಗಿಗಳೇನಿದ್ದಾರೆ ಅವರಿಗೆ ಈ ಕೈಗಾರಿಕೆಗಳಲ್ಲಿ ಕೆಲಸವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮುಂದೆ ಆ ಕೈಗಾರಿಕೆಗಳಲ್ಲಿ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಮೈಸೂರಿನವರಿಗೆ ಪ್ರಾತಿನಿಧ್ಯ ಸಿಕ್ಕುವಂತೆ ಪ್ರಯತ್ನವನ್ನು ಮಾಡಲಾಗುತ್ತದೆ.

† ಶ್ರೀ ಡಿ. ಕೆ ನಾಯ್ಕರ್ (ನ್ಯಾಯಾಂಗ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಿನ್ನೆ ಮಂಡಿಸಿದ ಡಿಮ್ಯಾಂಡ್ ನಂ. 9 ಮತ್ತು 11ರ ಮೇಲೆ ಸಾಕಷ್ಟು ಚರ್ಚೆಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಚರ್ಚೆಯ ಕಾಲದಲ್ಲಿ ಹಲವಾರು ಉಪಯುಕ್ತವಾದ ಸಲಹೆಗಳನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಅವರು ಸೂಚಿಸಿದಂತಹ ಉಪಯುಕ್ತವಾದ ಸಲಹೆಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳುತ್ತಾರೆ ಎನ್ನುವ ಭರವಸೆಯನ್ನು ನಾನು ನೀಡಬಯಸುತ್ತೇನೆ. ಅದೇ ರೀತಿ ಉಪಯುಕ್ತವಾದ ಸಲಹೆಗಳನ್ನು ನೀಡಿದಂತಹ ಎಲ್ಲಾ ಮಾನ್ಯ ಸದಸ್ಯರಿಗೂ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕೆಲವು ಸದಸ್ಯರು ನ್ಯಾಯಾಲಯಗಳಲ್ಲಿ ಸಾಕಷ್ಟು ಕೇಸುಗಳು ಪೆಂಡಿಂಗ್ ಇವೆ; ಯೋಗ್ಯವಾದ ಕಾಲದಲ್ಲಿ ಡಿಸ್ಪೋಸಲ್ಸ್ ಆಗುತ್ತಾ ಇಲ್ಲ; ಲಿಟಿಂಗಟ್ ಪಬ್ಲಿಕ್ಸ್‌ಗೆ ನ್ಯಾಯ ದಾನ ಸಿಗುತ್ತಾ ಇಲ್ಲ—ಇತ್ಯಾದಿ ಟೀಕೆಗಳನ್ನು ಮಾಡಿದ್ದಾರೆ. ಈ ಬಗ್ಗೆ ನಾನಾದರೂ ಹೇಳುವುದೇನೆಂದರೆ ಇಂತಹ ಕೇಸುಗಳನ್ನು ಡಿಸ್ಪೋಸ್ ಮಾಡುವುದರ ಬಗ್ಗೆ ಎಷ್ಟು ಗಮನ ಸರ್ಕಾರದವರು ಕೊಡಬೇಕೋ ಅಷ್ಟು ಗಮನವನ್ನು ದಕ್ಷತೆಯಿಂದ ಕೊಟ್ಟಿದ್ದಾರೆಂದು ಹೇಳುತ್ತೇನೆ. 70-71ನೇ ಸಾಲಿನಿಂದ ಇಲ್ಲಿಯ ವರೆಗೆ 10 ಅಡಿಶನಲ್ ಕೋರ್ಟುಗಳನ್ನು ಮತ್ತು 10 ಸಪರೇಟ್ ಕೋರ್ಟುಗಳನ್ನು ಈ ಬಗ್ಗೆ ತೆರೆಯಲಾಗಿದೆ. ಆದ್ದರಿಂದ ತಾವು ಕೋರ್ಟುಗಳನ್ನು ತೆಗೆದ ತಕ್ಷಣಕ್ಕೆ ಕೇಸುಗಳು ಡಿಸ್ಪೋಸ್ ಆಗುತ್ತವೆಂಬ ನಂಬಿಕೆಯನ್ನು ಇಟ್ಟುಕೊಳ್ಳಬಾರದು. ಏಕೆಂದರೆ ಇನ್ನೂ ಇತರ ಕಾರಣಗಳಿಂದ ಕೋರ್ಟುಗಳಲ್ಲಿ ಕೇಸುಗಳು ಪೆಂಡಿಂಗ್ ಬೀಳುವ ಸಂದರ್ಭ ಇರುತ್ತದೆ. ಅದೇನೆಂದರೆ ಈ ಕಟ್ಲೆಗಳನ್ನು ಮಾಡಿದಾಗ, ಈ ಮೂವ್‌ಮೆಂಟ್ ಆಫ್ ಕೇಸಸ್ ಏನಿವೆ, ಅವುಗಳ ಬಗ್ಗೆ ಈ ಲಿಟಿಗಂಟ್ ಪಬ್ಲಿಕ್‌ಗಳು ಸರಿಯಾದ ಕಾಲದಲ್ಲಿ ತಕ್ಕ ಕ್ರಮಗಳನ್ನು ತೆಗೆದುಕೊಳ್ಳದೆ ಇರುವಂತಹ ಪ್ರಸಂಗಗಳು ಅನೇಕ ಇರುತ್ತವೆ. ಆದ್ದರಿಂದ ಕೆಲವು ಕೋರ್ಟುಗಳನ್ನು ಸರ್ಕಾರದವರು ಈಗಾಗಲೇ ತೆರೆದಿದ್ದಾರೆ; ಇನ್ನೂ ಕೆಲವು ತೆರೆಯುವುದರ ಬಗ್ಗೆ ಯೋಚನೆ ಮಾಡುತ್ತಿದ್ದಾರೆ. ಮತ್ತು ಸರ್ಕಾರದವರು ಹೈಕೋರ್ಟಿನ ಶಿಫಾರಸಿನ ಮೇಲೆ ಮತ್ತು ಅಂಕಿ ಅಂಶಗಳ ಆಧಾರದ ಮೇಲೆ ಇವುಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ಸದ್ಯಕ್ಕೆ ಕೋರ್ಟುಗಳ ಅವಶ್ಯಕತೆ ಎಲ್ಲೆಲ್ಲಿ ಇದೆಯೋ, ಅದನ್ನು ನೋಡಿಕೊಂಡು ಕೋರ್ಟುಗಳನ್ನು ತೆರೆಯುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾರೆಂದು ಮಾತ್ರ ಹೇಳಬಯಸುತ್ತೇನೆ. ಇನ್ನು ಪ್ರತೀ ತಾಲ್ಲೂಕಿಗೆ ಒಂದು ಕೋರ್ಟು ತೆಗೆಯಬೇಕೆಂದು ಮಾನ್ಯ ಲಿಂಗಪ್ಪನವರು ಸೂಚನೆ ಮಾಡಿದರು. ಆದರೆ ತಾಲ್ಲೂಕಿಗೆ ಒಂದು ಕೋರ್ಟು ಕೊಟ್ಟರೆ ಬಹುಶಃ ಕೆಲವು ತಾಲೂಕುಗಳಲ್ಲಿ ಅಷ್ಟೊಂದು ಕಟ್ಲೆಗಳು ಬರದಿರುವುದರಿಂದ ಹಾಗೆ ಎಲ್ಲಾ ತಾಲೂಕುಗಳಲ್ಲಿ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತು ಎಲ್ಲೆಲ್ಲಿ ಅವಶ್ಯವಿದೆ, ಅವುಗಳನ್ನು ನೋಡಿಕೊಂಡು, ಹೈಕೋರ್ಟಿನ ಶಿಫಾರಸಿನ ಮೇಲೆ, ಕಟ್ಲೆಗಳನ್ನು ಅನುಸರಿಸಿ, ಕಾನೂನು ಬದ್ಧವಾಗಿ ಮಾಡಬೇಕಾಗುತ್ತದೆ. ಇದರಲ್ಲಿ ಆದಷ್ಟು ತಾಲೂಕುಗಳು ಬಂದರೂ ಬರಬಹುದು.

ಇನ್ನು ಜಡ್ಜಸ್ ಪೇ ಸ್ಕೇಲ್ ಜಾಸ್ತಿ ಮಾಡಬೇಕು, ಮತ್ತು ಅವರಿಗೆ ಪ್ರೋತ್ಸಾಹ ನೀಡುವ ರೀತಿಯಲ್ಲಿ ಅದನ್ನು ಕೊಟ್ಟರೆ ಕೇಸುಗಳನ್ನು ಡಿಸ್ಪೋಸಲ್ ಮಾಡುವುದರಲ್ಲಿಯೂ ಒಂದು ಪ್ರೋಗ್ರೆಸ್

(ಶ್ರೀ ಡಿ. ಕೆ. ನಾಯ್ಕರ್)

ಮಾಡಿದ ಹಾಗೆ ಆಗುತ್ತದೆಂದು ಸಹ ಕೆಲವು ಸದಸ್ಯರು ಹೇಳಿದರು. ಅವರಿಗೆ ಪ್ರೋತ್ಸಾಹ ಕೊಡುವ ಬಗ್ಗೆ ಯೋಗ್ಯವಾದ ವೇತನವನ್ನು ಕೊಡುವುದು ಒಳ್ಳೆಯದೆಂದು ನಾನು ತಿಳಿದು ಕೊಂಡಿದ್ದೇನೆ, ಆದರೆ ಕಾನೂನು ಬದ್ಧವಾಗಿ ಅಥವಾ ಸರ್ಕಾರದ ಯೋಚನೆಯಲ್ಲಿ ಈ ಬಗ್ಗೆ ಸದ್ಯಕ್ಕೆ ಯಾವುದೇ ಪ್ರಪೋಸಲ್ಸ್ ಇಲ್ಲದಿರುವುದರಿಂದ ಯಾವುದೇ ನಿರ್ಣಯವನ್ನು ಸರ್ಕಾರ ದವರು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಇನ್ನು ನಿವೃತ್ತಿ ವಯಸ್ಸನ್ನು 58 ರ ವರೆಗೆ ಏರಿಸಬಾರದು ಎಂದು ಕೆಲವು ಸ್ನೇಹಿತರು ಬಂದ ತುಂಡವಾಗಿ ಹೇಳಿದ್ದಾರೆ. ಅವರಿಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಒಂದು ಕಡೆ ಅವರಿಗೆ ಯೋಗ್ಯವಾದ ವೇತನ ಕೊಟ್ಟು ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತಾರೆ. ಇನ್ನೊಂದು ಕಡೆ 58ರ ವರೆಗೆ ಸರ್ವಿಸ್ ಕೊಡಬಾರದು ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ನಾನು ಹೇಳುವುದು ಇಷ್ಟೆ. ಜಡ್ಜ್‌ಸ್‌ನ್ನು ರಿಕ್ರುಟ್ ಮಾಡುವುದು ಅವರಿಗೆ 35 ವಯಸ್ಸು ಆದ ನಂತರ. ಅದರ ಮೊದಲು ಅವರು 4 ವರ್ಷದವರೆಗೆ ಪ್ರಾಕ್ಟೀಸ್ ಮಾಡಿರಬೇಕೆಂದು ಇದೆ. ಆದ್ದರಿಂದ ಅವರು 35 ವಯಸ್ಸಿನ ವರೆಗೆ ಕೋರ್ಟುಗಳಲ್ಲಿ ಎಂಗೇಜ್ ಆಗಿರುವುದರಿಂದ ನಿರುದ್ಯೋಗಿ ಗಳಾಗಿರುವುದಿಲ್ಲ. ಅದೇ ರೀತಿ ಇತರ ಇಲಾಖೆಯಲ್ಲಿ ನೇಮಕ ಮಾಡುವಾಗ 25 ವರ್ಷಗಳ ವಯಸ್ಸನ್ನು ಇಟ್ಟುಕೊಂಡಿರುತ್ತಾರೆ. ಅವರಿಗೂ ಇವರಿಗೂ 10 ವರ್ಷಗಳ ವ್ಯತ್ಯಾಸ ಇರುತ್ತದೆ. ಆದ್ದರಿಂದ ಅವರು ಮ್ಯಾಜಿಸ್ಟ್ರೇಟ್ ಆಗಿ, ಸಿವಿಲ್ ಜಡ್ಜ್ ಆಗಿ ಮತ್ತು ಡಿಸ್ಟ್ರಿಕ್ಟ್ ಜಡ್ಜ್ ಆಗಿ—ಈ ಮೂರು ಕೆಟಗರಿಯಲ್ಲಿ ಸರ್ವಿಸ್ ಮಾಡಿರುವುದರಿಂದ ಅವರ ಬುದ್ಧಿ ಇನ್ನೂ ಸೂಕ್ಷ್ಮವಾಗಿ ಬೆಳೆಯುತ್ತದೆ. ಹೀಗೆ ಅವರ ಬುದ್ಧಿ ಬಹಳ ಬೆಳೆದಾಗ ನಮ್ಮ ಸರ್ಕಾರಕ್ಕೆ ಅವರ ಸೇವೆಯಿಂದ ಬಹಳ ಉಪಯೋಗವಾಗುತ್ತದೆ. ಆದ್ದರಿಂದ ಯಾವ ವೇಳೆಯಲ್ಲಿ ಅವರ ಸರ್ವಿಸ್ ಬೇಕಾಗುತ್ತದೋ ಆ ವೇಳೆಯಲ್ಲಿ ನಾವು ಬೇಡ ಎಂದು ಹೇಳುವುದು ಸರಿಕಾಣುವುದಿಲ್ಲ. ಇನ್ನೊಂದು ಏನೆಂದರೆ, ಈ ಜುಡಿಶಿಯಲ್ ಆಫೀಸರ್ಸ್ ರಿಟೈಯರ್ ಆಗುವಾಗ 20—21 ವರ್ಷ ಟೋಟಲ್ ಸರ್ವಿಸ್ ಮಾಡಿದರೆ ಹೆಚ್ಚು. ಆದರೆ ಉಳಿದ ಇಲಾಖೆಗಳಲ್ಲಿ 30-31 ವರ್ಷ ಸರ್ವಿಸ್ ಮಾಡುವಂತಹ ಅವಕಾಶ ಇರುತ್ತದೆ. ಆದ್ದರಿಂದ ಇವರಿಗೆ ಹೆಚ್ಚು ವರ್ಷ ಸರ್ವಿಸ್ ಮಾಡಿದಂತಹ ಬೆನಿಫಿಟ್ ಸಹ ಇರುವುದಿಲ್ಲ. ಕೆಲವರು ಇವರಿಗೆ ಹೀಗೆ ಹೆಚ್ಚು ಸರ್ವಿಸ್‌ನಲ್ಲಿ ಇಟ್ಟರೆ ಅವರ ಕೈಕೆಳಗೆ ಇರುವಂತ ವರಿಗೆ ಪ್ರೊಮೋಷನ್ಸ್ ಸಿಗುವ ಸಂದರ್ಭ ಕೂಡ ಕಡಿಮೆ ಎಂದು ಹೇಳಿದರು. ನನಗೆ ಅದು ಸರಿಕಾಣುವುದಿಲ್ಲ. ಏಕೆಂದರೆ, ಅವರಿಗೆ ಸಿಗುವ ಪ್ರೊಮೋಷನ್ ಕೇವಲ ಒಂದು ಮೂರು ವರ್ಷದಲ್ಲಿ ಮಾತ್ರ ಸಿಗುತ್ತದೆ. ಸದ್ಯಕ್ಕೆ ಮೂರು ವರ್ಷ ಮಾತ್ರ ಮುಂದಕ್ಕೆ ಹೋಗುತ್ತದೆಂದು ಮಾತ್ರ ಹೇಳುತ್ತೇನೆ. ಎಲ್ಲರಿಗೂ ಇದೇ ರೀತಿಯಲ್ಲಿ ಅನ್ವಯವಾಗುವುದರಿಂದ ಅದರಿಂದ ಏನೂ ತೊಂದರೆಯಾಗುವುದಿಲ್ಲ. ಆದ್ದರಿಂದ 58ಕ್ಕೆ ವಯಸ್ಸು ಇದ್ದುದನ್ನು ಇಳಿಸಬೇಕೆಂಬುದರ ಬಗ್ಗೆ ಸರ್ಕಾರ ಯಾವ ಒಂದು ನಿರ್ಣಯವನ್ನೂ ಕೈಗೊಂಡಿಲ್ಲವೆನ್ನುವ ವಿಚಾರವನ್ನು ತಮಗೆ ತಿಳಿಸುತ್ತೇನೆ.

ಮತ್ತು ಇನ್ನೊಂದು ವಿಚಾರವೇನೆಂದರೆ, ಕೋರ್ಟುಗಳಿಗೆ ಯೋಗ್ಯವಾದ ಕಟ್ಟಡಗಳು ಇಲ್ಲ ಮತ್ತು ಕೋರ್ಟುಗಳನ್ನು ಟೆಂಪಲ್ ಆಫ್ ಜಸ್ಟಿಸ್ ಇದ್ದ ಹಾಗೆ ನೋಡಬೇಕು; ಜಡ್ಜ್‌ಗಳನ್ನು ದೇವರ ಹಾಗೆ ನೋಡಬೇಕೆನ್ನುವ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕೋರ್ಟು ಕಟ್ಟಡಗಳ ಬಗ್ಗೆ ಈ ಎಕಾನಮಿ ಮೆಜರ್ಸ್‌ನಿಂದಾಗಿ ಸಾಧ್ಯವಾದಷ್ಟು ಮಟ್ಟಿಗೆ ಅವುಗಳನ್ನು ಪೂರೈಸ ಲಾಗಲಿಲ್ಲ. ಅದೇ ರೀತಿ ಜುಡಿಷಿಯಲ್ ಕ್ವಾರ್ಟರ್ಸ್ ಬಗ್ಗೆ ಪ್ರತಿ ವರ್ಷ 50 ಸಾವಿರದಿಂದ 1 ಲಕ್ಷದ ವರೆಗೆ ಸರ್ಕಾರದವರು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಈ ಎಕಾನಮಿ ಮೆಜರ್ಸ್ ನಿಂದ ಸ್ವಲ್ಪ ಅದರಲ್ಲಿ ಕಡಿತವಾಗಿದೆ. ಆದರೂ ಸಹ ಈ ವಿಚಾರದಲ್ಲಿ ಸರ್ಕಾರ ಆದಷ್ಟು ಗಮನ ವನ್ನು ಕೊಡುತ್ತದೆ ಎಂದು ಹೇಳುತ್ತೇನೆ. ಇನ್ನು ಫರ್ನಿಚರ್ ಐಟಮುಗಳು ಇದರಲ್ಲಿ ಬರುವುದಿಲ್ಲ; ಅದು ಮಿಸಲೇನಿಯಸ್‌ನಲ್ಲಿ ಬರುತ್ತದೆ.

Sri D. B. KALMANKAR (Afzalpur).—The Munsiff Magistrates at the taluka level, in many cases, are not working efficiently and there is a lot of corruption, with the result the people are losing faith in the Temple of Justice. Whether the Government will consider to devise some new methods to see that people with integrity and honesty are recruited to these posts so that people may have faith in these courts which are called Temples of Justice?

ಶ್ರೀ ಡಿ. ಕೆ. ನಾಯ್ಕರ್.—ನಾನು ಈಗಾಗಲೇ ಹೇಳಿದ ಹಾಗೆ ಬಿಲ್ಡಿಂಗ್ಸ್ ಬಗ್ಗೆ ಕೂಡ ಸರ್ಕಾರದವರು ಲಕ್ಷ ಕೊಡುತ್ತಿದ್ದಾರೆ. ಮತ್ತು ಕೋರ್ಟುಗಳ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಹೈಕೋರ್ಟಿಗೆ ಇರುವುದರಿಂದ ಕಾಲ ಕಾಲಕ್ಕೆ ಅವರು ಯೋಗ್ಯ ಕ್ರಮಗಳನ್ನು ತೆಗೆದುಕೊಂಡು ಸರ್ಕುಲರ್ ಇಶ್ಯೂ ಮಾಡುತ್ತಿದ್ದಾರೆ. ಇನ್ನು ಮಾಗಡಿ ಮತ್ತು ಬಸವಕಲ್ಯಾಣದ ಕೋರ್ಟಿನ ಬಗ್ಗೆ ಮಾನ್ಯ ಸದಸ್ಯರು ಒಂದು ವಿಚಾರ ಹೇಳಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ, ಅದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಇನ್ನು ಕ್ರಿಮಿನಲ್ ಪ್ರೊಸೀಜರ್ ಕೋಡಿನ 107 ಮತ್ತು 110ನೇ ಸೆಕ್ಷನ್ ಪ್ರಕಾರ ಸ್ಪೆಶಲ್ ಜುಡಿಶಿಯಲ್ ಮ್ಯಾಜಿಸ್ಟ್ರೇಟ್ ಪವರನ್ನು ಅಸಿಸ್ಟೆಂಟ್ ಕಮಿಶನರಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆಂದು ಕೆಲವು ಸದಸ್ಯರು ಹೇಳಿದರು. ಆದರೆ ಇದು ಸೆಕ್ಯೂರಿಟಿ ಪ್ರೊಸೀಡಿಂಗ್ಸ್ ಇರುವುದರಿಂದ ಇದರಲ್ಲಿ ಎಕ್ಸಿಕ್ಯೂಟಿವ್ ಆಫೀಸರ್ಸ್ ಕೆಲಸ ಮಾಡುತ್ತಾರೆಯೇ ಹೊರತು ಜ್ಯುಡಿಶಿಯಲ್ ಪವರ್ಸ್ ಕೊಟ್ಟಿಲ್ಲವೆಂದು ಮಾತ್ರ ಹೇಳುತ್ತೇನೆ.

ಇನ್ನು ಕೋರ್ಟುಗಳಲ್ಲಿ ಕನ್ನಡ ಭಾಷೆ ಬಳಸುವ ಬಗ್ಗೆ ಸೂಚನೆಗಳು ಬಂದಿವೆ. ರಾಜ್ಯಾಂಗದ ಆರ್ಟಿಕಲ್ 348 ಪ್ರಕಾರ ಹೈಕೋರ್ಟು ಮತ್ತು ಸುಪ್ರೀಂ ಕೋರ್ಟುಗಳ ಯಾವುದೇ ಪ್ರೊಸೀಡಿಂಗ್ಸ್ ಇಂಗ್ಲೀಷ್‌ನಲ್ಲಿರತಕ್ಕದ್ದು ಎಂದು ಇದೆ. ಆದರೆ ನಮ್ಮ ಸಬೋರ್ಡಿನೇಟ್ ಕೋರ್ಟುಗಳಲ್ಲಿ ಯಾವುದಾದರೂ ಅಂದರೆ ಇಂಗ್ಲಿಷ್ ಬಿಟ್ಟು ಇತರ ಭಾಷೆಗಳಲ್ಲಿ ಮಾಡಬೇಕಾದರೆ, ಹೈಕೋರ್ಟಿನಿಂದ ಸರ್ಕಾರಕ್ಕೆ ಸಲಹೆ ಬರಬೇಕೆಂದು ಸಿವಿಲ್ ಪ್ರೊಸೀಜರ್ ಕೋಡಿನಲ್ಲಿದೆ. ಈ ಬಗ್ಗೆ ವಿಚಾರ ವಿನಿಮಯ ಮಾಡಲು ಸರ್ಕಾರ ಯೋಗ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ರೆವಿನ್ಯೂ ಪೀಪಲ್ ಎಗ್ಸಿಕ್ಯೂಟಿವ್ ಪೀಪಲ್ ಆಗಿರುತ್ತಾರೆ. ಅವರ ಸಾಮಾನ್ಯವಾಗಿ ಕೇಳಿಕೆಯಿಂದ ಕೆಲಸ ಮಾಡುವ ಜನರು. ಅವರಿಂದ Complications would be more than doing justice. ಇನ್ನು ಜುಡಿಷಿಯಲ್ ಪವರ್ ಸಬ್ ಡಿವಿಷನ್ ಆಫೀಸರಿಗೆ ಇರುತ್ತದೆ. ಆದರೂ ಅದನ್ನು ಅಲ್ಲಿ ಎಗ್ಸಿಕ್ಯೂಟ್ ಮಾಡುವುದಕ್ಕಾಗುವುದಿಲ್ಲ. ಇದನ್ನು ಜುಡಿಷಿಯಲ್ ಡಿಪಾರ್ಟ್‌ಮೆಂಟಿಗೆ ಕೊಡುವುದು ಮೇಲು. ಈಗ ರೆವಿನ್ಯೂ ಅಧಿಕಾರಿಗಳಿಗೆ ಇರುವ ಜುಡಿಷಿಯಲ್ ಪವರ್ ಏನಿದೆಯೋ ಅದನ್ನು ತೆಗೆದಿದ್ದಾರೆ. ಅದರ ಸೋಗು, ನೆರಳು ಮಾತ್ರ ಈಗ ಇವೆ. ಅದು ಈಗ ವೀಕ್ ಆಗುತ್ತಿದೆ. ಅವರ ಮನಸ್ಸಿನಲ್ಲಿರುವ ಹಾಗೆ ಜುಡಿಯಲ್ ಪವರ್ ಏನಿದೆಯೋ ಸಬ್ ಡಿವಿಷನ್ ಆಫೀಸ್ ಮಟ್ಟದಲ್ಲಿ ಅದನ್ನು ತೆಗೆಯುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ ಇದೆ. ಆ ಬಗ್ಗೆ ಸರ್ಕಾರದವರು ಸೂಕ್ತ ಆಲೋಚನೆ ಮಾಡಬೇಕು.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರು ಸೂಚಿಸಿದ ಹಾಗೆ ಯಾವುದೇ ಪ್ರೊಪೋಸಲ್ ಇದರ ಬಗ್ಗೆ ಇಲ್ಲದೇ ಇರುವುದರಿಂದ ಮುಂದೆ ಏನಾದರೂ ಈ ಪ್ರೊಪೋಸಲ್ಸ್ ಬಂದರೆ ಯೋಗ್ಯವಾಗಿ ವಿಚಾರಿಸಲಾಗುವುದು.

ಇನ್ನು ಅಪ್ಪರ್ ಹೌಸನ್ನು ಅಬಾಲಿಷ್ ಮಾಡಬೇಕೆಂದು ನನ್ನ ಸ್ನೇಹಿತರು ಹೇಳಿದ್ದಾರೆ. ಆ ಬಗ್ಗೆ ಇಷ್ಟು ಮಾತ್ರ ಹೇಳಬಲ್ಲೆ. ಈ ವಿಷಯ 1970ನೇ ಇಸವಿಯಲ್ಲಿ ಹಿಂದಿನ ಸರ್ಕಾರದ ಮುಂದೆ ಬಂದಿತ್ತು. ಆ ಆಟಿಟ್ಯೂಡ್ ಏನೋ ಒಳ್ಳೆಯದು. ಇದನ್ನು ಕ್ಯಾಬಿನೆಟ್‌ನಲ್ಲಿ ರಿಕಾರ್ಡ್ ಮಾಡುವ ವಿಷಯದಲ್ಲಿ ಅಪ್ಪರ್ ಹೌಸ್ ಅಬಾಲಿಷ್ ಮಾಡುವುದು ಸರಿಯಲ್ಲವೆಂದು 1970ನೇ ಇಸವಿಯಲ್ಲಿ ಹಿಂದಿನ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಈಗಲೂ ಕೂಡ ಅದು ಇದೇ ರೀತಿಯಲ್ಲಿ ಮುಂದುವರಿಸಬೇಕೆಂದು ಸರ್ಕಾರದ ಧೋರಣೆ ಇದೆ. ನನ್ನ ಬಗ್ಗೆ ಸಮರ್ಥನೆ ಮಾಡುವುದಾದರೆ, ಮೈನಾರಿಟಿ ಜನಗಳಿಗೆ, ಟೀಚರ್ಸ್‌ಗೆ, ಗ್ರಾಜುಯೇಟ್‌ಗಳಿಗೆ ವಿದ್ಯಾ ಪರಿಣತರಿಗೆ ಮುಂತಾದವರಿಗೆ ಸಾರ್ವಜನಿಕ ಚುನಾವಣೆಗಳಲ್ಲಿ ಭಾಗವಹಿಸುವುದಕ್ಕೆ ಹೆಚ್ಚು ಕಡಿಮೆ ಸಾಕಷ್ಟು ಅವಕಾಶ ಇಲ್ಲದೇ ಇರುವುದರಿಂದ, ಈ ವರ್ಗದವರನ್ನೇ ಕಾನೂನು ಸಂಬಂಧವಾಗಿ ಪ್ರತ್ಯೇಕ ಒಂದು ಭಾಗವಾಗಿ ತೆಗೆದುಕೊಂಡು ಅವರು ಯೋಗ್ಯವಾಗಿ ಡಿಸ್‌ಕಷನ್ ಮಾಡುವಂಥ ಸಂದರ್ಭ ಒದಗಿ ಬರಲಿ ಎಂಬ ಉದ್ದೇಶದಿಂದ ಇದು ಇರುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).— ಇದರ ಬಗ್ಗೆ ಈ ಸಭೆಯಲ್ಲಿ ಒಂದು ನಿರ್ಣಯ ಮಾಡಿ ಓಟಿಗೆ ಹಾಕುತ್ತೀರಾ ? ನಾಮಕರಣಗಳ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ನಾಮಕರಣಗಳ ಬಗ್ಗೆ ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಇದರಲ್ಲಿ ಲಿಟರೇಚರ್ ಮತ್ತು ಜರ್ನಲಿಜಂ ಅವರಿಗೆ ಪ್ರಾಧಾನ್ಯತೆ ಕೊಡುತ್ತೇವೆ. ನಮ್ಮ ವಿಧಾನ ಪರಿಷತ್ತಿನಲ್ಲಿ ಶ್ರೀಮತಿ ಕಮಲಾನಿ ಎಂಬುವರು ಬಿ.ಎ.ಎಲ್.ಎಲ್.ಬಿ. ಮತ್ತು ಅವರು ಜರ್ನಲಿಸ್ಟ್ ಆಗಿದ್ದಾರೆ. ಅದಕ್ಕಾಗಿ ಅವರನ್ನು ಸರ್ಕಾರದ

(ಶ್ರೀ ಡಿ. ಕೆ. ನಾಯ್ಕರ್)

ವರು ನಾಮಿನೇಟ್ ಮಾಡಿದ್ದಾರೆ ಯಾರು ನಮ್ಮ ರಾಷ್ಟ್ರಕ್ಕಾಗಿ ದುಡಿದ್ದಾರೆ, ಯಾರು ಯೋಗ್ಯ ಹೆಸರನ್ನು ಪಡೆದಿದ್ದಾರೆ, ಅವರಿಗೆ ಕಾನೂನು ಪ್ರಕಾರ ನಾಮಿನೇಟ್ ಆಗಲು ಅರ್ಹತೆಗಳಿದ್ದರೆ ಆ ಎಲ್ಲಾ ಅರ್ಹತೆಗಳಿವೆಯೇ ಎಂಬುದನ್ನು ನೋಡಿ ಅಂತಹವರನ್ನು ನಾಮಿನೇಟ್ ಮಾಡಲಾಗುತ್ತದೆ.

ಇನ್ನು ಎಲೆಕ್ಷನ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಬೇಕೆಂಬ ಬಗ್ಗೆ ಮಾನ್ಯ ಶ್ರೀ ಅರ್ಮುಗಂ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ ಎಲೆಕ್ಷನ್ ಮ್ಯಾಟರ್ಸ್, ಅಂದರೆ ಕಂಟ್ರೋಲ್ ಅಂಡ್ ಪ್ರಿಪರೇಷನ್ ಅಫ್ ವೋಟರ್ಸ್ ಲಿಸ್ಟ್ಸ್—ಈ ಕೆಲಸವನ್ನು 324 ಸೆಕ್ಷನ್ನಿನ ಕಾನೂನು ಪ್ರಕಾರ ಎಲೆಕ್ಷನ್ ಕಮಿಷನ್ನಿಗೆ ಬಿಟ್ಟು ಕೊಡದೆ ಇದರ ಬಗ್ಗೆ ಪಾರ್ಲಿಮೆಂಟ್ ಕಾನೂನು ಮಾಡುವ ಅಧಿಕಾರವಿದೆ. ರೆಪ್ರಸೆಂಟೇಷನ್ ಅಫ್ ಪೀಪಲ್ಸ್ ಆಕ್ಟ್ ಸೆಕ್ಷನ್ 50ರಲ್ಲಿ ಕಾನೂನುಗಳನ್ನು ಸಿದ್ಧಮಾಡಿದೆ. ಆ ಕಾನೂನುಗಳ ಪ್ರಕಾರ ಸೆಕ್ಷನ್ 21ರಲ್ಲಿ ಕಾನೂನು ಇದ್ದ ವ್ಯಾಪ್ತಿಯಲ್ಲಿ ಲಾ ಕಮಿಷನ್ ಪೀರಿಯಾಡಿಕಲ್ಲಾಗಿ ಲಿಸ್ಟನ್ನು ರಿವೈಜ್ ಮಾಡುವ ಅಭಿಪ್ರಾಯವನ್ನು ಇಟ್ಟುಕೊಂಡಿದೆ. ಅವರು ಎಲೆಕ್ಷನ್ನಿನಲ್ಲಿ ಎಕ್ಸ್‌ಪೆಂಡಿಚರ್ ಏನು ಇರಬೇಕೆಂಬ ಬಗ್ಗೆ ಒಂದು ನಿರ್ದಿಷ್ಟವಾಗಿ ಕಾನೂನು ಪ್ರಕಾರ ತೋರಿಸಿದ್ದಾರೆ. ಆದ್ದರಿಂದ ಯಾವತ್ತು ಅವಶ್ಯಕವಾದಂಥ ಕಾನೂನುಗಳನ್ನು ಪಾರ್ಲಿಮೆಂಟ್ ಮಾಡಿರುತ್ತದೋ ಅದರ ಬಗ್ಗೆ ನಮ್ಮ ಸ್ಟೇಟ್ ಲೆಜಿಸ್ಲೇಷನ್ ಯಾವುದೇ ಎನಾಕ್ಟ್‌ಮೆಂಟ್ ಮಾಡದೇ ಇರುವುದರಿಂದ, ಆ ಬಗ್ಗೆ ನಾನು ಇಲ್ಲಿ ಏನು ಹೇಳಲಿ? ಅದರ ಬಗ್ಗೆ ಎಕ್ಸ್‌ಪೆಂಡಿಚರ್ ಏನಿರಬೇಕೆಂಬುದನ್ನು ರೂಲ್ಸಿನಲ್ಲಿ ಕೊಟ್ಟಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ವಿಧಾನಮಂಡಲದ ವರದಿಗಾರರ ಸಂಬಳ ಸಾರಿಗೆ ಹಾಗೂ ಕನ್ನಡ ವರದಿಗಾರರಿಗೆ ಟೈಪಿಂಗ್ ಅಲೋಯನ್ಸ್ ಕೊಡುವ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಅದನ್ನು ತಿಳಿಸಬೇಕು.

ಶ್ರೀ ಡಿ. ಕೆ. ನಾಯ್ಕರ್.—ರಿಪೋರ್ಟರ್ಸ್ ಪೇ ಸ್ಕೇಲ್ಸ್ ಹಾಗೂ ಇತರ ಅಲೋಯನ್ಸ್‌ಸ್ ಬಗ್ಗೆ ಏನೇನು ಪ್ರೊಪೋಸಲ್‌ಗಳು ಮಾನ್ಯ ಸ್ಪೀಕರ್ ಅವರ ಕಡೆಯಿಂದ ಬರುತ್ತವೆಯೋ ಅದರ ಬಗ್ಗೆ ಸರ್ಕಾರದವರು ಯೋಗ್ಯ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನು ಆಶ್ವಾಸನ ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ. (ಹೊಳೇನರಸೀಪುರ).—ಅದು ನಿಮ್ಮ ಹಿಡಿತದಲ್ಲಿಯೇ ಇದೆ ನೀವೇ ಪ್ರೊಪೋಸಲ್ಸ್ ಏನೆಂಬುದನ್ನು ತಿಳಿದು ತಕ್ಕ ಕ್ರಮವನ್ನು ತೆಗೆದುಕೊಂಡರೆ ಒಳ್ಳೆಯದು.

ಶ್ರೀ ಡಿ. ಕೆ. ನಾಯ್ಕರ್.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಅಧಿಕೃತ ವರದಿಗಾರರಿಗೆ ಮಹಾರಾಷ್ಟ್ರದಲ್ಲಿ ಕೊಟ್ಟಿರುವ ಹಾಗೆ ಸಂಬಳ ಸಾರಿಗೆಗಳನ್ನು ಮತ್ತು ಅಲೋಯನ್ಸ್‌ಗಳನ್ನು ಕೊಡಿ.

ಶ್ರೀ ಡಿ. ಕೆ. ನಾಯ್ಕರ್.—ಸ್ಪೀಕರ್ ಅವರ ಕಡೆಯಿಂದ ಪ್ರೊಪೋಸಲ್ಸ್ ಬಂದ ಕೂಡಲೇ ಅದರಂತೆ ಅವರಿಗೂ ಕೊಡುತ್ತೇವೆ. ಅದರ ಬಗ್ಗೆ ಜಾಗ್ರತೆಯಾಗಿ ಪರಿಶೀಲನೆ ಮಾಡುತ್ತೇವೆ.

ಇನ್ನು ಸದಸ್ಯರಿಗೆ ವೇತನ ಹೆಚ್ಚಿಸುವ ಬಗ್ಗೆ ಅಂದರೆ 200 ರೂಪಾಯಿಗಳನ್ನು ಜಾಸ್ತಿ ಕೊಡುವ ವಿಷಯದಲ್ಲಿ ಮಾನ್ಯ ಶ್ರೀ ಆರ್ಮುಗಂ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಇದು ಅನಾವಶ್ಯಕ. ಸೋಷಿಯಲಿಸ್ಟ್ ಪ್ಯಾಟರನ್ ಆಫ್ ಸೊಸೈಟಿಯನ್ನು ನಾವು ಸ್ಥಾಪನೆ ಮಾಡಬೇಕೆಂದು ಹೇಳುವಾಗ ನಮ್ಮ ಸಂಬಳ ಜಾಸ್ತಿ ಮಾಡಿಕೊಳ್ಳಕೂಡದು, ಅದು ಕಡಿಮೆಯಾಗಬೇಕೆಂದು ಹೇಳಿದರು. ಇದರ ಬಗ್ಗೆ ನನ್ನ ವೈಯಕ್ತಿಕ ಅಭಿಪ್ರಾಯವೇನೆಂದರೆ, ಯಾರ ಕಡೆಯಿಂದ ನಾವು ಇಲ್ಲಿಗೆ ಆರಿಸಿ ಬಂದಿದ್ದೇವೋ ಅವರೆಲ್ಲರ ಬಗ್ಗೆ ನಾವು ಜವಾಬ್ದಾರಿಯುತವಾಗಿ ಕೆಲವೊಂದು ಕೆಲಸಗಳನ್ನು ಮಾಡುವ ಪ್ರಸಂಗ ಬರುತ್ತದೆ. ಅಸೆಂಬ್ಲಿ ನಡೆದಾಗ ಅಂತಹ ಸಂದರ್ಭದಲ್ಲಿ ಅಲ್ಲಿ ಏನಾದರೂ ಮಾನ್ಯ ಸದಸ್ಯರು ಕೆಲಸಮಾಡುವ ಪರಿಸ್ಥಿತಿ ಬಂದಾಗ ಟೆಲಿಫೋನ್ ಮುಖಾಂತರ, ಪೋಸ್ಟ್ ಕಾರ್ಡು ಮುಖಾಂತರ ಪತ್ರವ್ಯವಹಾರ ಮಾಡುವ ಅನೇಕ ಸಂದರ್ಭಗಳು ಬರುತ್ತವೆ. ಅದರಿಂದಾಗಿ ಫೋನಿನ ಖರ್ಚು, ಪೋಸ್ಟೇಜು ಖರ್ಚು ಹೆಚ್ಚು ಬಂದೀತು. ಅದಕ್ಕೆ ಇದು ಸಮರ್ಥನೆಯಾದೀತು ಎಂದು ನನ್ನ ಅಭಿಪ್ರಾಯ. ಮಾನ್ಯ ಶ್ರೀ ಆರ್ಮುಗಂ ಅವರು ಮಾಡಿದಂಥ ಟೀಕೆ ಅಷ್ಟು ನಿಜವಾಗಿ ಸಮಂಜಸವಲ್ಲವೆಂದು ಹೇಳುತ್ತೇನೆ.

ಮಾನ್ಯ ಸದಸ್ಯರು ಯಾವ್ಯಾವ ಸೂಚನೆಗಳನ್ನು ಕೂಲಂಕಷವಾಗಿ ಹೇಳಿದ್ದಾರೋ ಅವೆಲ್ಲಕ್ಕೂ ನಾನು ಬೆಲೆ ಕೊಡುತ್ತೇನೆಂದು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಲೆಜಿಸ್ಲೇಚರನ್ನು ಇಂಡಿಪೆಡೆಂಟ್ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಅದನ್ನು ಪರಿಶೀಲನೆ ಮಾಡುತ್ತೇವೆ.

11-00 A. M.

† ಶ್ರೀ ಎಸ್. ಬಿ. ನಾಗರಾಳ್ (ರೇಷ್ಮೆ ಶಾಖೆಯ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷಣಿಯರೇ, ನೆನ್ನೆಯ ದಿವಸ ಸಭೆಯ ಮುಂದೆ ಮಾನ್ಯ ಕೈಗಾರಿಕಾ ಸಚಿವರು ರಾಜ್ಯದಲ್ಲಿ ರೇಷ್ಮೆ ಕೈಗಾರಿಕೆಗಳನ್ನು ಒಳಗೊಂಡು ಅನೇಕ ಕೈಗಾರಿಕಾ ಬಜೆಟ್ಟನ್ನು ಸಭೆಯ ಮುಂದೆ ಅವರು ಮಂಡಿಸಿದ್ದಾರೆ. ಈ ರೇಷ್ಮೆ ಕೈಗಾರಿಕಾ ಬಗ್ಗೆ ಈ ಸದನದ ಕೆಲವೊಂದು ಮಾನ್ಯ ಸದಸ್ಯರು ಕೆಲವು ಸೂಚನೆಗಳನ್ನು ಮಂಡಿಸಿದ್ದಾರೆ. ಆ ಸೂಚನೆಗಳಿಗನುಗುಣವಾಗಿ ಸರ್ಕಾರದವರು ಈ ದಿವಸ ಈ ಕೈಗಾರಿಕೆಯನ್ನು ಒಂದು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡು ಯಾವ ದೃಷ್ಟಿಯಿಂದಲೂ ಯಾರೊಬ್ಬರಿಗೂ ತೊಂದರೆಯಾಗದ ರೀತಿಯಲ್ಲಿ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಈ ಉದ್ಯಮದಲ್ಲಿ ತೊಡಗಿರತಕ್ಕ ಎಲ್ಲ ಜನರಿಗೂ ಅನುಕೂಲವನ್ನು ಒದಗಿಸಬೇಕೆಂಬುದೇ ಸರ್ಕಾರದವರ ಆಶಯ ಕೂಡ ಇದೆ. ಮಾನ್ಯ ಸದಸ್ಯರು ಕೆಲವರು ಮಾತನಾಡುತ್ತಾ ರೈತರಿಗೆ ರೋಗಪರಿಹಾರ ಬಿತ್ತನೆ ಬೀಜಗಳನ್ನು ಒದಗಿಸಬೇಕೆಂದೂ ಮತ್ತು ರೈತನು ತಾನು ತಯಾರಿಸತಕ್ಕ ರೇಷ್ಮೆ ಗೂಡುಗಳೇನಿದೆ ಅದನ್ನು ಮಾರುಕಟ್ಟೆಗೆ ತಂದಾಗ ಅಲ್ಲಿ ಅವನ್ನು ಮಾರಾಟ ಮಾಡುವುದಕ್ಕೆ ಒಂದು ಸರಿಯಾದ ವ್ಯವಸ್ಥೆ ಮಾಡಬೇಕೆಂದೂ ಹೇಳಿದ್ದಾರೆ. ಈ ದಿವಸ ಒಂದು ಸರಿಯಾದ ಮಾರುಕಟ್ಟೆ ರೈತನಿಗೆ ಇಲ್ಲದಿರುವುದರಿಂದ ರೈತರಿಗೆ ಬಹಳ ತೊಂದರೆ ಆಗಿದೆಯೆಂದೂ ಕೂಡ ಹೇಳಿದ್ದಾರೆ. ಸರ್ಕಾರದವರು ಇದಕ್ಕೆ ತೀವ್ರಗಮನ ಕೊಟ್ಟಿದ್ದಾರೆ. ಇದನ್ನು ತೀವ್ರವಾಗಿ ಬಗೆಹರಿಸುತ್ತಾರೆಂದು ಹೇಳಬಯಸುತ್ತೇನೆ. ಈ ಮಾರುಕಟ್ಟೆಯಲ್ಲಿ ಇರತಕ್ಕ ಆ ಒಂದು ಅವ್ಯವಸ್ಥೆ ಏನಿದೆ ಅದು ಬಹಳ ದಿನಗಳಿಂದಲೂ ಒಂದ ಸಂಪ್ರದಾಯದಹಾಗೆ ನಡೆದುಕೊಂಡು ಬಂದ ಒಂದು ಅವ್ಯವಸ್ಥೆ ಆಗಿದೆ. ಅದನ್ನು ತಕ್ಷಣಕ್ಕೇ ನಿರ್ಮೂಲ ಮಾಡುವುದಕ್ಕಾಗುವುದಿಲ್ಲ. ಆದಾಗ್ಯೂ ಸರ್ಕಾರದವರು ಇದನ್ನು ನಿರ್ಮೂಲ ಮಾಡುವುದಕ್ಕೆ ತೀವ್ರ ಗಮನವನ್ನು ಕೊಡುತ್ತಿದ್ದಾರೆ. ಇನ್ನು ಕೆಲವು ಜನರು ಈ ಸಿರಿಕಲ್ಚರಲ್ ಬಾಬಿಗೆ ತಜ್ಞರ ಕೊರತೆ ಇದೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದವರಿಗೆ ಹಾಗೆ ಅನಿಸಿಲ್ಲ. ಹಾಗೆ ಕೊರತೆ ಬಿದ್ದಿದೆ ಎಂದು ಸರ್ಕಾರಕ್ಕೆ ಕಂಡುಬಂದಾಗ ಅದನ್ನು ನಿವಾರಣೆ ಮಾಡುವುದಕ್ಕೆ ತಕ್ಷಣ ಗಮನ ಕೊಡಲಾಗುತ್ತದೆಂದು ಅಧ್ಯಕ್ಷರ ಮೂಲಕ ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ರೇಷ್ಮೇ ಧಾರಣೆಯಲ್ಲಿ ಆಗಾಗ್ಗೆ ಏರುಪೇರುಗಳಾಗುತ್ತಿರುವುದನ್ನು ಸರ್ಕಾರ ಕೂಡ ಗಮನಿಸಿದೆ. ಅದರಿಂದ ಕೆಲವುವೇಳೆ ನೇಕಾರರಿಗೂ, ಕೆಲವು ವೇಳೆ ರೈತರಿಗೂ ತೊಂದರೆಗಳಾಗುತ್ತಿವೆ. ಈ ವಿಚಾರದಲ್ಲಿ ಸರ್ಕಾರಕ್ಕೂ ಕೂಡ ಅನುಕಂಪವಿದೆ. ಕಳೆದ 10 ವರ್ಷಗಳ ಒಂದು ಅವಧಿಯಲ್ಲಿ ಮೈಸೂರು ರಾಜ್ಯದಲ್ಲಿ ರೇಷ್ಮೇ ಧಾರಣೆ ಒಂದೆರಡಾವರ್ತಿ 135 ಮತ್ತು 146 ರವರೆಗೂ ಇಳಿದಿದ್ದು ಮತ್ತು 200 ರೂಪಾಯಿಗಳವರೆಗೂ ಏರಿದ್ದನ್ನು ಗಮನಿಸಿದೆ. ಕೆಲವು ಸಾರಿ ನವಂಬರ್ ಡಿಶಂಬರ್ ತಿಂಗಳುಗಳಲ್ಲಿ ಧಾರಣೆ ಇಳಿದು ಮತ್ತೆ ಜನವರಿ ಮಾರ್ಚಿ ತಿಂಗಳುಗಳಲ್ಲಿ ಏರುತ್ತಿದೆ. ಈ ರೇಷ್ಮೆ ಕೈಗಾರಿಕೆಯನ್ನು ಯಾವರೀತಿ ಅಭಿವೃದ್ಧಿಮಾಡಬೇಕು ಎಂಬುದನ್ನು ಕುರಿತು ವಿವರವಾದ ಒಂದು ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳವರು ಕಳೆದ ಏಪ್ರಿಲ್ ತಿಂಗಳಲ್ಲಿ ಕೊಟ್ಟಿದ್ದಾರೆ. ಸರ್ಕಾರದವರು ಇದರ ಸಲುವಾಗಿ ಒಂದು ಮತ್ತು ಎರಡು ಪ್ಲಾನುಗಳನ್ನು ಹಾಕಿಕೊಂಡು ಇದರ ಅಭಿವೃದ್ಧಿಯನ್ನು ಮಾಡಬೇಕೆಂದಿದ್ದಾರೆ. ಒಂದನೇ ಪ್ಲಾನಿನಲ್ಲಿ 7 ಲಕ್ಷ 25 ಸಾವಿರ ಕೆ. ಜಿ. ರೇಷ್ಮೆ ಬೆಳೆಯು ಬೆಳೆಯುತ್ತಿದ್ದಂಥ ಪರಿಸ್ಥಿತಿ ಹೋಗಿ ಈ ದಿವಸ ನಾಲ್ಕನೇ ಪ್ಲಾನಿನಲ್ಲಿ ಅದು 18 ಲಕ್ಷ ಕೆ. ಜಿ. ಬೆಳೆಯತಕ್ಕ ಪದ್ಧತಿಗೆ ಬಂದಿದೆ. ಅದಾಗ್ಯೂ ಇದಿನ್ನೂ ಸಾಲದೆಂದೇ ಸರ್ಕಾರದವರ ಅಭಿಪ್ರಾಯ. ಅದಕ್ಕಾಗಿ ಅವರು ಈಗ ತಂದಿರತಕ್ಕ ಕ್ರಾಷ್ ಪ್ರೋಗ್ರಾಮಿನಲ್ಲಿ 18 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿ 10 ವರ್ಷಗಳ ಅವಧಿಯಲ್ಲಿ 35 ಲಕ್ಷ ಕೆ. ಜಿ. ರೇಷ್ಮೆಯನ್ನು ಬೆಳೆಯತಕ್ಕ ಒಂದು ಯೋಜನೆಯನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದವರ ಸಹಾಯದಿಂದ ಹಾಕಿಕೊಂಡಿರುತ್ತದೆ. ಇದರಲ್ಲಿ ಸರ್ಕಾರದವರ ಗುರಿ ಈ ರೇಷ್ಮೇ ಧಾರಣೆ ವಿಶೇಷವಾಗಿ ಇಳಿಯಲೂ ಬಾರದು ಮತ್ತು ವಿಶೇಷವಾಗಿ ಏರಲೂಬಾರದು ಅನ್ನುವುದಾಗಿದೆ. ರೇಷ್ಮೇ ಧಾರಣೆ ವಿಶೇಷವಾಗಿ ಇಳಿದರೆ ರೈತರಿಗೆ ತೊಂದರೆ ವಿಶೇಷವಾಗಿ ಏರಿದರೆ ನೇಕಾರರಿಗೆ

(ಶ್ರೀ ಎಸ್. ಬಿ. ನಾಗರಾಳ್)

ತೊಂದರೆ. ಈ ಉಭಯತ್ರರ ಯೋಗಕ್ಷೇಮಗಳನ್ನು ಕಾಪಾಡಿಕೊಂಡು ಬರಲು ಒಂದು ರೇಷ್ಮೆ ಕೊಳ್ಳತಕ್ಕ ಕಾರ್ಪೊರೇಷನ್ನು ಮಾಡಿದೆ. ಈ ಕಾರ್ಪೊರೇಷನ್ ಮೂಲಕ ಯಾರಿಗೂ ತೊಂದರೆ ಆಗದರೀತಿಯಲ್ಲಿ ಕೆಲಸಮಾಡುವುದಕ್ಕೆ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಇನ್ನು ಸರ್ಕಾರದವರ ಮುಂದಿರತಕ್ಕ ಈ ಕ್ರಾಷ್ ಪ್ರೋಗ್ರಾಮು ಏನೆಂಬುದನ್ನು ಸ್ವಲ್ಪ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ ಕೇಂದ್ರ ಸರ್ಕಾರದವರ ನೆರವಿನಿಂದ ಒಟ್ಟು 80 ಕೋಟಿ ರೂಪಾಯಿಗಳನ್ನು ಪಡೆದು 10 ವರ್ಷಗಳ ಅವಧಿಯಲ್ಲಿ ಇದನ್ನು ಕಾರ್ಯಗತಮಾಡಬೇಕಾಗಿದೆ. ಇದರ ಅಂಗವಾಗಿ ಮೊದಲನೇ ಒಂದು ವರ್ಷದಲ್ಲಿ 4 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಈ 4 ಕೋಟಿ ರೂಪಾಯಿಗಳ ವೆಚ್ಚದಲ್ಲಿ 2 ಲಕ್ಷ ಎಕರೆಗಳಲ್ಲಿ ಮಲ್ಬರಿ ಪ್ಲಾಂಟೇಷನ್ ಬೆಳಸತಕ್ಕ ಯೋಜನೆ ಇದೆ. ಹಾಗೇ 37 ಕೋಟಿ ರೂಪಾಯಿಗಳಲ್ಲಿ 74 ಸಾವಿರ ಬಾವಿಗಳನ್ನು ತೆಗೆಸಬೇಕಾಗಿದೆ. 10 ಕೋಟಿ ರೂಪಾಯಿಗಳಲ್ಲಿ 500 ಸಿರಿಕಲ್ಚರರ್ ಕೋ ಆಪರೇಟಿವ್ ಸೊಸೈಟಿಗಳನ್ನು ಪ್ರಾರಂಭಿಸಬೇಕಾಗಿದೆ. 25 ಕೋಟಿ ರೂಪಾಯಿಗಳಲ್ಲಿ 50 ಸಾವಿರ ರೇರಿಂಗ್ ಸೆಂಟರುಗಳನ್ನು ಸ್ಥಾಪಿಸಬೇಕಾಗಿದೆ. ಹಾಗೇ ಒಂದು ಕೋಟಿ ರೂಪಾಯಿನಲ್ಲಿ 1250 ಗ್ರೇನೇಜ್ ಬಿಲ್ಡಿಂಗುಗಳನ್ನು ಕಟ್ಟಿಸಬೇಕಾಗಿದೆ. ಒಂದು ಕೋಟಿ ರೂಪಾಯಿನಲ್ಲಿ 2000 ರೀಲಿಂಗ್ ಎಸ್ಟಾಬ್ಲಿಷ್‌ಮೆಂಟುಗಳನ್ನು ಮಾಡಬೇಕಾಗಿದೆ. ಹೀಗೆ ಇಷ್ಟು ಕೆಲಸಗಳನ್ನು ಮಾಡಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಇದಾದನಂತರ ಒಂದು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗಳನ್ನು ಸ್ಥಾಪಿಸಲು ವರ್ಕಿಂಗ್ ಕ್ಯಾಪಿಟಲಿಗಾಗಿ 2 ಕೋಟಿ ರೂಪಾಯಿಗಳನ್ನು ಇಟ್ಟಿದೆ. ಅಂದರೆ ಈ ವರ್ಷ ಈ ವೆಚ್ಚದಲ್ಲಿ 4 ಕೋಟಿಯನ್ನು ಮಾತ್ರ ಖರ್ಚು ಮಾಡಬೇಕಾಗಿದೆ. ಈ 4 ಕೋಟಿಯಲ್ಲಿ 10 ಸಾವಿರ ಎಕರೆಗಳಲ್ಲಿ ಮಲ್ಬರಿ ಪ್ಲಾಂಟ್ ಮಾಡಬೇಕಾಗಿದೆ. 25 ಸಾವಿರ ಬಾವಿಗಳನ್ನು ಮಾಡಬೇಕಾಗಿದೆ. 25 ಸೊಸೈಟಿಗಳನ್ನು ಮಾಡಬೇಕಾಗಿದೆ. 2500 ರೇರಿಂಗ್ ಹೌಸುಗಳನ್ನು ತೆರೆಯಬೇಕೆಂದಿದೆ ಈ ಉದ್ಯಮಕ್ಕೆ ಖಾಸಗೀ ಜನರು ಮುಂದೆ ಬಂದರೆ ಅವರಿಗೆ 60 ಗ್ರೈನೇಜುಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರೊವೈಡ್ ಮಾಡಿದೆ. ನೂರು ರೀಲಿಂಗ್ ಯೂನಿಟ್ಟುಗಳನ್ನು ಮಾಡಬೇಕಾಗಿದೆ. ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳಿಗೆ 20 ಲಕ್ಷವನ್ನು ವರ್ಕಿಂಗ್ ಕ್ಯಾಪಿಟಲ್‌ಗೆ ಕೊಡಬೇಕಾಗಿದೆ. ಇದನ್ನು ಯಶಸ್ವಿಗೊಳಿಸುವುದಕ್ಕೆ ಮಾನ್ಯ ಸದಸ್ಯರೆಲ್ಲರೂ ಸಹಕರಿಸಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಈ ಬೇಡಿಕೆಯನ್ನು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಮಂತ್ರಿಗಳು ರೇಷ್ಮೇ ಬೆಳೆಯುತಕ್ಕ ರೈತರ ಹಿತಸಾಧನೆ ಬಗ್ಗೆ ಹೇಳಿದ್ದಾರೆ. ಆದರೆ ನೇಕಾರರ ವಿಷಯದಲ್ಲಿ ಅವರ ತೊಂದರೆಯನ್ನು ನಿವಾರಣೆ ಮಾಡತಕ್ಕ ಬಗ್ಗೆ ಏನು ಯೋಜನೆ ಹಾಕಿಕೊಂಡಿದ್ದಾರೆಂಬುದನ್ನು ಹೇಳಲಿಲ್ಲ.

ಶ್ರೀ ಎಸ್. ಬಿ. ನಾಗರಾಳ್.—ನನ್ನ ಕೈಲಿರುವುದು ರೇಷ್ಮೆ ಬೆಳೆಗಾರರ ಅಧಿಕಾರ. ನೇಕಾರರಿಗೆ ಸಹಾಯ ಒದಗಿಸತಕ್ಕ ಅಧಿಕಾರ ಮಾನ್ಯ ಕೈಗಾರಿಕಾ ಸಚಿವರಾದ ಎಸ್. ಎಂ. ಕೃಷ್ಣರವರ ಕೈಲಿದೆ. ಅವರ ವಿಚಾರದಲ್ಲಿ ಸಾಕಷ್ಟು ಅನುಕಂಪ ಅವರಿಗೂ ಇರುವುದರಿಂದ ಅವರ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ನಾನಾದರೋ ನೇರವಾಗಿ ಆ ನೇಕರರಿರತಕ್ಕ ಕ್ಷೇತ್ರದಿಂದಲೇ ಆರಿಸಿ ಬಂದವನಾಗಿದ್ದೇನೆ. ನನಗೂ ಅವರ ವಿಚಾರದಲ್ಲಿ ಮಾನ್ಯ ಸದಸ್ಯರಷ್ಟೇ ಅನುಕಂಪವಿದೆ. ಸರ್ಕಾರದವರು ಅವರ ಕಷ್ಟಗಳನ್ನು ಮರೆತಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

Sri C. M. ARUMUGAM.—Madam, in Delhi Parliament, the Deputy Chairman and the Deputy Speaker who were appointed as Minister of State are provided with a car and well-furnished bungalows. In our State, our Deputy Speaker has not been treated on par with the Minister of State and he has not been provided with a car or a bungalow. I want to know from the Government whether they would provide the facilities to our Deputy Speaker ?

MADAM SPEAKER.—The Government have taken note of the Member's suggestion.

Sri C. M. ARUMUGAM.—Our Deputy Speaker has not been provided with a conveyance. I have seen him walking from the Scertaiat to the Legislators' Home. It is the prestige of this House. Keeping in view the prestige of this House, our Deputy Speaker should be provided with a conveyance quickly.

Sri S. HAMID SHAH (Shivajinagar).—Even the Deputy Mayor of the Corporation has been provided with a car.

Sri K. PRABHAKAR.—Irregularities in the Voters' list or the electoral Roll have been brought to the notice of the Government. The concerned officer will have to be directed to republish the voters' lists with the corrections. I want a reply from the Government about ts reaction to my suggestion.

ಶ್ರೀ ಕೆ. ಪ್ರಭಾಕರ್.—ಓಟರುಗಳ ಪಟ್ಟಿಯಲ್ಲಿ ಲೋಪದೋಷವಿದೆ, ಹೆಸರುಗಳನ್ನು ಹೊಡೆದು ಹಾಕುವುದು, ಸೇರಿಸುವುದು ನಡೆದಿದೆ. ಬಹಳ ಜನರ ಹೆಸರನ್ನು ತೆಗೆದು ಹಾಕಿದ್ದಾರೆ. ಈಗಿರುವ ಓಟರುಗಳ ಪಟ್ಟಿಯನ್ನಿಟ್ಟುಕೊಂಡು ತಾಲ್ಲೂಕುಬೋರ್ಡ್ ಚುನಾವಣೆ ನಡೆಸುವುದು ಸರಿಯಲ್ಲ. ಆದುದರಿಂದ ಓಟರುಗಳ ಪಟ್ಟಿಯನ್ನು ಸಂಬಂಧಪಟ್ಟ ಆಫಿಸರಿಂದ ರಿವ್ಯು ಮಾಡಿಸಿ ನಂತರ ತಾಲ್ಲೂಕು ಬೋರ್ಡ್ ಚುನಾವಣೆ ನಡೆಸಬೇಕು. Before the election for the Taluk Board, it should be got rectified and proper list should be established.

ಶ್ರೀ ಎಸ್.ಎಂ. ಕೃಷ್ಣ.—ಕಳೆದ ಚುನಾವಣೆಯಲ್ಲಿ ಓಟರುಗಳ ಪಟ್ಟಿ ಸರಿಯಾಗಿಲ್ಲವೆಂದು ದೂರುಗಳು ಬಂದಿವೆ. ಅದನ್ನು ಸರಿಪಡಿಸಲು ಕಾರ್ಯಕ್ರಮ ತೆಗೆದುಕೊಳ್ಳುವರು. ತಾಲ್ಲೂಕು ಬೋರ್ಡಿನ ಚುನಾವಣೆಗೆ ಮುಂಚೆ ಈ ಕೆಲಸವಾಗುವುದು. ಪ್ರತಿ 6 ತಿಂಗಳಿಗೊಂದು ಸಲ ರಿವ್ಯೂ ಮಾಡುವರು.

MADAM SPEAKER.—The question is :

> "That the respective sums not exceeding the amounts mentioned in the list of Demands be granted to the Government to defray the charges which will come in course of payment during the financial year for the period ending the 31st day of March 1973, in respect of Demands Nos. 24, 16, 43, 44, 9, 11 and 14."

The motion was adopted and the Demands were granted.

As ordered by the Chair the motion for Demands for Grants adopted by the House are reproduced below :

Minister for Industries.—Sir, on the recommendation of the Governor, I beg to move :

> "That a sum not exceeding Rs. 16,00,00,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 24 'Industries'."

Minister for Industries.—Sir, on the recommendation of the Governor, I beg to move :

" That a sum not exceeding Rs. 58,95,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 16 'Scientific Departments'."

Minister for Industries.—Sir, on the recommendation of the Governor, I beg to move :

" That a sum not exceeding Rs. 81,77,000, inclusive of the sum granted 'on account," be granted to the Government to defray the charges which will come in course of payment during the financial year for the period ending 31st day of March 1973, in respect of Demand No. 43 'Capital Outlay on Improvement of Public Health'."

Minister for Industries.—Sir, on the recommendation of the Governor, I beg to move :

" That a sum not exceeding Rs. 11,44,05,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 44 'Capital Outlay on Industrial and Economic Development'."

Minister for Law and Parliamentary Affairs.—Sir, on the recommendation of the Governor, I beg to move :

" That a sum not exceeding Rs. 66,34,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 9 'Parliament, State/Union Territory Legislature'."

Minister for Law and Parliamentary Affairs.—Sir, on the recommendation of the Governor, I beg to move ;

" That a sum not exceeding Rs. 2,17,10,000 inclusive of the sum granted 'on account', be granted to the Government to defray the Charges which will come in course of payment during the financial year for the period ending 31st day of March 1973, in respect of Demand No. 11 'Administration of Justice'."

Minister of State for Food and Civil Supplies.—Sir, on the recommendation of the Governor, I beg to move :

"That a sum not exceeding Rs. 3,50,000, inclusive of the sum granted 'on account,' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 14 'Supplies and Disposals'."

DEMAND No. 39

SRI B. BASAVALINGAPPA (Minister for Municipal Administration).—On the recommendation of the Governor, I beg to move :

"That a sum not exceeding Rs. 14,98,81,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 39 'Miscellaneous'."

MADAM SPEAKER.—Motion moved :

"That a sum not exceeding Rs. 14,98,81,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 39 'Miscellaneous'."

The demand is before the House for discussion.

SRI C. M. ARUMUGAM.—Madam Speaker, there is no Minister for Miscellaneous and there is no Department like Miscellaneous Department and there is no Secretariat for "Miscellaneous." Is there any Minister for Miscellaneous ? It has not been announced by the Governor that there is a Minister for Miscellaneous. I want your ruling, in this connection.

ಅಧ್ಯಕ್ಷರು.—ರೂಲಿಂಗ್ ಸೋಮವಾರ ಕೊಡೋಣ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದಿರುವ ಮಿಸಲೇನಿಯಸ್ ಡಿಮ್ಯಾಂಡ್ ನಂಬರು 39ರ ಬಗ್ಗೆ ಮಾತನಾಡುತ್ತಾ ಇದಕ್ಕೆ ಹೆಚ್ಚು ಸಂಬಂಧಪಟ್ಟಿರುವ ಸ್ಥಳೀಯಸಂಸ್ಥೆಗಳ ಬಗ್ಗೆ ಇರತಕ್ಕ ಬೇಡಿಕೆಯನ್ನು ವಿರೋಧಿಸುತ್ತಾ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಈ ಬೇಡಿಕೆಯನ್ನು ವಿರೋಧಿಸುವುದಕ್ಕೆ ಮುಖ್ಯ ಉದ್ದೇಶವಿಷ್ಟು. ಅತಿ ಮುಖ್ಯವಾದ ಈ ಬೇಡಿಕೆಗೆ ಕೇವಲ 4 ಕೋಟಿ 78 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಬಹಳ ಶೋಚನೀಯವಾದ ವಿಚಾರ. ಅದರಲ್ಲಿ ಜನರಿಗೆ ನೇರವಾಗಿ ಸಂಪರ್ಕವಿರುವ ಈ ಸಂಸ್ಥೆಗಳ ವಿಚಾರ ಮನೆ ಮಾತಾಗಿದೆ. ಆದುದರಿಂದ ಜನರ ಸೌಕರ್ಯಕ್ಕೆ ಬೇಕಾದ ಅನುಕೂಲತೆಗಳನ್ನು ಒದಗಿಸಬೇಕಾದ ಸಂದರ್ಭದಲ್ಲಿ ಒದಗಿಸಿರುವ ಹಣ ಬಹಳ ಕಡಮೆ ಇರುವುದರಿಂದ ಈ ಬೇಡಿಕೆಯನ್ನು ವಿರೋಧಿಸಬೇಕಾಗಿದೆ. ಅಲ್ಲದೆ ಸಾಧಾರಣವಾಗಿ ಕೇಂದ್ರ ಸರಕಾರದವರು ತೆರಿಗೆಗಳನ್ನು ಹಾಕಿ ರಾಜ್ಯ ಸರಕಾರ ತೆರಿಗೆಗಳನ್ನು ಹಾಕುವ ಶಕ್ತಿ ಕಳೆದುಕೊಳ್ಳುವಂತೆ ಮಾಡುವುದು. ರಾಜ್ಯ ಸರಕಾರದವರು ತಾವು ಹೆಚ್ಚಿಗೆ ತೆರಿಗೆ ಹಾಕಿ ಸ್ಥಳೀಯ ಸಂಸ್ಥೆಗಳಿಗೆ ತೆರಿಗೆ ಹಾಕಲು ಅವಕಾಶ ಕಡಮೆ ಇರುವಾಗ ಬೆಂಗಳೂರಿನಂಥ ನಗರಗಳ ಅಭಿವೃದ್ಧಿಗೆ ಹಣ ಒದಗಿಸದಿರುವುದು ಶೋಚನೀಯ

(ಶ್ರೀ ಟಿ. ಆರ್. ಶಾಮಣ್ಣ)

ವಾಗಿದೆ. ಈ ರಾಜ್ಯದ ಅನೇಕ ಸ್ಥಳೀಯ ಸಂಸ್ಥೆಗಳು ಬಹಳ ಹಿಂದುಳಿದಿರುವುದರಿಂದ ನಾವು ಬಹಳ ವಿಷಾದಪಡಬೇಕಾಗಿದೆ. ಅದರಲ್ಲೂ ಮುಖ್ಯವಾಗಿ ಈ ಸ್ಥಳೀಯ ಸಂಸ್ಥೆಗಳಿಗೆ, ಟೌನ್ ಮುನಿಸಿಪಾಲಿಟಿಗಳಿಗೆ ಸಾಕಾದಷ್ಟು ನೀರು ಸರಬರಾಯಿ ಮತ್ತು ಅಂಡರ್‌ಗ್ರೌಂಡ್ ಡ್ರೈನೇಜು ಸೌಕರ್ಯ ಒದಗಿಸಿಲ್ಲ. ಆದುದರಿಂದ ಅನೇಕ ನಗರಗಳಲ್ಲಿ ಮತ್ತು ಅನೇಕ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ನೀರಿನ ಸೌಕರ್ಯ ಮತ್ತು ಒಳಚರಂಡಿ ವ್ಯವಸ್ಥೆ ಮುಂತಾದುವು ಹೀನಸ್ಥಿತಿಯಲ್ಲಿರುವುದರಿಂದ ಇದಕ್ಕೆ ಸಾಕಾದಷ್ಟು ಹಣ ಕೊಡಬೇಕು. ಅದರಲ್ಲೂ ಮುಖ್ಯವಾಗಿ ಬೆಂಗಳೂರು ನಗರಕ್ಕೆ ಮತ್ತು ಅನೇಕ ಮುಖ್ಯ ಪಟ್ಟಣಗಳಿಗೆ ಮೊದಲನೆಯದಾಗಿ ಸ್ಲಂಕ್ಲಿಯರೆನ್ಸ್‌ಗೆ ಮತ್ತು ಡ್ರೈನೇಜು ವ್ಯವಸ್ಥೆಗೆ ಸಾಕಷ್ಟು ಹಣವಿಲ್ಲ. ಇದಕ್ಕೆ ಕೊಡುವ ಹಣ ಸಾಕಾಗುವುದಿಲ್ಲ. ಸೊಳ್ಳೆ ಕಾಟ ತಪ್ಪಿಸಬೇಕು. ಈ ಕೆಲಸಗಳಿಗಾಗಿ ಬಜೆಟ್ಟಿನಲ್ಲಿ ಒದಗಿಸಿರುವ ಹಣ ಏನೇನೂ ಸಾಲದು, ಹೆಚ್ಚಾಗಿ ಒದಗಿಸಬೇಕು ಎಂದು ಒತ್ತಾಯಮಾಡುತ್ತೇನೆ. ಬೆಂಗಳೂರು ನಗರ ರಾಜ್ಯದ ಒಂದು ಕೇಂದ್ರ ಸ್ಥಳ. ಸುಮಾರು 17 ಲಕ್ಷ ಪ್ರಜೆಗಳಿರುವ ಪಟ್ಟಣ, ಜೊತೆಗೆ ಫ್ಲೋಟಿಂಗ್ ಪಾಪ್ಯುಲೇಷನ್ ಸೇರಿ ಸುಮಾರು 20 ಲಕ್ಷ ಪ್ರಜೆ ಬೆಂಗಳೂರಿನಲ್ಲಿರುವುದು. ಇಂಥ ನಗರದ ಬಗ್ಗೆ ರಾಜ್ಯ ಸರಕಾರಕ್ಕೆ ಬರುವ ಹಣ ಯಾವುದೂ ಇಲ್ಲ. ಮೋಟರು ವೆಹಿಕಲ್ಸ್ ಟ್ಯಾಕ್ಸ್, ಇತ್ಯಾದಿಗಳಲ್ಲಿ ಕಂಪೆನ್ಸೇಷನ್ ಕೊಡುವರು. ಕಾರ್ಪೊರೇಷನ್ನಿನ ಸಿಬ್ಬಂದಿಗೆ 3 ಕೋಟಿ ರೂಪಾಯಿ ಬೇಕು. ಬೇರೆ ಮುನಿಸಿಪಾಲಿಟಿಗಳಿಗೆ ಮತ್ತು ಲೋಕಲ್ ಬಾಡಿಗಳಿಗೆ ಡಿ.ಎ. ನಲ್ಲಿ ಸುಮಾರು ಸೇಕಡ 50 ಭಾಗ ಕೊಡುವರು. ಅದೇ ಬೆಂಗಳೂರು ನಗರದಲ್ಲಿ 90 ಲಕ್ಷ ಖರ್ಚುಮಾಡುವಾಗ ಸುಮಾರು 18 ಲಕ್ಷ ಮಾತ್ರ ಕೊಡುವರು. ಇದು ಸಾಲದು, ಬೇರೆ ನಗರಸಭೆಗಳಿಗೆ ಲೋಕಲ್‌ಬಾಡೀಸ್‌ಗೆ ಕೊಡುವಂತೆ ಬೆಂಗಳೂರು ಕಾರ್ಪೊರೇಷನ್ನಿಗೂ ಸೇಕಡ 50 ಭಾಗ ಕೊಡಬೇಕು ಎಂದು ಒತ್ತಾಯಮಾಡುತ್ತೇನೆ.

ಬೆಂಗಳೂರು ನಗರದ ಕಾರ್ಪೊರೇಷನ್ ಆಕ್ಟ್ ತಿದ್ದುಪಡಿಯಾಗಿ 25 ವರ್ಷವಾಗಿದೆ. ಇದು ಬಹಳ ಹಳೆಯದು. ಇದನ್ನು ಮದ್ರಾಸಿನಲ್ಲಿರುವ ಆಕ್ಟಿಗನುಗುಣವಾಗಿ ಮಾಡಿದೆ. ಇದನ್ನು ಬೇಗ ಬದಲಾಯಿಸಬೇಕೆಂಬ ಒತ್ತಾಯವಿದೆ. ಇದನ್ನು ಬೊಂಬಾಯಿನಲ್ಲಿರುವಂತೆ ಬದಲಾಯಿಸಬೇಕು ಎಂಬ ಉದ್ದೇಶವಿತ್ತು, ಆ ವಿಚಾರ ಅಲ್ಲಿಗೇ ನಿಂತಿದೆ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿತ್ತು, ಆದರೆ ಮುಂದೆ ಏನೂ ಆಗಿಲ್ಲ. ಆದುದರಿಂದ ಈ ವಿಷಯಕ್ಕೆ ತೀವ್ರ ಗಮನ ಕೊಟ್ಟು ಕಾರ್ಪೊರೇಷನ್ ಆಕ್ಟನ್ನು ತಿದ್ದುಪಡಿಮಾಡಬೇಕು.

ಬೆಂಗಳೂರಿನಲ್ಲಿ ಸುಮಾರು 63 ಡಿವಿಜನ್ನುಗಳಿವೆ, ಅದರಲ್ಲಿ ಕೆಲವು ಡಿವಿಜನ್ನುಗಳಲ್ಲಿ 40 ಸಾವಿರ ಓಟರುಗಳಿದ್ದಾರೆ, ಮತ್ತೆ ಕಲವು ಡಿವಿಜನ್ನುಗಳಲ್ಲಿ 7 ಸಾವಿರ ಓಟರುಗಳಿದ್ದಾರೆ. ಆದುದರಿಂದ 1971 ನೆಯ ಇಸವಿಯ ಸೆನ್ಸಸ್ ಅಂಕಿಅಂಶದ ಪ್ರಕಾರ ಡಿವಿಜನ್ನುಗಳ ವ್ಯವಸ್ಥೆಮಾಡಬೇಕು. ಒಂದು ಕಡೆ 39 ಸಾವಿರ, ಇನ್ನೊಂದು ಕಡೆ 7 ಸಾವಿರ ಇರುವುದರಿಂದ ಅನುಕೂಲವಾಗುವುದಿಲ್ಲ. ಆದುದರಿಂದ ಆದಷ್ಟು ಬೇಗ ಡಿವಿಜನ್ನುಗಳ ವ್ಯವಸ್ಥೆಮಾಡಿ ಸಾಧ್ಯವಾದಷ್ಟು ಏರಿಯಾ ಮತ್ತು ಜನಸಂಖ್ಯೆಗನುಸಾರವಾಗಿ ಮಾಡಬೇಕೆಂದು ಸಲಹೆಮಾಡುತ್ತೇನೆ.

ಈ ಬೆಂಗಳೂರು ನಗರದಲ್ಲಿ ಮುಖ್ಯವಾದ ಸಮಸ್ಯೆಗಳು (1) ಸ್ಲಮ್ಸ್ (2) ಮಾಸ್ಕಿಟೋ ನ್ಯೂಸೆನ್ಸ್ (3) ಡ್ರಿಂಕಿಂಗ್ ವಾಟರ್. ಈ ಮೂರು ಸಮಸ್ಯೆಗಳನ್ನೂ ಬಗೆಹರಿಸಬೇಕು.

ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಬೆಂಗಳೂರು ನಾಗರಿಕರಿಗೆ ಕಾವೇರಿ ನೀರಿನ ಸರಬರಾಯಿ ಯೋಜನೆಯ ಕೆಲಸವನ್ನು ಅತಿ ಶೀಘ್ರವಾಗಿ ಮಾಡುತ್ತಾ ಇರುವುದು ಸಂತೋಷ. ಆದರೆ ಇದಕ್ಕೆ 30 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಲೆಕ್ಕ ಇಟ್ಟುಕೊಂಡಿದ್ದೀರಿ. ಅಷ್ಟು ಖರ್ಚಾದರೆ ಒಂದು ಸಾವಿರ ಗ್ಯಾಲನ್‌ಗೆ 3 ರೂಪಾಯಿ ಆಗುತ್ತದೆ. ಈವಾಗ ಮಾಡುತ್ತಾ ಇರುವ ಯೋಜನೆಯ ಖರ್ಚೂ ಕೂಡ ಬಡವನ ಮೇಲೆ ಬೀಳುತ್ತದೆ. ಈ ಯೋಜನೆಗೆ ಹಾಕಿರುವ ಖರ್ಚು ದುಬಾರಿ ಆಗಿರುವುದರಿಂದ ಬೆಂಗಳೂರಿನ ಜನತೆಗೆ ನೀರಿನ ದರವನ್ನು ಹೆಚ್ಚಿಸದೇ ಇರುವ ಹಾಗೆ ನೋಡಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿ ಮುಖ್ಯವಾದ ಸಮಸ್ಯೆ ಎಂದರೆ ರೆವಿನ್ಯೂ ಸೈಟ್ಸ್ ವಿತರಣೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಮೊದಲು ಸಹಾನುಭೂತಿಯನ್ನು ತೋರಿಸಿದ್ದರು. ಬೆಂಗಳೂರು ನಗರದ ಎಂ.ಎಲ್.ಎ. ಗಳು ರೆವಿನ್ಯೂ ಸೈಟ್‌ಗಳ ಬಗ್ಗೆ ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿ ಯಾರಿಗೆ ನಿಜವಾಗಿ ಸೈಟು ಬೇಕಾಗಿದೆಯೋ ಅಂಥಾವರಿಗೆ ನೀವು ಸೈಟ್ಸನ್ನು ಒದಗಿಸಿಕೊಡಬೇಕೆಂದು ಒತ್ತಾಯ ಮಾಡಿದಾಗ ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಈಗ

ಅವರ ನಿಲವು ಬದಲಾವಣೆಯಾಗಿದೆ. ಆದುದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಸಹಾನು ಭೂತಿ ತೋರಿಸಿ ಬಡಬಗ್ಗರಿಗೆ ಸೈಟುಗಳನ್ನು ಒದಗಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಇದರ ಜೊತೆಗೆ ಸೊಸೈಟಿಗಳಿಗೆ ಲೇಔಟ್ ಸ್ಯಾಂಕ್ಷನ್ ಮಾಡುವ ಬಗ್ಗೆ ಒಂದು ಅಡಚಣೆ ಯನ್ನು ಈಗ ತಂದಿದ್ದಾರೆ. ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಗಳು ಇರುವ ಕಡೆ ಪ್ರಾಧಾನ್ಯತೆ ಕೊಡಬೇಕೆಂದು ಮಾಡಿದ್ದಾರೆ. ಈಗ ಏತಕ್ಕೆ ತಮ್ಮ ನಿಲುವನ್ನು ಬದಲಾಯಿಸಿ ದ್ದಾರೋ ಗೊತ್ತಿಲ್ಲ.

ಇನ್ನು ಕೆಲವು ಬೋಗಸ್ ಸೊಸೈಟಿಗಳು ಇವೆ. ಅವುಗಳನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಕ್ರಮಬದ್ಧವಾಗಿ ಯಾರಿಗೆ ಸೈಟು ಅಗತ್ಯ ಇದೆಯೋ ಅಂಥಾವರು ಸೊಸೈಟಿ ಮಾಡಿಕೊಂಡು ಟ್ರಸ್ಟ್‌ಬೋರ್ಡ್ ಪ್ಲಾನ್‌ಗನುಗುಣವಾಗಿ ಮಾಡಿಕೊಂಡಿದ್ದರೆ ಅಂಥಾವರಿಗೆ ಸೈಟು ಕೊಡದೇ ಹೋದರೆ ಧರ್ಮವಲ್ಲವೆಂದು ಒತ್ತಾಯ ಮಾಡಿ ಹೇಳುತ್ತೇನೆ. ಬೊಂಬಾಯಿ, ಡೆಲ್ಲಿ, ಕಾನ್‌ಪುರ ಈ ರೀತಿ ಬೇರೆ ಬೇರೆ ಪಟ್ಟಣಗಳಲ್ಲಿ ಸೊಸೈಟಿಗಳು ಲೇಔಟ್ ಮಾಡಿಕೊಂಡು ಟ್ರಸ್ಟ್ ಬೋರ್ಡ್ ಪ್ಲಾನ್‌ಗೆ ಅನುಗುಣವಾಗಿ ಮಾಡಿದ್ದಾರೆ. ಅದರಂತೆ ಇದಕ್ಕೂ ಪ್ರಾಧಾನ್ಯತೆ ಕೊಡ ಬೇಕೆಂದು ಹೇಳುತ್ತೇನೆ. ಅವರು ಆರೀತಿ ನಡೆದುಕೊಳ್ಳದೇ ಹೋದರೆ ಕ್ರಮ ತೆಗೆದುಕೊಳ್ಳಿ. ಈಗ ಬೆಂಗಳೂರಿನಲ್ಲಿ ಹೆಚ್.ಎ.ಎಲ್. ಹೆಚ್.ಎಂ.ಟಿ. ಬಿ.ಇ.ಎಲ್. ಮತ್ತು ಎನ್.ಜಿ.ಇ.ಎಫ್. ಈ ರೀತಿ ಅನೇಕ ಫ್ಯಾಕ್ಟರಿಗಳು ಇವೆ. ಇವರು ಸೊಸೈಟಿಗಳನ್ನು ಮಾಡಿಕೊಂಡು 50 ಸಾವಿರ ಮೆಂಬರುಗಳನ್ನು ಮಾಡಿಕೊಂಡಿದ್ದಾರೆ. ಇದರ ಜೊತೆಗೆ 50 ಲಕ್ಷ ರೂಪಾಯಿ ಡಿಬೆಂಚರ ಲೋನ್‌ನನ್ನು ಹೌಸಿಂಗ್ ಕಾರ್ಪೋರೇಷನ್ನಿನವರು ಎತ್ತಿದ್ದಾರೆ. ಇದಕ್ಕೆ ಸರ್ಕಾರದವರು ಗ್ಯಾರಂಟಿ ಕೊಟ್ಟಿದ್ದಾರೆ. ಆದುದರಿಂದ ಈ ಹೌಸಿಂಗ್ ಕಾರ್ಪೋರೇಷನ್ನಿನಿಂದ ಅವರುಗಳು ಸಾಲ ತೆಗೆದುಕೊಂಡು ಸೈಟುಗಳನ್ನು ಮಾಡೋಣ ಎಂದರೆ ಅದಕ್ಕೆ ಅಡ್ಡಿಪಡಿಸುವುದು ನ್ಯಾಯವಲ್ಲ. ಏನಾದರೂ ಬೋಗಸ್ ಸೊಸೈಟಿ ಆಗಿದ್ದರೆ ಅಂಥಾ ಸೊಸೈಟಿಗೆ ಲೇಔಟ್ ಮಾಡುವುದಕ್ಕೆ ಒಪ್ಪಿಗೆ ಕೊಡಬಾರದು. ಆದುದರಿಂದ ತಮ್ಮ ನೀತಿಯನ್ನು ಬದಲಾವಣೆ ಮಾಡಬೇಕು. ಏನಾದರೂ ದೋಷ ಇದ್ದರೆ ತಿದ್ದುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಸರಿಯಾದ ರೀತಿಯಲ್ಲಿ ಟ್ರಸ್ಟ್ ಬೋರ್ಡ್ ಪ್ಲಾನ್‌ಗೆ ಅನುಗುಣವಾಗಿ ಲೇಔಟ್ ಮಾಡಿದ್ದರೆ ಅಂಥಾವರಿಗೆ ಸಹಾಯ ಮಾಡಬೇಕು ಎಂದು ಒತ್ತಾಯ ಮಾಡಿ ಹೇಳುತ್ತೇನೆ.

ಇನ್ನು ಬೆಂಗಳೂರು ನಗರ ಸಂಸ್ಥೆ ಚೆನ್ನಾಗಿ ನಡೆಯ ಬೇಕಾದ ಪಕ್ಷದಲ್ಲಿ ರಾಷ್ಟ್ರಾಧ್ಯಕ್ಷರಿಂದ ಮೊದಲುಗೊಂಡು ಎಲ್ಲರೂ ಇದರಲ್ಲಿ ರಾಜಕೀಯ ಮಾಡಬಾರದು. ಈ ಬೆಂಗಳೂರು ಕಾರ್ಪೋ ರೇಷನ್ ಬಗ್ಗೆ ಹೇಳುವುದಾದರೆ ಇದು ರಾಜಕೀಯದಿಂದ ದೂರ ಇರಬೇಕು. ಆಡಳಿತ ಪಕ್ಷದವರು ಈ ಒಂದು ನೀತಿಯನ್ನು ಅನುಸರಿಸಬೇಕು. ಉತ್ತಮವಾದ ಕೌನ್ಸಿಲರ್ಸ್ ಎಲೆಕ್ಟ್ ಆಗಬೇಕಾದರೆ ಆಡಳಿತ ಪಕ್ಷದವರ ಮಾರ್ಗದರ್ಶನಬೇಕು. ನಾವೂ ಕೂಡ ಸಹಕರಿಸುತ್ತೇವೆ. ಬೆಂಗಳೂರು ನಗರದ ನಗರ ಪಿತೃ ಅಂತ ಅನಿಸಿಕೊಳ್ಳುವಂಥವರು ಉತ್ತಮವಾದವರಿರಬೇಕು. ಇಲ್ಲದೇ ಹೋದರೆ ನಗರಾಡಳಿತಕ್ಕೆ ಹಾನಿಯಾಗಿ ಜನ ಬೇಸರ ಪಡಬೇಕಾಗುತ್ತದೆ. ಬೆಂಗಳೂರು ಕಾರ್ಪೋರೇಷನ್ ವಿಷಯವಾಗಿ ಹೇಳಬೇಕಾದರೆ ಈ ವರ್ಷ ಯಾವ ಪಾರ್ಟಿಗೂ ಕೂಡ ಮೆಜಾರಿಟಿ ಬರಲಿಲ್ಲ. ಆದರೆ ಆಡಳಿತ ಪಕ್ಷದವರು ತಾವು ಅಧಿಕಾರ ವಹಿಸಿಕೊಳ್ಳಬೇಕೆಂದು ತಮಗೆ ಮೆಜಾರಿಟಿ ಇಲ್ಲ ಎಂದು ಡಿ. ಎಂ. ಕೆ. ಮತ್ತು ಮುಸ್ಲಿಂ ಲೀಗ್ ಬೆಂಬಲ ತೆಗೆದುಕೊಂಡು ಮೇಯರ್‌ಸ್ಥಾನ ತೆಗೆದು ಕೊಂಡರು. ಈಗ ಇರತಕ್ಕಂಥ 63 ಜನ ಕೌನ್ಸಿಲರ್ಸ್ ಮೇಯರ್ ಡಿಕ್ಟೇಟರ್‌ಷಿಪ್‌ಗೆ ಒಳಗಾಗಿದ್ದಾರೆ. ಈಗ ಬೆಂಗಳೂರು ನಗರಾಡಳಿತ ಮೇಯರ್ ಕೈಯಲ್ಲಿ ಒಂದು ಡಿಕ್ಟೇಟರ್ ಷಿಪ್ ಇದ್ದಹಾಗೆ ಇದೆ. ಸರಿಯಾದ ಆಡಳಿತವಿಲ್ಲದೆ ಜನತೆ ತೊಂದರೆಗೊಳಗಾಗಿದ್ದಾರೆ. ಬೆಂಗಳೂರು ನಗರ ಕಾರ್ಪೋ ರೇಷನ್ ಆಡಳಿತದಲ್ಲಿ ಅನೇಕ ಲೋಪದೋಷಗಳು ಅವ್ಯವಹಾರಗಳು ನಡೆಯುತ್ತಾ ಇವೆ. ರಾತ್ರಿ 8 ಗಂಟೆಯವರೆಗೆ ಸಭೆ ನಡೆಸಿಕೊಂಡು ನಿರ್ಣಯವನ್ನು ಸರಿಯಾದ ರೀತಿಯಲ್ಲಿ ಮಂಡಿಸದೇ ತಮಗೆ ಇಷ್ಟಬಂದ ರೀತಿಯಲ್ಲಿ ನಿರ್ಣಯ ಮಾಡಿಕೊಳ್ಳುತ್ತಾರೆ. ಯಾವಾಗಲೂ ಕಾರ್ಪೋರೇಷನ್ ಈರೀತಿ ಆದರೆ ಇದನ್ನು ಮುಚ್ಚುವುದು ನ್ಯಾಯ ಎಂದು ಹೇಳುತ್ತೇನೆ. ಇದರ ಬಗ್ಗೆ ಕ್ರಮತೆಗೆದುಕೊಳ್ಳದೇ ಹೋದರೆ ಇದು ಕಾರ್ಪೋರೇಷನ್ ಆಡಳಿತವಾಗುವುದಿಲ್ಲ. ಕೆಲವೇ ಗುಂಪಿನ ಒಂದು ಆಡಳಿತ ವಾಗುತ್ತದೆ ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಆಸಕ್ತಿವಹಿಸಬೇಕು. ಇಲ್ಲಿ ಆಗುತ್ತಾ ಇರತಕ್ಕಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೆ ಆಗದೇ ಹೋದರೆ ಇದನ್ನು ಮುಚ್ಚುವುದು ಒಂದೇ ದಾರಿ. ಇಲ್ಲದೇ ಹೋದರೆ ಇದಕ್ಕೆ ಒಂದು ಕಾರ್ಯ ಕ್ರಮ ಹಾಕಿಕೊಳ್ಳಿ. ನಾವೂ ಕೂಡ ಪೂರ್ಣ ಬೆಂಬಲ ಕೊಟ್ಟು ಯೋಗ್ಯರನ್ನಾಗಿರುವವರನ್ನು ತರುವುದಕ್ಕೆ ಸಹಕಾರ ಕೊಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಶ್ರೀ ಟಿ. ಆರ್. ಶಾಮಣ್ಣ)

ಈಗ ಬೆಂಗಳೂರು ನಗರ ಕಾರ್ಪೋರೇಷನ್ನಿನಲ್ಲಿ ಅನೇಕ ಲೋಪದೋಷಗಳು ಇವೆ. ಅದಕ್ಕಾಗಿ ಒಂದು ವಿಜಿಲೆನ್ಸ್ ಕಮಿಷನ್ನನ್ನು ಇಟ್ಟು ಅನೇಕರನ್ನು ಸಸ್ಪೆಂಡ್ ಮಾಡಿದ್ದಾರೆ. ವಿಚಾರಣೆ ಆಗುವುದು ಬಹಳ ನಿಧಾನವಾದರೆ ತಪ್ಪಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ವಿಜಿಲೆನ್ಸ್ ಕಮಿಷನ್ನಿನ ರಿಪೋರ್ಟ್ ಬಗ್ಗೆ ತೀವ್ರ ಕ್ರಮ ತೆಗೆದುಕೊಂಡು ಕಾರ್ಪೋರೇಷನ್ ಆಡಳಿತ ಸರಿಹೋಗುವುದಕ್ಕೆ ಎಚ್ಚರಿಕೆ ವಹಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಲೋಕಲ್ ಬಾಡೀಸ್ ಬಗ್ಗೆ ಈ ಸಂದರ್ಭದಲ್ಲಿ ಹೇಳಬೇಕಾದರೆ ಲೋಕಲ್ ಬಾಡಿಸ್ ಕಾನ್‌ಫರೆನ್ಸ್ ಕರೆದು ಅವರ ಕಷ್ಟಸುಖಗಳನ್ನು ವಿಚಾರಿಸಿ ಅವರಿಗೆ ಏನು ಅನುಕೂಲ ಬೇಕೋ ಅದನ್ನು ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಇದರ ಬಗ್ಗೆ ಕಾಮನ್ ಕೇಡರ್ ಫಾರ್ ಆಲ್ ಲೋಕಲ್ ಬಾಡೀಸ್ ಜಾರಿಗೆ ತರಬೇಕು ಅಂತ ಮಾಡಿದ್ದಾರೆ. ಇದರಲ್ಲಿ ಬೆಂಗಳೂರು ಕಾರ್ಪೋರೇಷನ್ ಬಿಟ್ಟುಹೋಗಿದೆ. ಇದನ್ನು ಸೇರಿಸಿ ಜಾರಿಗೆ ತರಬೇಕು. ಈಗ ಬೆಂಗಳೂರು ಕಾರ್ಪೋರೇಷನ್ ಇದೆ. ಹುಬ್ಬಳಿ ಕಾರ್ಪೋರೇಷನ್ ಇದೆ ಮೈಸೂರು ಮತ್ತು ಮಂಗಳೂರನ್ನು ಕಾರ್ಪೋರೇಷನ್ ಮಾಡಬೇಕು ಅಂತ ಯೋಚನೆ ಮಾಡಿದ್ದಾರೆ. ಆದುದರಿಂದ ಈ ಕಾರ್ಪೋರೇಷನ್‌ಗಳಿಗೆಲ್ಲಾ ಕಾಮನ್ ಕೇಡರನ್ನು ತರುವುದಕ್ಕೆ ಯೋಚನೆ ಮಾಡಿದರೆ ಕಾರ್ಪೋರೇಷನ್ನಿನ ಕೆಲಸಗಳೂ ಕೂಡ ಸಮರ್ಪಕವಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನಮ್ಮ ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ನನಗೆ ಬಹಳ ಆಪ್ತರು, ಆದರೆ ಅವರಿಗೆ ಒಂದು ಎಚ್ಚರಿಕೆಯನ್ನು ಕೊಡಬೇಕಾಗಿದೆ. ಶ್ರೀ ಬಸವಲಿಂಪಪ್ಪನವರು ದುಡುಕಿನಿಂದ ತೀರ್ಮಾನ ತೆಗೆದುಕೊಳ್ಳುತ್ತಿದ್ದಾರೆ. ಎಂದು ಕೆಲವರು ಆಡಿಕೊಳ್ಳುತ್ತಿದ್ದಾರೆ. ಆದುದರಿಂದ ಅವರು ಜನಗಳನ್ನು ವಿಶ್ವಾಸದಿಂದ ಸಂಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆರೀತಿ ಜನಗಳಿಗೆ ಒಂದು ಅನುಕೂಲ ಮಾಡಿಕೊಟ್ಟು ಅವರ ಬಗ್ಗೆ ಒಂದು ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಾರೆಂದು ನಂಬಿಕೆ ಇಟ್ಟುಕೊಂಡಿದ್ದೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11-30 A. M.

† Smt. ADDY SALDANHA (Mangalore I).—Madam Speaker, I fully support the demand placed before the House. I have a few suggestions to make.

Mangalore was governed under the Madras Muncipalities Act when it was in the Madras State. But now although it is in Mysore State, it continues to be governed by the Madras Municipalities Act. So I request the Government of Mysore that the Mysore Municipalities Act should be brought into force in respect of Mangalore Municipality.

The TUKOL pay Commission pay scales have come into force in the State, but the lower paid staff like the typists, peons and bill collectors have not yet been paid under the TUKOL pay scales. So I request the Government to see that they also enjoy the TUKOL pay scales.

The Mangalore Municipality does not get enough grant for road maintenance and this is a city which has the heaviest rainfall. It has also a fertiliser factory and also the Port is coming up. So I request the Government that we should be given 3/4th's share of the Motor Vehicles Tax which the Government collects.

There are lots of drowning cases in Mangalore occurring frequently. The youth go to the Sea which is very dangerous. So I reqeust that the swimming pool should be granted to the Mangalore City.

There are no quarters for the village workers. I request Government to give houses for those workers.

Food adulteration is rampant in the State though there are laws to prevent adulteration. They are rarely in force. Municipalities should take keen interest in the health of citizens.

Unsanitary and filthy hotels are growing in a number of areas under various municipalities. It is a wonder how they can get licences for insanitary hotels. The Law laid down in this behalf should be tightened.

The Muuicipal Councils as they exist have no powers to spend any money without Government sanction towards public amenities. I feel that the Municipalities should be given powers of administration consistent with democratic privileges so that the citizens can enjoy civic amenities. The Municipalties should take some interest in developing civic conscience among children.

In regard to drainage, I feel they should be improved. The present drainage arrangement proves to be a death trap in the rainy season. In many of the towns, particularly in Mangalore, people have to wade through rain water on roads which will be knee-deep.

I also bring to the notice of the Government that the Housing Corporation in IV main road, Gandhinagar Bangalore, have sanctioned a lay-out for building houses for poor people. The proposal is almost at a stand-still for want of Government sanction. So I request the Government that this case should be considered and the Corporation be given permission to take up the lay-out.

There are public workers in Mangalore Corporation who are drawing Rs. 5 allowance per day. The Divisional Commissioner sent orders that they should be given Rs. 3.75 per day. So I request Government that the previous rate of Rs. 5 which they were drawing before should be given back to them.

There are cases of eviction of tenants in municipal areas. The land lords are using the Mysore Rent Control Act to evict poor tenants. The Act is intended to give protection to the tenants. The provisions of the Act have been utilised by the Law Courts, much to the disadvantage of tenants. It is therefore imperative to give complete protection to the tenants form eviction from their premises by suitably amending the Mysore Rent Control Act. Section 21 of the Act provides grounds on which a tenant could be evicted and it is unfortunate that such a section is misused by the landlords for evicting the tenants. I suggest that the tenants should be allowed to keep the premises till they pay the rental to the landlord. The other grounds mentioned in the said section shall be deleted.

(SMT. ADDY SALDANHA)

Though there is a Beggar Prevention Act in force in Municipal areas, beggar nuisance is growing. Since it is not definitely mentioned in the Act as to who is to enforce this law, it is not properly implemented in practice. This ambiguity should be cleared.

Slums are growing throughout the State in metropolitan areas and most of the beautiful parks are disappearing. Some parts of the city in Bangalore do not have drinking water facility. The supply stops at 7 A.M. and they should be waiting till 6 P.M. and throughout the whole day there will be no supply and taps are dry. I request that the people of the city should be provided w th enough water facilities and they should not be made to suffer for want of drinking water.

Before I conclude, I thank the Chair for giving me this opportunity to speak.

†ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಸಭಾಧ್ಯಕ್ಷರೇ, ಪೌರಾಡಳಿತ ಸಚಿವರು ಮಂಡಿಸಿರತಕ್ಕ ಬೇಡಿಕೆಯನ್ನು ಅನುಮೋದಿಸುತ್ತ ನಗರಗಳ ಮತ್ತು ಪಟ್ಟಣಗಳ ಅಭಿವೃದ್ಧಿ ಬಗ್ಗೆ ಯೋಚನೆ ಮಾಡಿ, ವರ್ಷೇ ವರ್ಷೇ ಅಥವಾ ಐದು ವರ್ಷಕ್ಕೆ ಅಥವಾ ಹತ್ತು ವರ್ಷಕ್ಕೆ ಜನಗಳಿಗೆ ಅನುಕೂಲವಾಗತಕ್ಕ ರಸ್ತೆಗಳಾಗಲೀ, ಇತರ ಸೌಲಭ್ಯಗಳಾಗಲೀ, ಮಾಡಬೇಕು ಎಂದು ಯೋಜನೆ ಮಾಡತಕ್ಕ ಟೌನ್ ಪ್ಲಾನಿಂಗ್ ಸ್ಕೀನ್ ಹತ್ತು ಸಾವಿರ ಜನಸಂಖ್ಯೆ ಇರತಕ್ಕ ನಗರಗಳಿಗೆ ಇಡತಕ್ಕುದು ದೇಶದ ಹಿತದೃಷ್ಟಿಯಿಂದ ಬಹಳ ಒಳ್ಳೆಯದು ಎಂದು ಹೇಳುತ್ತೇನೆ, ಮಹಾರಾಷ್ಟ್ರ ಮತ್ತು ನಮ್ಮ ದೇಶದ ಅನೇಕ ಕಡೆ ಈ ರೀತಿ ಇದೆ. ನಾನು ಉದಾಹರಣೆಗೆ ಹೇಳುವುದಾದರೆ, ಬೆಂಗಳೂರು ನಗರವನ್ನೇ ತೆಗೆದುಕೊಳ್ಳೋಣ. ಇಲ್ಲಿ ಟ್ರಸ್ಟ್ ಬೋರ್ಡ್, ಹಾಗೂ ನಗರ ಕಾರ್ಪೊರೇಷನ್ ಮತ್ತು ಹೌಸಿಂಗ್ ಬೋರ್ಡ್ ಈ ಮೂರೂ ಇವೆ. ಆದರೆ ಒಂದಕ್ಕೊಂದಕ್ಕೆ ಹೊಂದಾಣಿಕೆ ಇಲ್ಲ. ಇವರು ಮಾಡತಕ್ಕ ಲೇ ಔಟ್‌ಗೂ ಅವರು ಮಾಡತಕ್ಕ ಲೇ ಔಟ್‌ಗೂ ರಸ್ತೆಗಳ ಅಳತೆ ಮತ್ತು ಹೊಂದಾಣಿಕೆಯಲ್ಲಿ ಒಂದಕ್ಕೊಂದಕ್ಕೆ ಸಂಬಂಧಗಳಿಲ್ಲದ ರೀತಿಯಲ್ಲಿ ಇವೆ. ಟ್ರಸ್ಟ್ ಬೋರ್ಡ್ ಆಕ್ಟ್‌ನಲ್ಲಿ ಲೇ ಔಟ್ ಅಪ್ರೂವ್ ಮಾಡುವಾಗ ಕಾರ್ಪೊರೇಷನ್ನನ್ನು ಕೇಳಿ ಮಾಡಬೇಕೆಂದು ಇದ್ದರೂ ಕೂಡ, ಅವರು ಪ್ಲಾನ್ ವಗೈರೆ ಕಳುಹಿಸಿಕೊಟ್ಟರೂ ಕೂಡ ಅದು ಸರಿಯಾಗಿದೆಯೇ ಇಲ್ಲವೇ ಎನ್ನುವ ಹವ್ಯಾಸಕ್ಕೆ ಕೂಡ ಕಾರ್ಪೊರೇಷನ್ ಹೋಗುತ್ತಿಲ್ಲ ಎಂದು ಅನೇಕ ವರ್ಷಗಳ ಅನುಭವದಿಂದ ಹೇಳುತ್ತಿದ್ದೇನೆ. ಇದರಿಂದ ನಗರ ಯದ್ವಾತದ್ವಾ ಬೆಳೆಯುವುದಕ್ಕೆ ಕಾರಣವಾಗಿದೆ. ನಗರ ಯೋಜಿತವಾಗಿ ಬೆಳೆಯುವುದಕ್ಕೆ, ಅಚ್ಚುಕಟ್ಟಾದ ನಗರವಾಗಿ ಬೆಳೆಯುವುದಕ್ಕೆ ಸಾಧ್ಯವಾಗಲಿ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶಾಮಣ್ಣನವರು ಹೇಳಿದ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರೈವೇಟ್ ಲೇ ಔಟ್ಸ್ ಮಾಡಿರುವವರು ಒಂದು ಚದರ ಗಜಕ್ಕೆ 10 ರೂಪಾಯಿ, 15 ರೂಪಾಯಿ ಪ್ರಕಾರ ಸೈಟುಗಳನ್ನು ಕೊಡುವಾಗ ಟ್ರಸ್ಟ್ ಬೋರ್ಡಿನವರು 25 ರೂಪಾಯಿಗಳ ಪ್ರಕಾರ ಏಕೆ ಕೊಡಬೇಕು ಎಂದು ಗೊತ್ತಾಗುವುದಿಲ್ಲ. ಟ್ರಸ್ಟ್ ಬೋರ್ಡಿನವರು ಒಪ್ಪಿದ ಪ್ಲಾನ್ ಪ್ರಕಾರ, ನಿಮ್ಮ ಎಸ್ಟಿಮೇಟ್ ಪ್ರಕಾರ ರಸ್ತೆ ಇತ್ಯಾದಿ ಕೆಲಸಗಳನ್ನು ಮಾಡುವಾಗ ಪ್ರೈವೇಟ್‌ನವರು ಕೊಡುವುದಕ್ಕಿಂತ ಹೆಚ್ಚಾಗಿ ಎಂದರೆ ಒಂದು ಚದರ ಗಜಕ್ಕೆ 25 ರೂಪಾಯಿ ದರವನ್ನು ತೆಗೆದುಕೊಳ್ಳುವುದು ಏಕೆ ಎಂದು ಅರ್ಥವಾಗುತ್ತಿಲ್ಲ. ಇದರಿಂದ ಒಂದು ಚದರ ಗಜಕ್ಕೆ 10 ರೂಪಾಯಿ ಜಾಸ್ತಿಯಾಗುತ್ತದೆ. ಪ್ರೈವೇಟ್ ವ್ಯಕ್ತಿಗಳ ಅನುಕೂಲಕ್ಕೆ ನಾನು ಮಾತನಾಡುತ್ತಿದ್ದೇನೆಂದು ಯಾರೂ ಭಾವಿಸಬಾರದು. ಟ್ರಸ್ಟ್ ಬೋರ್ಡಿನವರು ಸೈಟುಗಳನ್ನು ಕೊಡುವಾಗ ಲಾಭ ನಷ್ಟವಿಲ್ಲದ ರೀತಿಯಲ್ಲಿ ವ್ಯವಹಾರ ಮಾಡಬೇಕೆಂದು ಇದ್ದರೂ ಕೂಡ ಲಾಭಕರವಾಗಿ ಕೆಲಸ ಮಾಡಲು ಕಾರಣವಾದರೂ ಏನು ? ಇಷ್ಟೇ ಅಲ್ಲ, ಭೂಮಿಯ ಧಾರಣೆಯನ್ನು ನೀವೆ ಜಾಸ್ತಿ ಮಾಡುವುದರಿಂದ ಇತರೇ ಜನರಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಕೂಡ ಹೇಳುತ್ತೇನೆ. ಟ್ರಸ್ಟ್ ಬೋರ್ಡಿನವರು 25 ರೂಪಾಯಿದರದಲ್ಲಿ ಸೈಟುಗಳನ್ನು ಹಂಚುವುದಾದರೆ, ಬಡವರಿಗೆ ಸೈಟುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ಈ ಎಲ್ಲದೃಷ್ಟಿಯಿಂದಲೂ ಪರಿಶೀಲನೆ ಮಾಡಿ, ಪ್ರೈವೇಟ್ ಲೇ ಔಟ್ ಮಾಡುವವರು ನೀವು ಒಪ್ಪಿಗೆ

ಕೊಟ್ಟ ಪ್ಲಾನ್ ಪ್ರಕಾರ ಕೆಲಸಕಾರ್ಯಗಳನ್ನು ಮಾಡಿ ಯಾವ ದರದಲ್ಲಿ ಕೊಡಬಲ್ಲರೋ ಅದೇ ದರ ದಲ್ಲಿ ಏಕೆ ಕೊಡುವುದಕ್ಕಾಗುವುದಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಹಾಗಿಲ್ಲದೆಇದ್ದರೆ, ಬಡವರಿಗೆ, ಹಿಂದುಳಿದ ಜನಾಂಗಗಳವರಿಗೆ, ಹಣಕಾಸಿನ ಪರಿಸ್ಥಿತಿಯಿಂದ ಹಿಂದಿರುವವರಿಗೆ ಟ್ರಸ್ಟ್ ಬೋರ್ಡಿನಿಂದ ಸ್ಶೈಟುಗಳು ಸಿಕ್ಕಲಾರದು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಟ್ರಸ್ಟ್ ಬೋರ್ಡಿನವರು ಅನೇಕ ಕಡೆ ಸೊಸೈಟಿಗಳಿಗೆ ಮಾನ್ಯತೆ ಕೊಟ್ಟು, ಜಾಗ ಕೊಂಡುಕೊಳ್ಳಿ ಎಂದು ಹೇಳಿದ್ದಾರೆ. ಅದರಂತೆ ಅವರು ಜಾಗ ಕೊಂಡುಕೊಂಡು ಅದರ ಮೇಲೆ ಸಾಲ ತೆಗೆದುಕೊಂಡಿದ್ದಾರೆ. ಅವರೆಲ್ಲ ಯಾರು ಎಂದರೆ ಬೆಂಗಳೂರಿನ ಸುತ್ತಮುತ್ತ ಇರುವ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು.

ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಒಂದು ಕಾನೂನುಮಾಡಿ ಐನು ನೂರು ರೂಪಾಯಿಗಳ ಮೇಲ್ಪಟ್ಟು ವರಮಾನ ಬರತಕ್ಕವರಿಗೆ ಈ ಸೊಸೈಟಿಯವರು ಸೈಟುಗಳನ್ನು ಕೊಡಬಾರದು ಎಂದು ಹೇಳಿ. ಹಾಗಿಲ್ಲದೆ ಹೋದರೆ, ಟ್ರಸ್ಟ್ ಬೋರ್ಡು ಕಾನೂನಿನಲ್ಲಿ ಕಾರ್ಮಿಕರಿಗೆ ಐದು ಪರ್ಸೆಂಟು ಸೈಟು ಕೊಡಬೇಕು ಎಂದು ಮಾಡಿ. ಲೇಔಟ್ ಮಾಡಿದಾಗ ಅಪ್ರೂವಲ್ ಕೊಟ್ಟಂಥ ಸೊಸೈಟಿಗಳಿಗೆ ಮತ್ತೆ ಅಡಚಣೆ ಮಾಡುವ ವಿಷಯಕ್ಕೆ ಕೈಹಾಕಬಾರದು ಎಂದು ಹೇಳುತ್ತೇನೆ. ಸೈಟುಗಳನ್ನು ನೀವಾಗಿ ಕೊಡುವುದಿಲ್ಲ. ಅವರು ಮಾಡತಕ್ಕ ಸೈಟುಗಳಿಗೆ ಅಪ್ರೂವಲ್ ಕೊಡದಿದ್ದರೆ, ನಗರಗಳಲ್ಲಿ ಗುಡಿಸಲುಗಳು ಬೆಳೆಯುತ್ತವೆ, ಅನೇಕ ವ್ಯಾಧಿಗಳಿಗೆ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಆದರೂ ಕೂಡ ತಾವು ನೋಡಬೇಕು ಎಷ್ಟೋ ಕಾರ್ಖಾನೆಗಳು ಬೆಳೆಯುತ್ತಿವೆ ಆದರೆ ಅಲ್ಲಿ ಕೆಲಸ ಮಾಡುವ ಕಾರ್ಮಿಕ ಕುಟುಂಬಕ್ಕೆ ಟ್ರಸ್ಟ್‌ಬೋರ್ಡು ಅಥವಾ ಹೌಸಿಂಗ್‌ಬೋರ್ಡುನವರು ಸೈಟುಗಳನ್ನು ಒದಗಿಸಿಕೊಡುತ್ತಾ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಯಾವ ಒಂದು ಪರಿಹಾರವೂ ಇಲ್ಲವೆ ಕೈಗಾರಿಕೆಗಳನ್ನು ನಗರಗಳಲ್ಲಿ ಹೆಚ್ಚಾಗಿ ಮಾಡಬಾರದು. ನಗರದ ಸುತ್ತ ಮಾನ್ಯ ಮಂತ್ರಿಗಳು ಆರೋಗ್ಯ ಮಂತ್ರಿಗಳು, ಅರ್ಥಿಕ ಮಂತ್ರಿಗಳು ಹೋಗಿ ಬಂದು ನಗರ ಯಾವ ರೀತಿ ಬೆಳೆಯುತ್ತಿದೆ ಎನ್ನುವುದನ್ನು ಪರೀಕ್ಷೆ ಮಾಡಿದರೆ ಒಳ್ಳೆಯದು. ಪ್ಯಾಲೇಸ್ ಆರ್ಚರ್ಡ್ ನೋಡಿ ಬೆಂಗಳೂರು ಚೆನ್ನಾಗಿ ಬೆಳೆದಿದೆ ಎಂದು ತಪ್ಪು ತಿಳಿದುಕೊಳ್ಳಬಾರದು. ಬೆಂಗಳೂರು ನಗರದ ಸುತ್ತ ಮುತ್ತ ಸುಮಾರು 10 ಮೈಲಿಗಳವರೆಗೆ ತರಕಾರಿ ಮತ್ತು ಬತ್ತ ಬೆಳೆಯುವುದರಿಂದ ಅನೇಕ ರೀತಿಯ ರೋಗಗಳನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಮಾನ್ಯ ಮಂತ್ರಿಗಳು ಹಿಂದೆ ನಗರಸಭಾ ಸದಸ್ಯರಾಗಿದ್ದರು. ತಮಗೆ ಅನುಭವ ಇದೆ, ತಮ್ಮಷ್ಟೇ ಅನುಭವ ಬಾಕಿ ಮಂತ್ರಿಗಳಿಗೂ ಆಗಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತೇನೆ. ಬೆಂಗಳೂರಿನಲ್ಲಿ ಯಾವ ರೀತಿ ಸೊಳ್ಳೆಗಳನ್ನು ಕಡಿಮೆ ಮಾಡಬೇಕು ಎಂದು ಸಲಹೆ ಮಾಡುವ ಕಮಿಟಿಗೆ ನನ್ನನ್ನು ಸದಸ್ಯನನ್ನಾಗಿ ಹಾಕಿದ್ದಾರೆ, ಸಂತೋಷ ಕಮಿಟಿಯ ಮುಖಾಂತರ ಈ ಸೊಳ್ಳೆಯ ಕಾಟವನ್ನು ತಪ್ಪಿಸಲಿಕ್ಕೆ ಮೂರು ಕೋಟಿ ರೂಪಾಯಿಗಳನ್ನು ಒದಗಿಸಬೇಕು. ಅಲ್ಲದೆ ಟ್ರಸ್ಟ್‌ಬೋರ್ಡು, ಹೌಸಿಂಗ್‌ಬೋರ್ಡು ಮತ್ತು ಕಾರ್ಪೋರೇಷನ್ ಈ ಮೂರರಕ್ಕೂ ಸಂಪರ್ಕ ಮಾಡತಕ್ಕ ಒಂದು ಬೋರ್ಡು ಆಗಬೇಕು. ಯಾವ ರೀತಿಯಿಂದ ನಗರವನ್ನು ಬೆಳೆಸಬೇಕು ಎಂದು ಪ್ಲಾನ್ ಮಾಡಬೇಕಾದರೆ, ಮೂರು ಸಂಸ್ಥೆಗಳೂ ಒಟ್ಟಿಗೆ ಕೆಲಸ ಮಾಡಬೇಕು. 30 ದಿವಸದೊಳಗೆ ಲೇಔಟ್ ಮಾಡಬೇಕೇ, ಬಿಡಬೇಕೇ ಎನ್ನುವ ವಿಷಯ ಇತ್ಯರ್ಥ ಮಾಡಬೇಕು. ಈಗ ಏನಾಗಿದೆ ಎಂದರೆ, ಟ್ರಸ್ಟ್‌ಬೋರ್ಡು ಅಪ್ರೂವ್ ಮಾಡದೆ ಇರುವುದನ್ನು ಕಾರ್ಪೋರೇಷನ್ ಅಪ್ರೂವ್ ಮಾಡುತ್ತಾರೆ. ಕಾರ್ಪೋರೇಷನ್ ಅಪ್ರೂವ್ ಮಾಡದೇ ಇರುವುದನ್ನು ಟ್ರಸ್ಟ್ ಬೋರ್ಡು ಅಪ್ರೂವ್ ಮಾಡುತ್ತದೆ. ಈ ರೀತಿ ಆಗಬಾರದು.

ಇನ್ನೊಂದು ವಿಚಾರ ಸರ್ಕಾರದವರು ವಾಟರ್‌ಬೋರ್ಡು ಮಾಡಿದ್ದಾರೆ. ಅವರು ತೆರಿಗೆ ವಸೂಲು ಮಾಡುತ್ತಿದ್ದಾರೆ. ಬೆಂಗಳೂರು ಪೌರರಿಂದ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಾರೆ, ಆದರೆ ಅವರಿಗೆ ನೀರು ಕೊಡದಿದ್ದರೆ ಯಾವ ಮುಖದಿಂದ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಾರೆ? ಇದು ನನ್ನ ಒಂದು ಕ್ಷೇತ್ರದ ಪ್ರಶ್ನೆಯಲ್ಲ, ಲಕ್ಷಾಂತರ ಮನೆಗಳಿಂದ ವಾಟರ್ ಟ್ಯಾಕ್ಸ್ ತೆಗೆದುಕೊಳ್ಳುತ್ತಾರೆ, ವಿದ್ಯಾಭ್ಯಾಸದ ಟ್ಯಾಕ್ಸ್ ರೀಡಿಂಗ್ ರೂಮು ಟ್ಯಾಕ್ಸ್ ಈ ರೀತಿ ಟ್ಯಾಕ್ಸ್ ತೆಗೆದುಕೊಳ್ಳುತ್ತಾರೆಯೇ ವಿನಹ ಅವರಿಗೆ ಯಾವ ವಿಧವಾದ ಸೌಲಭ್ಯವನ್ನು ಒದಗಿಸುತ್ತಿಲ್ಲ. ಜನರು ಸಿವಿಲ್ ಕೋರ್ಟು ನಲ್ಲಿ ಕೇಸ್ ಹಾಕಿದರೆ, ಈ ಟ್ಯಾಕ್ಸ್ ವಸೂಲು ಮಾಡುವುದಕ್ಕಾಗುವುದಿಲ್ಲ. ಯಾವ ಸೌಲಭ್ಯವನ್ನು ಕೊಡದೆ ಹಣವನ್ನು ವಸೂಲು ಮಾಡುತ್ತಿದ್ದರೆ ಹೇಗೆ ಸಾಧ್ಯ? ಟ್ಯಾಕ್ಸ್ ಕೊಡುವವರಿಗೂ. ಆರೋಗ್ಯದಿಂದ ಇರುವುದಕ್ಕೆ ಸಾಧ್ಯವಿಲ್ಲ, ಟಾಕ್ಸ್ ಕೊಡದೆ ಇರತಕ್ಕವರೂ ಆರೋಗ್ಯದಿಂದ ಇರುವುದಕ್ಕೆ ಸಾಧ್ಯವಿಲ್ಲ, ಆರೀತಿ ಯಾಗಿದೆ. ಈ ದೃಷ್ಟಿಯಿಂದ ಎಲ್ಲೆಲ್ಲಿ 10 ಸಾವಿರ ಜನಸಂಖ್ಯೆ

(ಶ್ರೀ ಕೆ. ಶ್ರೀರಾಮು)

ಇರತಕ್ಕ ನಗರಗಳಿಗೆ ಒಂದು ಯೋಜನೆ ತಯಾರು ಮಾಡಿ ಟೌನ್‌ಪ್ಲಾನಿಂಗ್ ಸೆಕ್ಷನ್ ಮುಖಾಂತರ ನಗರಗಳನ್ನು ಅಭಿವೃದ್ಧಿ ಮಾಡಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗ ನಮ್ಮ ಮುಂದಿರತಕ್ಕ ಹಲವಾರು ಬೇಡಿಕೆಗಳನ್ನು ಮಾನ್ಯ ಪೌರಾಡಳಿತ ಸಚಿವರು ಮಂಡಿಸಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡತಕ್ಕ ಕಾಲದಲ್ಲಿ ಮೊದಲನೆಯದಾಗಿ ಪೌರಾಡಳಿತ ಸಚಿವರನ್ನು ಅಭಿನಂದಿಸುತ್ತೇನೆ. ಕಾರಣವಾವರೂ ಇಷ್ಟೆ, ಸ್ಕ್ಯಾವೆಂಜರ್ಸ್‌ಗಳ ಸರ್ವಿಸಸ್ ಬಗ್ಗೆ ಇಷ್ಟು ವರ್ಷಗಳ ಕಾಲ ಅವರು ಪಡುತ್ತಿದ್ದಂಥ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಅವರು ಹುದ್ದೆಗಳನ್ನು ಖಾಯಂ ಮಾಡುತ್ತೇವೆ ಎನ್ನುವ ಘೋಷಣೆಯನ್ನು ಮಾಡಿದ್ದಾರೆ. ಸರ್ಕಾರಿ ಅಧಿಕಾರಿಗಳಿಗೆ ಏನೇನು ಸೌಲಭ್ಯಗಳಿವೆಯೋ ಅವನ್ನು ಇವರಿಗೂ ಕೊಡ ಕೊಡತಕ್ಕ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಇವರನ್ನು ಅಭಿನಂದಿಸಬೇಕಾಗಿದೆ. ಈಪೊತ್ತು ಮಾನ್ಯ ಸಚಿವರು ಬಹುಶಃ ಹೌಸಿಂಗ್ ವಿಷಯದಲ್ಲಿ ಹೆಚ್ಚು ಪ್ರಸ್ತಾಪ ಮಾಡಿದ್ದಾರೆ. ಚರ್ಚೆಮಾಡುವುದಕ್ಕಿಂತ ಮುಂಚೆ ಒಂದು ವಿಚಾರ ಹೇಳಬೇಕಾಗಿದೆ. ಅವರು ಅಧಿಕಾರ ವಹಿಸಿಕೊಂಡ ತರುಣದಲ್ಲಿ ಹೆಚ್ಚು ಉತ್ಸುಕತೆಯಿಂದ ಹಲವಾರು ಲೋಪದೋಷಗಳಿರುವುದನ್ನು ಹೊರಗೆಡುವುದಕ್ಕೆ ಪ್ರಯತ್ನ ಮಾಡಿದರು. ನಿಜವಾಗಿಯೂ ಅದು ಒಳ್ಳೆಯ ಕೆಲಸ. ಕಾರ್ಪೋರೇಷನ್‌ನಲ್ಲಿ ಒಂದೂವರೆ ಎರಡು ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ, ಟ್ರಸ್ಟ್ ಬೋರ್ಡಿನಲ್ಲಿ ಒಂದುಕೋಟಿ ರೂಪಾಯಿವರೆಗೆ ಲೆಕ್ಕ ಪತ್ರ ನಾಪತ್ತೆಯಾಗಿದೆ, ಎಂದು ಹೇಳಿ ಇದಕ್ಕೆ ಪ್ರೋಬ್ ಆರ್ಡರ್ ಅನ್ನು ಶರವೇಗದಲ್ಲಿ ಮಾಡಿದರು. ಮೂರು ತಿಂಗಳಲ್ಲಿ ಇಷ್ಟೆಲ್ಲಾ ಪತ್ತೆ ಹಚ್ಚಿದರು ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಅದಾದಮೇಲೆ, ಕೆಲವು ಕಾಗದ ಪತ್ರಗಳು ನಾಪತ್ತೆಯಾಗಿಲ್ಲ ಗೈರು ವಿಲೆ ಆಗಿವೆ ಎನ್ನುವ ಮರು ಹೇಳಿಕೆಯನ್ನು ನೀಡಿದರು. ತಾವು ಮಂತ್ರಿಗಳು ಇದರ ಬಗ್ಗೆ ತಮ್ಮ ಉತ್ತರದಲ್ಲಿ ಸ್ಪಷ್ಟೀಕರಣ ಮಾಡಬೇಕು. ಏಕೆಂದರೆ ಕಾಂಗ್ರೆಸ್ ಆರ್, ಆಡಳಿತಕ್ಕೆ ಬಂದ ತರುಣದಲ್ಲಿ ಹಿಂದಿನ ಸರ್ಕಾರಗಳಿಂದ ಅನಾಹುತ ನಡೆದುಕೊಂಡು ಬಂದಿದೆ ಎನ್ನುವ ಧಾಟಿಯಲ್ಲಿ ಹೇಳಿದ್ದಾರೆ. ಕಾರ್ಪೋರೇಷನ್‌ನಲ್ಲಿ ಒಂದೂವರೆ ಕೋಟಿ ರೂಪಾಯಿ ಹೋಯಿತು ಟ್ರಸ್ಟ್ ಬೋರ್ಡಿನಲ್ಲಿ ಒಂದು ಕೋಟಿ ಹೋಯಿತು, ಪಿ ಡಬ್ಲ್ಯೂಡಿಯಲ್ಲಿ ಹೀಗೆ ಆಗಿದೆ, ಹಿಂದಿನ ಸರ್ಕಾರದ ಮುಖ್ಯ ಮಂತ್ರಿಗಳು ಹಣವನ್ನು ಜೇಬಿನಲ್ಲಿ ಇಟ್ಟುಕೊಂಡು ಹೋದರು ಎನ್ನುವ ಧಾಟಿಯಲ್ಲಿ ಸರ್ಕಾರದಿಂದ ಹೇಳಿಕೆ ಕೊಟ್ಟುಕೊಂಡು ಹೋದರು. ಇದರ ಬಗ್ಗೆ ತಮ್ಮ ಹೇಳಿಕೆಯ ವಿವರಣೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಕಾರ್ಪೋರೇಷನ್‌ನಲ್ಲಿ ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ ಎಂದು ಕೇಳಿದ್ದೇನೆ. ತಾವು ಕೆಲವು ತಾಂತ್ರಿಕ ವಿಭಾಗಕ್ಕೆ ಸೇರಿದ ಅಧಿಕಾರಿಗಳನ್ನು ಮಾತ್ರ ಸಸ್ಪೆಂಡ್ ಮಾಡಿದ್ದೀರಿ ಆದರೆ ಲೆಕ್ಕಪತ್ರಇಲಾಖೆಗೆ ಸೇರಿದವರು, ಈ ವ್ಯವಹಾರಗಳಿಗೆ ಸಂಬಂಧಪಟ್ಟವರು ಹಲವರು ಇದ್ದಾರೆ. ಈ ವ್ಯವಹಾರಕ್ಕೆ ಸಂಬಂಧಪಟ್ಟ ರಿಜಿಸ್ಟರ್‌ಗಳೂ, ನಾಪತ್ತೆಯಾಗಿದ್ದರೆ, ಸಂಬಂಧಪಟ್ಟ ದಾಖಲಾತಿಗಳು ನಾಪತ್ತೆಯಾಗಿರತಕ್ಕ ಅಧಿಕಾರಿಗಳನ್ನು ಏತಕ್ಕೆ ಬಿಟ್ಟಿದ್ದೀರಿ? ಅವರ ಮೇಲೆ ತಾವು ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ವಿಜಿಲೆನ್ಸ್ ಕಮಿಷನ್‌ನವರು ಕೊಟ್ಟಿರತಕ್ಕ ರಿಪೋರ್ಟಿನ ಆಧಾರದ ಮೇಲೆ ತಾವು ಕ್ರಮ ತೆಗೆದುಕೊಂಡಿದ್ದೀರಿ, ಎಂದು ಕೇಳಿದ್ದೇನೆ. ಎಲ್ಲಾ ಅಧಿಕಾರಿಗಳ ಬಗ್ಗೆ ಒಂದೇ ಧಾಟಿಯಲ್ಲಿ ಹೋಗಿದ್ದೀರಿ. ಕೆಲವು ಅಧಿಕಾರಿಗಳು 8–10–15 ದಿವಸ ಮುಂಚೆ ಚಾರ್ಜು ತೆಗೆದುಕೊಂಡವರನ್ನು ಕೂಡ ಸಸ್ಪೆಂಡ್ ಮಾಡಿದ್ದೀರಿ ಎಂದು ಕೇಳಿದ್ದೇನೆ. ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳತಕ್ಕ ಕಾಲದಲ್ಲಿ ಹೀಗೆ ಹೋಗಬಾರದು. ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮಾನ್ಯ ಮಂತ್ರಿಗಳು ಡೆಲ್ಲಿಯಲ್ಲಿ ಆಗಸ್ಟ್ 15ರೊಳಗೆ ಒಂದು ಲಕ್ಷ ಸೈಟುಗಳನ್ನು ವಿತರಣೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ಮಾತನ್ನು ಅವರು ಈ ಸಭೆಯಲ್ಲಿ ಹೇಳಬೇಕಾಗಿತ್ತು. ದೆಹಲಿಯಲ್ಲಿ ಹೇಳಿದ ಔಚಿತ್ಯದ ಬಗ್ಗೆ ನಾನು ಹೇಳುವುದಿಲ್ಲ, ಇನ್ನು 20 ದಿವಸ ಅಥವಾ ಒಂದು ತಿಂಗಳ ಅವಧಿಯಲ್ಲಿ ಇಷ್ಟು ಸೈಟುಗಳನ್ನು ಹಂಚತಕ್ಕದ್ದು ಬರೀ ಪತ್ರಿಕಾ ಘೋಷಣೆ ಆಗಬಾರದು. ಯಾವ ಯಾವ ಜಿಲ್ಲೆಯಲ್ಲಿ ಹಂಚುವುದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದೀರಿ ಎನ್ನುವುದನ್ನು ಈಗ ತಿಳಿಸಬೇಕು ಎಂದು ಹೇಳುತ್ತೇನೆ. ಹಿಂದಿನ ಸರ್ಕಾರದವರು ಅರ್ಬನ್ ಡೆವಲಪ್‌ಮೆಂಟ್ ಬೋರ್ಡು ಅನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಅದರ ಕೆಲಸ ಯಾವ ರೀತಿಯಲ್ಲಿ ಮುಂದುವರಿಯುತ್ತಿದೆ ಎನ್ನುವುದನ್ನೂ ತಿಳಿಸಬೇಕು. ಬಹುಶಃ ತಾವು ಪೌರಾಡಳಿತ

ಸಚಿವರಾಗಿರುವುದರಿಂದ ತಾವು ಅದಕ್ಕೆ ಚೇರ್ಮನ್ ಆಗಿರಬೇಕೆಂದು ತಿಳಿದುಕೊಂಡಿದ್ದೇನೆ. ಅದರ ಕಾರ್ಯ ಎಷ್ಟರಮಟ್ಟಿಗೆ ಮುಂದೆ ಸಾಗಿದೆ ಎನ್ನುವುದನ್ನು ತಿಳಿಸಬೇಕು. ರಾಜ್ಯದಲ್ಲಿರತಕ್ಕ ಹಲವಾರು ಚಿಕ್ಕ ಚಿಕ್ಕಪಟ್ಟಣಗಳ ಅಭಿವೃದ್ಧಿ ಅಷ್ಟೊಂದು ಪ್ರಗತಿದಾಯಕವಾಗಿಲ್ಲ. ಈಗ ಬಹಶಃ ಹತ್ತು ಸಾವಿರ ಪ್ರಜಾ ಸಂಖ್ಯೆಗೆ ಮೇಲ್ಪಟ್ಟು ಇರತಕ್ಕ ನಗರಗಳಿಗೆ ಇದರ ವ್ಯಾಪ್ತಿ ಬರುತ್ತದೆ ಎಂದು ನನ್ನ ಅಭಿಪ್ರಾಯ. ಎಲ್ಲಾ ಪಟ್ಟಣಗಳು ಮತ್ತು ನಗರಗಳ ಅಭಿವೃದ್ಧಿ ಉತ್ತಮ ರೀತಿಯಲ್ಲಿ ಆಗತಕ್ಕ ಬಗ್ಗೆ ಕಾರ್ಪೋರೇಷನ್ ಏನೇನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕೆಂದು ಹೇಳುತ್ತೇನೆ.

ಆಮೇಲೆ ರೂರಲ್ ಹೌಸಿಂಗ್ ಬಗ್ಗೆ ತಾವು ಕೊಟ್ಟಿರತಕ್ಕ ಹಣ ಅತ್ಯಲ್ಪ. ಚೇರ್‌ಮನ್, ರೂರಲ್ ಹೌಸಿಂಗ್‌ಬೋರ್ಡ್ ಕಾರ್ಪೋರೇಷನ್ ಕಾಂಟಾಕ್ಟ್ ಮಾಡಿದ್ದೇನೆ. ಅವರು ಹೇಳಿದರು, ನಮ್ಮ ಹತ್ತಿರ ಹಣವಿಲ್ಲ ಎಂದು. ಈ ದೇಶದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗಿದೆ ಎಂದು ಘೋಷಣೆಗಳಿಂದಲೇ ಸಮರ್ಥಿಸುವುದು ಸರಿಯಾದದ್ದು ಅಲ್ಲ.

ಶ್ರೀ ಕೆ. ಪ್ರಭಾಕರ್.—ರೂರಲ್ ಹೌಸಿಂಗಿಗೂ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ಗೂ ಹೇಗೆ ರೆಲವೆಂಟ್ ?

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ಮರ್ಜ್ ಮಾಡಿ ಬಿಟ್ಟಿದ್ದಾರೆ. ಹೌಸಿಂಗ್‌ಬೋರ್ಡ್ ಅವರ ವ್ಯಾಪ್ತಿಗೆ ಬರುತ್ತದೆ ಎಂದು ತಿಳಿದುಕೊಂಡು ಹೇಳುತ್ತಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಕಡೆ ಮನೆಗಳಿಲ್ಲ ಎಷ್ಟು ಜನರಿಗೆ ಮನೆಗಳಿಲ್ಲ ಅಂಕಿಅಂಶಗಳನ್ನು ಸಂಗ್ರಹಣೆ ಮಾಡುವುದು ಸೂಕ್ತ. ಪ್ರೊಪೋರ್ಷನೇಟ್ ಮನೆಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಕೇವಲ ಬೆಂಗಳೂರು, ಮೈಸೂರಿನಲ್ಲಿ ಕೆಲವು ಮನೆಗಳನ್ನು ಕಟ್ಟಿಸುವುದರಿಂದ ಮತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೆಳದರ್ಜೆ ನೌಕರರಿಗೆ ಲೋ ಇನ್‌ಕಮ್ ಮತ್ತು ಮಿಡ್ಲ್ ಇನ್‌ಕಮ್ ಗ್ರೂಪ್‌ನವರಿಗೆ ಮನೆಗಳನ್ನು ಕಟ್ಟುವುದರಿಂದ ದೇಶದ ಸಮಸ್ಯೆ ಬಗೆಹರಿಯಿತು ಎಂದು ಹೇಳುವುದು ಸರಿಯಲ್ಲ. ಇವೊತ್ತು ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರಿಗೆ ಗಿರಿಜನರಿಗೆ ಮನೆಗಳಿಲ್ಲ. ಹಲವಾರು ಬೇರೆ ಜನಾಂಗದವರು ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದಾರೆ. ಆದರಿಂದ ಇವೊತ್ತು ರಾಜ್ಯದಲ್ಲಿ ಯಾವಯಾವ ಪ್ರದೇಶಗಳಲ್ಲಿ ಮನೆಗಳು ಇಲ್ಲದೆ ಇರತಕ್ಕ ಜನರು ಇದ್ದಾರೆ ಎನ್ನುವ ಬಗ್ಗೆ ಪೂರ್ಣ ಸ್ಟ್ಯಾಟಿಸ್ಟಿಕ್ಸ್ ತರಿಸಿ, ಪ್ರೊಪೋರ್‌ಷನೇಟ್ ಆಗಿ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವುದನ್ನು ಹೇಳುತ್ತೇನೆ.

ಇನ್ನು ಬೆಂಗಳೂರು ವಾಟರ್‌ಸಪ್ಲೈ ಸಿವರೇಜ್ ಬೋರ್ಡ್ ಬಗ್ಗೆ ಮಾತನಾಡುವಾಗ ಮಂತ್ರಿಗಳನ್ನು ಕೊಂಚ ಕಟುವಾಗಿ ಟೀಕಿಸಿ ಮಾತನಾಡಬೇಕಾಗುತ್ತದೆ. ತಾವು ಅಧಿಕಾರವನ್ನು ವಹಿಸಿಕೊಂಡ ಮರುಕ್ಷಣದಲ್ಲಿ ತಮಗೆ ಕೂಡ ಸಂಬಂಧಪಟ್ಟ ಹಿಂದಿನ ಬೋರ್ಡಿನ ಸದಸ್ಯರಿಂದ ದೂರು ಬಂದಿವೆ. ತಾವು ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳಬೇಕಾಗುತ್ತದೆ. 24-3-1972 ರಲ್ಲಿ ಬೋರ್ಡಿನ ಅವ್ಯವಹಾರದ ಬಗ್ಗೆ ತಮಗೆ ಒಂದು ದೂರನ್ನು ಇತ್ತಿದ್ದೇನೆ. ವೈಯಕ್ತಿಕವಾಗಿ ಯಾರ ಮೇಲೆ ಆರೋಪವನ್ನು ಮಾಡಬೇಕು ಎನ್ನುವ ಅಭಿಲಾಷೆ ಇಲ್ಲ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಸಭೆಯಲ್ಲಿ ತಿಳಿಸಬೇಕು. ಈ ಬೋರ್ಡಿನ ಅವ್ಯವಹಾರಗಳ ಬಗ್ಗೆ ಈ ಬೋರ್ಡಿನಲ್ಲಿ ಇರತಕ್ಕ ಸದಸ್ಯರ, ಅಧ್ಯಕ್ಷರ ವಿರುದ್ಧ ಆಗಿನ ಸರ್ಕಾರದ ವಿರುದ್ಧ ಏನು ಅಪಾದನೆಗಳನ್ನು ಮಾಡಿದ್ದೀರಿ ಎಂದು ಎಲ್ಲಾ ಓದುವುದಕ್ಕೆ ಹೋಗುವುದಿಲ್ಲ. ಹಾಗೆ ಓದುವುದಕ್ಕೆ ಹೋದರೆ ಈ ಸಭೆಯ ಕಾಲ ಹೆಚ್ಚು ಬೇಕಾಗುತ್ತದೆ. ಒಂದೇ ಒಂದು ಮಾತು ಹೇಳುತ್ತೇನೆ. ಶ್ರೀಮಾನ್ ಚೆನ್ನಬಸಪ್ಪನವರು ಈ ಸಭೆಗೆ ಉಪನಾಯಕರಾಗಿ ಹೀಗೆ ಹೇಳಿದ್ದಾರೆ ; "Mysore State was once a model for good, efficient and honest administration ; but under the regime of Veerendra Patil Mysore has become a model for big fishy money games. It has become a paradise for contractors and middlemen ; it has become a paradise for corrupt men."

ಶ್ರೀಮಾನ್ ಚನ್ನಬಸಪ್ಪನವರು ಈ ಸಭೆಯಲ್ಲಿ ಇತ್ತಕಡೆ ಕೂತಿದ್ದಾಗ 28ನೇ ಸೆಪ್ಟೆಂಬರ್ 1970ರಲ್ಲಿ ನಿಮ್ಮ ಬೋರ್ಡಿನ ಹಗರಣದ ಬಗ್ಗೆ ಹೇಳಿದ್ದಾರೆ. ಹಾಗೆಯೇ ನಮ್ಮ ಮಿತ್ರರು ನಂಜೇಗೌಡರು ಮತ್ತು ಮಾನ್ಯ ದೇವರಾಜ ಅರಸ್‌ರವರು ಹೇಳಿರುವುದನ್ನು ಇಲ್ಲಿ ಓದುವುದಕ್ಕೆ ಟೈಮ್ ಇಲ್ಲ. ತಾವು ಅಧಿಕಾರ ವಹಿಸಿಕೊಂಡ ತಾರುಣ್ಯದಲ್ಲಿ ಭ್ರಷ್ಟಾಚಾರ ನಿರ್ಮೂಲನ ಮಾಡುವುದಕ್ಕೆ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾಡಿದ ಘೋಷಣೆಯ ಪರಮಾವಧಿ ಎಲ್ಲಿಯವರೆಗೆ ಹೋಯಿತೆಂದರೆ, ಹಿಮಾಲಯ ಪರ್ವತದಿಂದ ಗೌರಿಶಂಕರದ

(ಶ್ರೀ ಎಚ್. ಡಿ. ದೇವೇಗೌಡ)

ವರಿಗೆ ಮುಟ್ಟಿತು ಎಂದು ಹೇಳುತ್ತೇನೆ. ನಾನು ಕೇಳುತ್ತೇನೆ, ನೀವು ಬೋರ್ಡಿನ ಅವ್ಯವಹಾರದ ಬಗ್ಗೆ ಎಷ್ಟು ಕ್ರಮ ತೆಗೆದುಕೊಂಡಿದ್ದೀರಿ? ಹಿಂದೆ ಮಾಡಿರತಕ್ಕ ಪೈಪ್ ಡೀಲ್ ಜೊತೆಗೆ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್‌ಗೆ 84 ಲಕ್ಷ ರೂಪಾಯಿನ ಕಂಟ್ರಾಕ್ಟ್ ಕೊಟ್ಟಿದ್ದೀರಿ. ವಾಟರ್‌ಟ್ರೀಟ್ ಮೆಂಟ್ ಪ್ಲಾಂಟ್ ಟೆಂಡರ್ ಅಕ್ಸೆಪ್ಟ್ ಮಾಡುವಾಗ ಲೋಯೆಸ್ಟ್ ಟೆಂಡರ್ ತೆಗೆದುಹಾಕಿ 84 ಲಕ್ಷ ರೂಪಾಯಿಗಳ ಹೈಯರ್ ಟೆಂಡರ್ ಅಕ್ಸೆಪ್ಟ್ ಮಾಡಿದ್ದೀರಿ. ಕೊಟ್ಟಿರತಕ್ಕ ಕಾರಣ ಏನು ಎಂದರೆ ಜೆವೊಮಿಲ್ಲರ್ ಪ್ಲಾಂಟು ಅಷ್ಟೊಂದು ಸಮರ್ಪಕವಾಗಿ ಕೆಲಸ ಮಾಡಲಾರದು ಎಂದು. 8 ಲಕ್ಷ ರೂಪಾಯಿ ಹೆಚ್ಚು ಹಣವನ್ನು ಕೊಟ್ಟಿದ್ದೀರಿ. ನಾನಾದರೂ ಹೇಳುತ್ತೇನೆ ಅದರ ಔಚಿತ್ಯ ಏನು ಎಂದು, ಅದರ ಬಗ್ಗೆ ತನಿಖೆ ಆಗಬೇಕು. ಜೆವೋಮಿಲ್ಲರ್ಸ್ is a reputed firm and they have done such type of work in almost all parts of the country including Bombay, Delhi, Calcutta, Agra and several such big cities. ಇನ್ನೊಂದು ಸೋಜಿಗವಾದ ಸಂಗತಿಯೆಂದರೆ ಆದಾದ ಒಂದು ತಿಂಗಳಿಗೆ ಒಂದುಕೋಟಿ 60 ಲಕ್ಷ ರೂಪಾಯಿನ ಸ್ಯೂರೇಜ್ ಟೆಂಡರ್ ಜೆಯೋ ಮಿಲ್ಲರ್‌ಗೆ ಕೊಟ್ಟಿದ್ದೀರಿ. ಒಂದು ತಿಂಗಳ ಹಿಂದೆ ಅವರ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ಏನು ಇದೆ ಅದು ಕೆಲಸಕ್ಕೆ ಸಮರ್ಪಕವಾಗಿಲ್ಲ ಎಂದು ಹೇಳಿ ಮತ್ತೆ ಅದೇ ಫರ್ಮ್‌ನವರಿಗೆ ಒಂದು ತಿಂಗಳಾದ ಮೇಲೆ ಸ್ಯೂವರೇಜ್ ವರ್ಕ್‌ನ್ನು ವಹಿಸಿದ್ದೀರಿ. ಯಾವ ಬೋರ್ಡಿನ ಆಡಳಿತ ಮಂಡಳಿಯವರು ಒಂದು ತಿಂಗಳ ಹಿಂದೆ ಈ ಫರ್ಮಿನ ಯೋಗ್ಯಾಯೋಗ್ಯತೆ ಬಗ್ಗೆ ಪರಿಶೀಲನೆ ಮಾಡಿ ಟೆಂಡರ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರೋ ಅದೇ ಆಡಳಿತ ಮಂಡಳಿಯವರು ಒಂದು ತಿಂಗಳಾದ ಮೇಲೆ 1 ಕೋಟಿ 60 ಲಕ್ಷ ರೂಪಾಯಿ ಟೆಂಡರ್ ಅವರಿಗೆ ಕೊಡುವ ಬಗ್ಗೆ ಯಾವ ಕಾರಣದಿಂದ ಅವರ ಮನಸ್ಸು ಪರಿವರ್ತನೆ ಆಯಿತು ? ಬಹುಶಃ ಏನಾದರೂ ಸಂಬಂಧಪಟ್ಟ ಕಂಟ್ರಾಕ್ಟರು ಆಡಳಿತ ಮಂಡಳಿಯ ಅಭೀಷ್ಟವನ್ನು ಈ ಒಂದು ತಿಂಗಳ ಅವಧಿಯಲ್ಲಿ ನೆರವೇರಿಸಿದರೇ ಎಂದು ಕೇಳಬೇಕಾಗುತ್ತದೆ. ಸರ್‌ಫೇಸ್‌ರೋಡ್‌ಗೆ ರಾಮನಗರ ಪಿ.ಡಬ್ಲ್ಯು.ಡಿ. ಸಬ್‌ಡಿವಿಜನ್‌ನಲ್ಲಿ ಅರ್ತ್ ವರ್ಕ್‌ಗೆ ಏನು ಸ್ಟ್ಯಾಂಡರ್ಡ್ ರೇಟ್ ಇದೆ ಅದು ಹೈ ಟೆಕ್ನಿಕಲ್ ವರ್ಕ್ ಅಲ್ಲ, ಜಲ್ಲಿ ಹಾಕುವುದು, ಕಲ್‌ವರ್ಟ್ ಕಟ್ಟುವುದು, ಬೋರ್ಡಿನವರು ಈ ಒಂದು ಕೆಲಸಕ್ಕೆ ಏನು ಕೊಡುತ್ತಾರೆ ಅದನ್ನು ಸಮರ್ಥನೆ ಮಾಡಬೇಕು. ಮಾನ್ಯ ಚೆನ್ನಬಸಪ್ಪನವರು ಮೊನ್ನೆ ಅಸೆಂಬ್ಲಿಯಲ್ಲಿ ಭಾಷಣ ಮಾಡತಕ್ಕ ಕಾಲದಲ್ಲಿ ಯಾವುದೋ ಒಂದು ಅಂದಾಜಿಗೆ ಒಂದು ಲಕ್ಷ 30 ಸಹಸ್ರ ರೂಪಾಯಿಗಳನ್ನು ಹೆಚ್ಚು ಕೊಡುವುದಕ್ಕೆ ಹೇಗೆ ಸಾಧ್ಯ ಎಂದು ಹೇಳಿದರು. ನಾನು ಇವೊತ್ತು ಹೇಳುತ್ತೇನೆ, the rates of all items have been up by 100 per cent. I would take a challenge and prove it.

12.00 NOON

ಇದಕ್ಕೆಲ್ಲಾ ಷೆಡ್ಯೂಲು ರೇಟು ಇವೆ. ಆದರೆ ಇಲ್ಲಿ ಷೆಡ್ಯೂಲು ರೇಟಿಗಿಂತ ಹೆಚ್ಚಾಗಿ ಎಂದರೆ ಶೇರಡ ನೂರಕ್ಕಿಂತ ಹೆಚ್ಚಾಗಿ ಷೆಡ್ಯೂಲು ರೇಟುಗಳ ಮೇಲೆ ಹಣ ಕೊಟ್ಟಿದ್ದಾರೆ. ಇದನ್ನು ನಾನು ತಮ್ಮ ಎದುರಿಗೇ ವಿವರವಾಗಿ ಪ್ರೂವ್ ಮಾಡಲು ತಯಾರಾಗಿದ್ದೇನೆ. ಒಂದು ವೇಳೆ ನಾನು ಮಾಡುವ ಅಪಾದನೆಗಳು ಸರಿಯಾಗಿಲ್ಲ! ಎಂದು ತಾವು ಹೇಳುವುದಾದರೆ ನಾನು ಇಲ್ಲಿ ಕುಳಿತು ಕೊಳ್ಳಲು ತಯಾರಾಗಿಲ್ಲ ಎಂದೂ ಹೇಳುತ್ತೇನೆ. ಇದು ಹೇಗೆ ಮಾಡಿದ್ದಾರೆ ಇದರಲ್ಲಿ ಏನೇನು ಮಾಡಿ ಯಾವ ರೀತಿ ರೆಕಾರ್ಡುಗಳನ್ನು ಕುಕ್ ಅಪ್ ಮಾಡಿ ಬಿಲ್ಡ್ ಮಾಡಿದ್ದಾರೆ ಎನ್ನುವುದು ಎಲ್ಲ ನನಗೆ ಚೆನ್ನಾಗಿ ಗೊತ್ತಾಗಿದೆ.

I know how it has been managed. I am prepared to prove each matter. I know how our records are being built up here. ಇವೆಲ್ಲಾ ತೊರೆಕಾಡನಹಳ್ಳಿಯಲ್ಲಿ ನಡೆದಿರುವ ಘಟನೆಗಳು. ತೊರೆಕಾಡನಹಳ್ಳಿಯಿಂದ ಬೆಂಗಳೂರುವರೆಗೆ ಎಷ್ಟು ಸಬ್‌ಡಿವಿಜನ್‌ಗಳು ಬರುತ್ತವೋ ಅವೆಲ್ಲವುಗಳಲ್ಲೂ ಇಲ್ಲಿ ಕೆಲಸಮಾಡುವ ಕಂಟ್ರಾಕ್ಟರುಗಳಿಗೆ ಯಾವ ಯಾವ ರೀತಿಯಾದ ರೇಟುಗಳು ಕೊಡಲಾಗಿವೆ ಎನ್ನುವ ವಿವರಗಳನ್ನೆಲ್ಲಾ ಈ ಸಭೆಯ ಮುಂದೆ ತಂದು ಇಡಬೇಕು ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇದರ ಜೊತೆಗೆ ಇಲ್ಲಿರುವ ಬೋರ್ಡಿನವರು ರೂಲ್ಸು ಪ್ರಕಾರ ಅವರ ಅನ್ಯುಯಲ್ ಅಕೌಂಟನ್ನು ಸರಕಾರಕ್ಕೆ ಮಂಡಿಸಬೇಕು. ಇದುವರೆಗೆ ಅಂತಹ ಯಾವ ಅಕೌಂಟುಗಳನ್ನೂ ತಂದು ಸರಕಾರಕ್ಕೆ ಕೊಡಲಿಲ್ಲ. ಇಷ್ಟು ವರ್ಷಗಳಾದರೂ ಅನ್ಯುಯಲ್ ಅಕೌಂಟು ಕೊಡದೇ ಇರಲು ಕಾರಣವೇನು ?

Board accounts are not placed before the Legislature, though it is a statutory obligation. They should not hesitate to place it. ಈ ಬೋರ್ಡಿನ ವ್ಯವಹಾರಗಳ ಬಗ್ಗೆ ಅದರ ವರ್ಷದ ಲೆಕ್ಕಪತ್ರಗಳನ್ನು ಏತಕ್ಕಾಗಿ ಇದುವರಗೆ ಕೊಡಲಿಲ್ಲ? ಇದರ ಬಗ್ಗೆ ಒಂದು ಮಾತನ್ನು ನಾನು ಸ್ವಲ್ಪ ಕಟುವಾಗಿ ಹೇಳಬೇಕಾಗಿದೆ. ಮಾನ್ಯ ಸಚಿವರಿಗೆ ವೈಯುಕ್ತಿಕವಾಗಿ ನಾನು ಏನು ಹೇಳುತ್ತಿಲ್ಲ. ಅವರು ಸರಕಾರದಲ್ಲಿ ಒಬ್ಬರು ಗೌರವ ಯುತವಾದ ನಾಯಕರು ಎಂದು ಅವರಿಗೆ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಶ್ರೀಮಾನ್ ಕಾಟ್ವೆಯವರನ್ನು ಇಲ್ಲಿಗೆ ಚೇರ್ಮನ್ನರಾಗಿ ನೇಮಕಮಾಡಿದ್ದಾರೆ. ಇವರು ರಿಟೈರಾದ ಒಬ್ಬ ಇಂಜನೀಯರು. ಇಂತಹವರನ್ನು ಇಲ್ಲಿ ಮತ್ತೆ ನೇಮಕ ಮಾಡಲು ಅಂತಹ ವಿಶೇಷ ಕಾರಣ ಗಳಾದರೂ ಏನಿದ್ದವು? ಇದರಲ್ಲಿ ಮಂತ್ರಿಗಳು ಸ್ವಲ್ಪ ಹೆಚ್ಚು ಆಸಕ್ತಿ ಮಾಡಿದ್ದಾರೆಂದು ನನಗೆ ಗೊತ್ತಾಗಿದೆ. ಈ ಬೋರ್ಡಿನಲ್ಲಿ ನಡೆದಿರುವ ಅವ್ಯವಹಾರಗಳನ್ನು ಸರಿಪಡಿಸಲು ಇವರು ಸಮರ್ಥ ರಾದ ಅಧಿಕಾರಿಗಳೆಂದು ಇವರನ್ನು ಇಲ್ಲಿಗೆ ತರಲಾಯಿತೇ? ಇವರು ರಿಟೈರಾಗಿ ಆರೇಳು ವರ್ಷ ಗಳಾದ ಮೇಲೆ ಇವರನ್ನು ಮತ್ತೆ ಇಲ್ಲಿಗೆ ಏಕೆ ತೆಗೆದುಕೊಳ್ಳಬೇಕಾಗಿತ್ತು? ಇಂತಹವರನ್ನು ಇಲ್ಲಿ ಚೀಫ್ ಇಂಜನೀಯರಾಗಿ ಇಲ್ಲವೇ ಚೇರ್ಮನ್ನರಾಗಿ ನೇಮಕ ಮಾಡಬಾರದು ಎಂದು ಕೇಳಿಕೊಳ್ಳು ತ್ತೇನೆ. ಇದಕ್ಕೆ ನೀವೇ ಕಾರಣರು. You are responsible for it.

SRI B. BASAVALINGAPPA.—Before the Hon'ble Member proceeds on this point, I would like to say that it is just an *ad hoc* arrangement; it is not an appointment at all. Any time we can remove him.

ಶ್ರೀ ಹೆಚ್. ಡಿ. ದೇವೇಗೌಡ.—ಸಭೆಯಲ್ಲಿ ಮಾನ್ಯ ಮಂತ್ರಿಗಳು ಇವರನ್ನು ಕೂಡಲೇ ತೆಗೆಯುತ್ತೇನೆ ಎಂದು ಆಶ್ವಾಸನೆ ಕೊಟ್ಟರೆ ನಾನು ಅದನ್ನು ಖಂಡಿತ ಸ್ವಾಗತ ಮಾಡುತ್ತೇನೆ.

In the interest of better administration, if he assures that he is going to change him immediately, I welcome that. The moment he comes out with a specific and categorical statement regarding this man.

ಶ್ರೀ ಬಿ. ಬಸವಲಿಂಗಪ್ಪ.—ನಾನು ಮೊದಲೇ ಹೇಳಿದ ಹಾಗೆ ಇಲ್ಲಿ ಚೀಫ್ ಇಂಜನೀಯರಾಗಿ ನೇಮಕ ಮಾಡಿರುವುದು ಒಂದು ಅಡ್ ಹಾಕ್ ಅರೇಂಜ್‌ಮೆಂಟ್ ಮೇಲೆ ಮಾಡಿರುವುದು. ನಿಯಮ ಗಳ ಮೇಲೆ ಮಾಡಿಲ್ಲ. ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಒಂದು ತಿಂಗಳಿಂದಲೂ ಸರಕಾರ ಪರಿಶೀಲಿಸುತ್ತಿದೆ. ಇದರಲ್ಲಿ ಸ್ವಲ್ಪ ತಡವಾಗಿದೆ, ಅದಕ್ಕಾಗಿ ಸದಸ್ಯರು ಕ್ಷಮಿಸಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀ ಬಸವಲಿಂಗಪ್ಪನವರು ಹಿಂದೆ ಒಂದು ಸಾರಿ ಆಡಳಿತ ದಲ್ಲಿದ್ದಾಗ ಅವರಿಗೆ ಕೊಟ್ಟ ಫರ್ನಿಚರುಗಳನ್ನು ಸರಕಾರಕ್ಕೆ ವಾಪಸು ಕೊಡಲಿಲ್ಲ ಎಂದು ಇದರ ಬಗ್ಗೆ ವ್ಯವಹಾರಗಳು ಕೋರ್ಟಿನಲ್ಲಿವೆ ಎಂದು ಗೊತ್ತಾಗಿದೆ. ಇಂತಹ ಪ್ರಕರಣಗಳಿಗೆ ಅವರು ಅವಕಾಶ ಕೊಡಬಾರದಾಗಿತ್ತು. ಅವರು ಒಳ್ಳೆಯ ನಾಯಕರಾಗಬೇಕೆಂದು ನಮ್ಮ ಆಸೆ.

He must become a good leader. That is my wish. Those things should not be there. He must be above board.

ವೈಯುಕ್ತಿಕವಾಗಿ ನಾನು ಇಲ್ಲಿ ಹೇಳುತ್ತಿಲ್ಲ. ಯಾವಾಗ ಒಂದು ಸಾರಿ ಮಂತ್ರಿಗಳಾಗಿ ಆಡಳಿತ ದಲ್ಲಿ ಬಂದರೋ ಆಗ ಅವರು ಇವನ್ನೆಲ್ಲಾ ಸರಿಮಾಡುತ್ತಾರೆ ಎಂದು ನಾವು ಭಾವಿಸಿದ್ದೆವು. ಯಾವಾಗಲೂ ಮಂತ್ರಿ ಸ್ಥಾನದಲ್ಲಿ ಕೆಲಸ ಮಾಡುವವರು ನಿಷ್ಕಳಂಕವಾದ ರೀತಿಯಲ್ಲಿ ಕೆಲಸ ಮಾಡುವ ವ್ಯಕ್ತಿಗಳಾಗಿರಬೇಕು. ಇದರಿಂದ ಅವರ ಗೌರವ ಹಾಗೂ ಯೋಗ್ಯತೆ ಹೆಚ್ಚು ಆಗುತ್ತದೆ. ಮತ್ತು ಸರಕಾರಕ್ಕೂ ಹೆಚ್ಚು ಮಾನ್ಯತೆ ದೊರೆಯುತ್ತದೆ ಮತ್ತು ಜನರು ಹೇಳುವ ಅಭಿಪ್ರಾಯಗಳಿಗೆ ಪುರಸ್ಕಾರ ದೊರೆಯುತ್ತದೆ. ಮಾನ್ಯ ಮಂತ್ರಿಗಳು ಕೊಡುತ್ತಿರುವ ಹೇಳಿಕೆಗಳು ಪತ್ರಿಕೆಗಳಲ್ಲಿ ಆಗಾಗ್ಗೆ ಬರುತ್ತಿವೆ. ಅದನ್ನೂ ನೋಡಿದ್ದೇನೆ. ಆದುದರಿಂದ ನಾನು ಇಲ್ಲಿ ಹೇಳುವುದು ಒಂದು ಸಣ್ಣ ಸ್ಥಾನಕ್ಕೆ ನೇಮಕ ಮಾಡುವಾಗ ಅವರು ಚರಿತ್ರಾರ್ಹವಾಗಿ ಚೆನ್ನಾಗಿ ಕೆಲಸಮಾಡಿದವರಾಗಿರ ಬೇಕು. ಆದರೆ ಇಲ್ಲಿ ಶ್ರೀ ಕಾಟ್ವೆಯವರನ್ನು ಹಿಂದೆ ಕ್ವಾಲಿಟಿ ಕಂಟ್ರೋಲ್ ಇಲಾಖೆಯಲ್ಲಿ ಶರಾವತಿ ಯೋಜನೆಯಲ್ಲಿ ನೇಮಕಮಾಡಿ ಅವರು ಅಲ್ಲಿದ್ದ ಮೂರು ವರ್ಷಗಳಲ್ಲಿ ಅನೇಕ ಅನಾಹುತಗಳು ನಡೆದಿವೆ ಎಂದು ಗೊತ್ತಾಗಿದೆ. ಇವರು ಇಲ್ಲಿ ಸಬ್ ಸ್ಟ್ಯಾಂಡರ್ಡ್ ವರ್ಕ್ ಹಾಗೂ ಇನ್ನಿತರ ಅವ್ಯವಹಾರದ ಕೆಲಸಗಳನ್ನು ಮಾಡಿ ಕೆಟ್ಟ ಹೆಸರನ್ನು ಪಡೆದುಕೊಂಡಿದ್ದಾರೆ. ಇಂತಹವರನ್ನು

(ಶ್ರೀ ಹೆಚ್. ಡಿ. ದೇವೇಗೌಡ)

ಇಲ್ಲಿ ಏಕೆ ನೇಮಿಸಬೇಕು ? This man has to stand there as an accused. I have no confidence in him. ಇಂತಹ ಅಧಿಕಾರಿಗಳನ್ನು ಈ ಬೆಂಗಳೂರಿನಲ್ಲಿರುವ ಬೋರ್ಡಿಗೆ ನೇಮಕ ಮಾಡಿಕೊಂಡು ಇಲ್ಲಿರುವ ಅವ್ಯವಹಾರಗಳನ್ನು ಸರಿಪಡಿಸಲಾಗುತ್ತದೆಯೇ ? ನಾನು ಬೆಂಗಳೂರು ನಗರದಲ್ಲಿರುವ ಸುಮಾರು 20ಲಕ್ಷ ಜನತೆಯ ಪರವಾಗಿ ಹೇಳುತ್ತಿದ್ದೇನೆ ಮತ್ತು ಇದು ನಮ್ಮ ಕರ್ತವ್ಯ ಕೂಡ. ಆದುದರಿಂದ ಇಲ್ಲಿ ಯಾವ ರೀತಿಯಾದ ಸಬ್ ಸ್ಟ್ಯಾಂಡರ್ಡ್ ಕೆಲಸಗಳೂ ಕೂಡ ಮಾಡಬಾರದು. ಇದರ ಬಗ್ಗೆ ಹೇಳುವಾಗ ಇಲ್ಲಿಗೆ ಬಂದಿರುವ ಚೀಫ್ ಇಂಜನೀಯರ ಮೇಲೆ ಅನೇಕ ಆಪಾದನೆಗಳು ಬಂದಿವೆ. ಇದರಲ್ಲಿ ನಿರ್ಧಾರ ಮಾಡಬೇಕಾದವರು ಟೆಕ್ನಿಕಲ್ ಪೀಪಲ್. ನಾವು ಹಾಗೂ ನೀವೂ ಟೆಕ್ನಿಕಲ್ ಆದ ಅಭಿಪ್ರಾಯಗಳನ್ನು ಕೊಡಲು ಆಗುವುದಿಲ್ಲ. ಇದಕ್ಕಾಗಿ ಇದರ ಬಗ್ಗೆ ಒಂದು ಹೈ ಪವರು ಕಮಿಟಿಯನ್ನು ಇಲ್ಲಿ ನೇಮಕ ಮಾಡಬೇಕೆಂದು ಸರಕಾರದಲ್ಲಿ ಹೇಳುತ್ತೇನೆ. ಇದರೊಳಗಿರುವ ಫಿಷೀ ಡೀಲ್ ಏನಿದೆ ಅದರ ಬಗ್ಗೆ ವಿಚಾರಣೆ ಮಾಡಿ ಅದನ್ನು ಜನರ ಮುಂದೆ ಬರುವಂತೆ ಮಾಡಿ. ಇದರಲ್ಲಿ ಯಾವುದೇ ರೀತಿಯಾದ ಅಧಿಕಾರಿಗಳೇ ಇರಲಿ ಅವರ ಬಗ್ಗೆ ವಿಚಾರಣೆ ಮಾಡಿ ಸರಿಯಾದ ಒಂದು ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ನಾನು ಹೇಳುವುದು I have no confidence in him. I am not going to spare even in case Sri Veerendra Patil is involved. I do not want to see any fishy deal by any man. ಇದರಲ್ಲಿ ಏನಾದರೂ ಅನ್ಯಾಯಗಳು ಆಗಿದ್ದರೆ ಇದರ ಬಗ್ಗೆ ವಿಚಾರಣೆ ಮಾಡಲು ಹಿಂದುಮುಂದು ನೋಡಬಾರದು. ಸರಕಾರ ಇವೆಲ್ಲ ಪ್ರಕರಣಗಳನ್ನೂ ವಿಚಾರಣೆ ಮಾಡಲು ಒತ್ತಾಯ ಮಾಡ ಬೇಕೆಂದು ನಾನು ಇಲ್ಲಿ ಹೇಳುತ್ತೇನೆ. ಇದರಲ್ಲಿ ಶ್ರೀ ವೀರೇಂದ್ರ ಪಾಟೀಲ್‌ರವರು ಅನ್ಯಾಯ ಗಳನ್ನು ಮಾಡಿದ್ದಾರೆ ಎನ್ನುವುದು ಜನತೆಯ ಮುಂದೆ ಬಂದರೆ ಅವರ ಬಗ್ಗೆ ಕೂಡ ಯಾವ ಕ್ರಮ ತೆಗೆದುಕೊಳ್ಳಬಹುದೋ ಅದನ್ನು ನೋಡಬಹುದು. I am demanding an enquiry, I am demanding a judicial probe irrespective of any political pressure,............ಅದಕ್ಕಾಗಿ ನಾನು ಇಲ್ಲಿ ಸಲಹೆ ಮಾಡುವುದು ವಾಟರ್ ಬೋರ್ಡಿನ ಬಗ್ಗೆ ಒಂದುನಿರ್ಣಯವನು ಬೆಂಗಳೂರಿನ ಜನತೆಯ ಪರವಾಗಿ ಮಾಡಲು ಇಲ್ಲಿ ಒಂದು ಜ್ಯುಡಿಷಿಯಲ್ ಪ್ರೋಬ್ ನಡೆಸಬೇಕೆಂದು ನಾನು ಸರಕಾರದಲ್ಲಿ ಮನವಿ ಮಾಡುತ್ತೇನೆ. ಇದೂ ಅಲ್ಲದೆ ಹಿಂದೆ ಶ್ರೀಮಾನ್ ಅರಸುರವರ ಕೆಲವು ಹೇಳಿಕೆಗಳು ಪತ್ರಿಕೆಗಳಲ್ಲಿ ಎಂದರೆ ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿವೆ.

The Statement issued by Sri Devaraj Urs has appeared in the "Deccan Herald." He fixed the responsibility on the Chairman. Today he is shirking that responsibility. I would like to know why he has gone back from his stand after he became the Chief Minister of the State. If this is the way, it does not do good to the country. I want a categorical reply from the Government.

ಶ್ರೀ ಕೆ. ಪ್ರಭಾಕರ್.—ಥರೋ ಎನ್‌ಕ್ವೈರಿ ಮಾಡಿದರೆ ಅಪರಾಧಿ ಸ್ಥಾನದಲ್ಲಿ ಎಲ್ಲರೂ ನಿಲ್ಲಬೇಕಾಗುತ್ತದೆ ಎಂದು ತಾವು ಹೇಳಿದಿರಿ; ಎಲ್ಲರೂ ಎಂದರೆ ಯಾರು ಯಾರು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಬೆಂಗಳೂರು ವಾಟರ್ ಸಪ್ಲೈ ಬೋರ್ಡಿನ ಅಧ್ಯಕ್ಷರು, ಮತ್ತೆ ಈಗ ಹಾಲಿ ಅಧಿಕಾರದಲ್ಲಿರುವ ಚೀಫ್ ಇಂಜಿನಿಯರ್ ಅವರು ಮತ್ತು ಇನ್ನೂ ಅದಕ್ಕೆ ಸಂಬಂಧ ಪಟ್ಟವರೆಲ್ಲರೂ ಈ ಒಂದು ವ್ಯವಹಾರಕ್ಕೆ ಸಂಬಂಧಪಟ್ಟಿದ್ದಾರೆ. ಈಗಿನ ಒಂದು ಧಾಟಿಯಲ್ಲೇ ಮಾನ್ಯ ಮುಖ್ಯಮಂತ್ರಿಗಳು ಎಲ್ಲವೂ ಸರಿಯಾಗಿದೆ ಎಂದು ಸಮರ್ಥನೆ ಮಾಡುವುದಕ್ಕೆ ಹೋದರೆ ಅವರು ಸಹ ಅಕ್ಯೂಸ್ಡ್ ಆಗಬೇಕಾಗುತ್ತದೆ. ವಿಚಾರಣೆ ಮಾಡುವ ಅವಶ್ಯಕತೆ ಇಲ್ಲ ಎನ್ನತಕ್ಕಂಥ ವಾದವನ್ನು ಮುಖ್ಯಮಂತ್ರಿಗಳು ಪ್ರತಿಪಾದನೆ ಮಾಡುವುದಾದರೆ, I must say that he has also connived at it. ಆದ್ದರಿಂದ ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ನಿರ್ದಿಷ್ಟವಾದ ಒಂದು ಹೇಳಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ. ಈಗ ವಾಟರ್ ಸಪ್ಲೈ ಬೋರ್ಡ್ ಬಗ್ಗೆ ಏನು ಅಪಾದನೆಗಳಿವೆ, ಅವು ನಿವೃತ್ತಿಯಾಗಬೇಕಾದರೆ ವಿಚಾರಣೆಯಾಗಲೇಬೇಕು ಎಂದು ಒತ್ತಾಯಪಡಿಸುತ್ತೇನೆ.

ಕೊನೆಯದಾಗಿ ನಾನು ಹೇಳುವುದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ, ಬೆಂಗಳೂರಿನಂತಹ ನಗರ ಪ್ರದೇಶಗಳಲ್ಲಿ, ಸಣ್ಣಪುಟ್ಟ ಊರುಗಳಲ್ಲಿ ಮನೆಗಳನ್ನು ಕಟ್ಟಿಸಿಕೊಡಲು ಹೆಚ್ಚು ಹಣವನ್ನು ಒದಗಿಸುವುದರ ಮೂಲಕ ಅವುಗಳ ಅಭಿವೃದ್ಧಿಗೆ ಸಹಕಾರ ಕೊಡಬೇಕೆಂದು ಮಾನ್ಯ ಮಂತ್ರಿಗಳಿಗೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್ ಗುಂಡೂರಾವ್ (ಸೋಮವಾರಪೇಟೆ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಮಾನ್ಯ ಪೌರಾಡಳಿತ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಯನ್ನು ಸ್ವಾಗತಿಸುತ್ತಾ ನನ್ನ ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಮಾನ್ಯ ಪೌರಾಡಳಿತ ಸಚಿವರು ಅಧಿಕಾರ ವಹಿಸಿಕೊಂಡಮೇಲೆ ನಮ್ಮ ಪುರಸಭೆಗಳಲ್ಲಿ ತೀವ್ರತರವಾದಂಥ ಬದಲಾವಣೆ ಮಾಡುವುದಕ್ಕೆ ಗಮನ ಕೊಡುತ್ತಿರುವ ವಿಷಯ ಸ್ವಾಗತರ್ಹವಾದುದು. ಜೊತೆಗೆ ನನ್ನ ಒಂದು ಸ್ಪಷ್ಟ ಅಭಿಪ್ರಾಯವೇನೆಂದರೆ, 1964 ನೇ ಇಸವಿಯಲ್ಲಿ ಹೊಸ ಮೈಸೂರಿಗೆ ಸಂಬಂಧಪಟ್ಟಂತೆ ಪುರಸಭಾ ಶಾಸನವನ್ನು ಏನು ಮಾಡಲಾಗಿದೆ, ಅದು ಪ್ರಜಾಪ್ರಭತ್ವಕ್ಕೆ ತದ್ವಿರುದ್ಧವಾದಂಥ ಶಾಸನವಾಗಿದೆ ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾವು ನಿಜವಾಗಿ ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಜಾರಿಗೆ ತರಬೇಕಾದರೆ ಪಂಚಾಯಿತಿಗಳಿಗೆ, ತಾಲ್ಲೂಕ್ ಬೋರ್ಡ್‌ಗಳಿಗೆ, ಪುರಸಭೆಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕಾಗಿದೆ. ಆ ರೀತಿ ಅಧಿಕಾರ ಕೊಟ್ಟಿದ್ದೇ ಆದರೆ ಅವುಗಳು ದಕ್ಷತೆಯಿಂದ ಕೆಲಸ ಮಾಡಲು ಅನುಕೂಲವಾಗುತ್ತದೆ. ಆದರೆ ಈಗಿನ ಪುರಸಭಾ ಕಾನೂನಿನಲ್ಲಿ ಅನೇಕ ತರಹದ ನ್ಯೂನತೆಗಳಿವೆ. ಪುರಸಭಾಧ್ಯಕ್ಷರು ಹೆಸರಿಗೆ ಅಧ್ಯಕ್ಷರಾಗಿರಬೇಕಾಗಿದೆಯೇ ಹೊರತು, ಯಾವುದೇ ಅಧಿಕಾರ ಚಲಾಯಿಸುವುದಕ್ಕೆ ಈಗಿನ ಶಾಸನದಲ್ಲಿ ಅವಕಾಶವಿಲ್ಲ. ಈ ಶಾಸನವನ್ನು ಯಾವ ಸರ್ಕಾರವೇ ತಂದಿರಲಿ, ಶ್ರೀಮಾನ್ ನಿಜಲಿಂಗಪ್ಪನವರ ಸರ್ಕಾರವೇ ಜಾರಿಗೆ ತಂದಿರಲಿ, ಅಥವಾ ವೀರೇಂದ್ರಪಾಟೀಲರ ಸರ್ಕಾರವೇ ಜಾರಿಗೆ ತಂದಿರಲಿ, ಒಟ್ಟಿನಲ್ಲಿ ಈ ಶಾಸನದಿಂದ ಪ್ರಜಾಪ್ರಭುತ್ವದ ಕೊಲೆಯಾಗಿದೆ ಎಂದು ಹೇಳುತ್ತೇನೆ. ಶ್ರೀಮಾನ್ ದೇವೇಗೌಡರು ಈ ಸರ್ಕಾರವನ್ನು ಟೀಕೆ ಮಾಡುತ್ತಿದ್ದಾರೆ. ಈ ಒಂದು ಶಾಸನವನ್ನು ಹಿಂದಿನ ಸರ್ಕಾರದವರು ಯಾವ ರೀತಿ ದುರುಪಯೋಗ ಮಾಡಿದೆ ಎಂಬುದಕ್ಕೆ ಒಂದು ಉದಾಹರಣೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ನಾನು ಸಹ ಪುರಸಭಾಧ್ಯಕ್ಷ. ನಾನು ಕಾಂಗ್ರೆಸ್ (ಆರ್) ಪಕ್ಷದ ಕನ್‌ವೀನರ್ ಆದ ಕೂಡಲೇ, ಅದನ್ನು ಶ್ರೀಮಾನ್ ವೀರೇಂದ್ರಪಾಟೀಲರಿಗೆ ಸಹಿಸುವುದಕ್ಕೆ ಆಗಲಿಲ್ಲ. ಕೂಡಲೆ ಟೆಲಿಗ್ರಾಫಿಕಲ್ ಆರ್ಡರ್ ಕಳುಹಿಸಿ ಕೊಟ್ಟರು. That municipality is superseded and in my place the Tahsildar has been appointed as the Administrator. ಅದರ ಜೊತೆಗೆ ಇನ್ನೊಂದು ಆರ್ಡರ್ ಏನೆಂದರೆ ಅಡ್ಮಿನ್‌ಸ್ಟ್ರೇಟರ್‌ಗೆ "Whether the President is there or not you assume charge yourself." ಎಂದು ಆರ್ಡರ್ ಕೊಟ್ಟಿದ್ದಾರೆ. ಪ್ರಜಾಪ್ರಭುತ್ವವಾದಿಗಳಾಗಿ ಅವರು ಯಾವ ರೀತಿ ನಡೆದುಕೊಂಡರು ಎಂಬುದಕ್ಕೆ ಇದು ಒಂದು ಉದಾಹರಣೆಯಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮೊನ್ನೆ ನಡೆದ ಶ್ರೀರಂಗಪಟ್ಟಣದ ಉದಾಹರಣೆ ತಮಗೆ ಗೊತ್ತಿದೆ ತಾನೆ ? ಒಟ್ಟಿನಲ್ಲಿ ಶ್ರೀಮಾನ್ ವೀರೇಂದ್ರಪಾಟೀಲರೇ ಆರ್ಡರ್ ಮಾಡಲಿ, ಶ್ರೀಮಾನ್ ದೇವರಾಜ ಅರಸ್ ಅವರೇ ಆರ್ಡರ್ ಮಾಡಲಿ, ಅದೇ ಸುಪ್ರಿಂ ಆರ್ಡರ್ ಆಗುವುದಿಲ್ಲ, ಆ ಆರ್ಡರ್‌ನಲ್ಲಿ ದೋಷವಿದ್ದರೆ ಚಾಲೆಂಜ್ ಮಾಡಲು ಕೋರ್ಟ್ ಇದ್ದೇ ಇದೆ.

ಶ್ರೀ ಆರ್. ಗುಂಡೂರಾವ್.—1964 ನೇ ಇಸವಿಯಲ್ಲಿ ಈ ಶಾಸನ ಸಭೆಯ ಮುಂದೆ ಬಂದಾಗ ತಾವು ಏತಕ್ಕೆ ಅಪೋಸ್ ಮಾಡಲಿಲ್ಲ ?

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. ನಿಮ್ಮ ಪಕ್ಷದ ಸದಸ್ಯರು ಅದಕ್ಕೆ ಏತಕ್ಕೆ ಒಪ್ಪಿಗೆ ಕೊಟ್ಟರು ಎಂಬುದನ್ನು ಮೊದಲು ಕೇಳಿ.

ಶ್ರೀ ಆರ್. ಗುಂಡುರಾವ್.—ನಾವು ಹೊಸದಾಗಿ ಈ ಸಭೆಗೆ ಆರಿಸಿ ಬಂದಿದ್ದೇವೆ. ನಮಗೆ ಆ ಕಡೆ ಕುಳಿತಿರುವವರ ಸಹವಾಸವೂ ಸಾಕಾಗಿದೆ, ಈ ಕಡೆ ಕುಳಿತಿರುವವರ ಸಹವಾಸವೂ ಸಾಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಒಟ್ಟಿನಲ್ಲಿ ನೀವಿಬ್ಬರೂ ಸೇರಿ ಈ ರಾಜ್ಯವನ್ನು ಹಾಳು ಮಾಡಿದಿರಿ.

ಶ್ರೀ ಆರ್. ಗುಂಡೂರಾವ್.—ಸರ್ಕಾರದವರು ಪ್ರಜಾಪ್ರಭುತ್ವಕ್ಕೆ ಬೆಲೆ ಕೊಡುವುದಾದರೆ, 1964 ನೇ ಇಸವಿಯ ಪುರಸಭಾ ಕಾನೂನನ್ನು ಕೂಡಲೇ ರದ್ದು ಮಾಡಿ ಹೊಸ ಕಾನೂನನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಈಗಿನ ಕಾನೂನು ಪ್ರಜಾಪ್ರಭುತ್ವದ ತತ್ವಗಳಿಗನುಗುಣವಾಗಿಲ್ಲ.

(ಶ್ರೀ ಆರ್. ಗುಂಡೂರಾವ್)

ಹೊಸ ಮೈಸೂರು ರಚನೆಯಾಗುವುದಕ್ಕೆ ಬೇರೆ ಬೇರೆ ಕಾನೂನುಗಳು ಇದ್ದವು ಅವುಗಳೆಲ್ಲವನ್ನೂ ಕ್ರೋಢೀಕರಿಸಿ ಒಂದು ಶಾಸನವನ್ನು 1964 ರಲ್ಲಿ ಮಾಡಿದರು. ಈ ಶಾಸನದಿಂದ ಯಾವುದೇ ತರಹದಿಂದ ಪುರಸಭೆಯು ಅಭಿವೃದ್ಧಿಯಾಗುವುದಕ್ಕೆ ಅವಕಾಶವಿಲ್ಲ. ಏಕೆಂದರೆ ಪುರಸಭೆಯುವರು ಸರ್ವಾನುಮತದಿಂದ ಯಾವುದೇ ನಿರ್ಣಯ ಪಾಸ್ ಮಾಡಿ ಕಳಿಸಿಕೊಟ್ಟರೂ ಸಹ, ಪ್ರತಿಯೊಂದು ವಿಷಯಗಳಿಗೂ ಸಹ ಜಿಲ್ಲಾಧಿಕಾರಿಯವರು ನೇರವಾಗಿ ಮಧ್ಯ ಪ್ರವೇಶ ಮಾಡುವುದಕ್ಕೆ ಈಗಿನ ಆಕ್ಟಿನಲ್ಲಿ ಅವಕಾಶ ಕೊಡಲಾಗಿದೆ. ಇದರಿಂದ ಅವರು ಬೇಕಾದರೆ ನಿರ್ಣಯಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಅಥವಾ ಸ್ಟೇ ಮಾಡುವುದಕ್ಕೆ. ಅವಕಾಶವಿದೆ. ಸರ್ವಾನುಮತದಿಂದ ಪಾಸ್ ಮಾಡಿ ಕಳಿಸಿಕೊಟ್ಟಂತಹ ನಿರ್ಣಯವನ್ನು ಜಿಲ್ಲಾಧಿಕಾರಿಯವರು ತಡೆಹಿಡಿಯುವುದಕ್ಕೆ ಅವಕಾಶ ಇರುವುದು ಸರಿಯೇ ಎಂಬುದನ್ನು ಮಾನ್ಯ ಮಂತ್ರಿಗಳು ಪರಿಶೀಲಿಸಬೇಕು. ಒಟ್ಟಿನಲ್ಲಿ ಈಗಿನ ಆಕ್ಟನ್ನು ರದ್ದು ಮಾಡಿ ಹೊಸ ಆಕ್ಟನ್ನು ತೆಗೆದುಕೊಂಡು ಬರಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಜಾಗ್ರತೆ ತೆಗೆದುಕೊಂಡು ಬನ್ನಿ.

ಶ್ರೀ ಆರ್. ಗುಂಡೂರಾವ್.—ತೆಗೆದುಕೊಂಡು ಬರದೆ ವಿಧಿಯಿಲ್ಲ. ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಪುರಸಭೆಯ ಅಧ್ಯಕ್ಷನಾಗಿ ಕೆಲಸ ಮಾಡಿ ನೋಡಿರುವುದರಿಂದ ಈ ವಿಷಯವನ್ನು ಹೇಳುತ್ತಿದ್ದೇನೆ.

ಇನ್ನು ಬೆಂಗಳೂರು ನಗರದ ವಿಷಯ ಹೇಳಬೇಕೆಂದರೆ, ಬೆಂಗಳೂರು ನಗರದ ವಿಷಯ ಕೇವಲ ಬೆಂಗಳೂರು ನಗರದ ವಾಸಿಗಳಿಗೆ ಸೇರಿದೆ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಬೆಂಗಳೂರು ನಗರ ಕರ್ನಾಟಕದ ರಾಜಧಾನಿ. ಬೆಂಗಳೂರು ನಗರ ಎಷ್ಟು ನಿರ್ಮಲವಾಗಿರುತ್ತದೋ, ಬೆಂಗಳೂರು ನಗರ ಎಷ್ಟು ಶೋಭಾಯಮಾನವಾಗಿರುತ್ತದೋ, ಅಷ್ಟೇ ಒಂದು ಒಳ್ಳೆಯ ಹೆಸರು ನಮ್ಮ ಕರ್ನಾಟಕ ರಾಜ್ಯಕ್ಕೆ ಬರುತ್ತದೆ. ಆದರೆ ಇಂದಿನ ಬೆಂಗಳೂರು ನಗರ ಕಾರ್ಪೊರೇಷನ್ನಿನ ಆಡಳಿತವನ್ನು ನೋಡಿದರೆ, ಅದರ ಬಗ್ಗೆ ಅನೇಕ ತರಹದ ಟೀಕೆಗಳಾಗಿವೆ. ಸಾರ್ವಜನಿಕ ಸಭೆಗಳಲ್ಲಿ ಟೀಕೆಗಳಾಗಿವೆ. ಇಂದು ಅಲ್ಲಿ ಯಾವ ಪಕ್ಷದವರು ಆಡಳಿತ ನಡೆಸುತ್ತಿದ್ದಾರೆಂಬುದು ಮುಖ್ಯವಾದ ಪ್ರಶ್ನೆಯಲ್ಲ. ದೇಶದ ಜನರ ಹಿತ ಮುಖ್ಯವಾದುದು. ಕರ್ನಾಟಕದ ರಾಜಧಾನಿ ಯಾವ ರೀತಿ ಅಭಿವೃದ್ಧಿಯಾಗುತ್ತದೆ ಎಂಬುದು ಮುಖ್ಯವಾದ ಪ್ರಶ್ನೆ. ಕೆಲವು ವರ್ಷಗಳವರೆಗೆ ಈ ಕಾರ್ಪೊರೇಷನನ್ನು ಸೂಪರ್‌ಸೀಡ್ ಮಾಡಿದ ಮೇಲೆ ಚುನಾವಣೆ ನಡೆಯಿತು. ಚುನಾವಣೆ ನಡೆದ ಮೇಲೆ ಚುನಾಯಿತ ಪ್ರತಿನಿಧಿಗಳು ಬೆಂಗಳೂರು ನಗರದ ಅಭಿವೃದ್ಧಿಗೆ ಸಾಕಷ್ಟು ಗಮನ ಕೊಡುತ್ತಾರೆ, ಬೆಂಗಳೂರು ನಗರವನ್ನು ಇಡೀ ಇಂಡಿಯಾದೇಶದಲ್ಲಿಯೇ ಸುಂದರವಾದ ನಗರವನ್ನಾಗಿ ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಈಗ ಅಲ್ಲಿ ನಡೆಯುತ್ತಿರುವುದೇ ಬೇರೆ. ಜಲಮಂಡಲಿಯಲ್ಲಿ ಅನ್ಯಾಯವಾಗಿದೆ ಎಂಬ ವಿಷಯವನ್ನು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಅಲ್ಲಿ ಏನು ನ್ಯೂನತೆಗಳಿವೆ, ಅವುಗಳ ಬಗ್ಗೆ ತನಿಖೆ ಮಾಡಿಸಬೇಕು ಎಂದು ಕೇಳುವವರಲ್ಲಿ ನಾನೂ ಒಬ್ಬ. ಯಾರು ಯಾರು ಈ ನ್ಯೂನತೆಗಳಬಗ್ಗೆ ಸಂಬಂಧ ಹೊಂದಿದ್ದಾರೆ ಎಂಬ ಬಗ್ಗೆ ಸಮಗ್ರವಾದ ವಿಚಾರಣೆ ನಡೆಸಬೇಕೆಂದು ನಾನು ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ. ಇಂದು ಕಾರ್ಪೊರೇಷನ್ ಆಡಳಿತ ತೀರ ಹದಗೆಟ್ಟಿದ್ದು, ಇಂದಿನ ಅಲ್ಲಿಯ ಆಡಳಿತ ಯಾರಿಗೂ ಹೆಸರು ತರುವಂತೆ ನಡೆಯುತ್ತಿಲ್ಲ. ಸಾರ್ವಜನಿಕರಿಗೆ ಸಂಬಂಧಪಟ್ಟ ಕೆಲಸದಲ್ಲಾಗಲೀ, ಕಾರ್ಪೊರೇಷನ್ ಆಡಳಿತಕ್ಕೆ ಸಂಬಂಧಪಟ್ಟ ಕೆಲಸದಲ್ಲಾಗಲೀ, ಯಾವುದೇ ತರಹದ ಒಮ್ಮತವಿಲ್ಲ. ಮೇಯರ್ ಅವರ ಮೇಲೆ ಕಮೀಷನರ್ ಅವರು ಚಾರ್ಜ್ ಮಾಡುವುದು, ಕಮೀಷನರ್ ಅವರಮೇಲೆ ಮೇಯರ್ ಅವರು ಚಾರ್ಜ್ ಮಾಡುವುದು ನಡೆಯುತ್ತಿದೆ. ಮತ್ತು ಸಭೆ ನಡೆಯುತ್ತಿದ್ದಾಗ ಪೋಲೀಸಿನವರನ್ನು ಕರೆಸಿ ಸದಸ್ಯರನ್ನು ಹೊರಗೆ ಕಳಿಸುವುದು, ಈ ರೀತಿಯಾಗಿ ಅಲ್ಲ ಸಭೆಯ ಕೆಲಸಕಾರ್ಯಗಳೇ ಸರಿಯಾಗಿ ನಡೆಯುತ್ತಿಲ್ಲ. ಸರ್ಕಾರಕ್ಕೆ ಮತ್ತು ಈ ದೇಶಕ್ಕೆ ಕಳಂಕ ತರುವ ರೀತಿಯಲ್ಲಿ ಕೆಲಸಗಳಾಗುತ್ತಿವೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಕಾರ್ಪೊರೇಷನನ್ನು ಆದಷ್ಟು ಬೇಗ ಸೂಪರ್‌ಸೀಡ್ ಮಾಡಿ ಒಂದು ಒಳ್ಳೆಯ ಕಾರ್ಪೊರೇಷನ್ ಕಾನೂನನ್ನು ಜಾರಿಗೆ ತರಬೇಕೆಂದು.

ಮೇಯರ್ ಮತ್ತು ಕಮೀಷನರಿಗೆ ತಿಕ್ಕಾಟ ಬರುವುದಕ್ಕೆ ಕಾನೂನಿನ ಅಡಚಣೆ ಕಾರಣ ನಮಗೆ ಅಲ್ಲಿ ಪಕ್ಷ ಮುಖ್ಯವಲ್ಲ. ಆಡಳಿತ ಮುಖ್ಯ. ಆದ್ದರಿಂದ ನಮ್ಮ ಮಾನ್ಯ ಪೌರಾಡಳಿತ ಸಚಿವರು ಆದಷ್ಟು ಬೇಗ ಕಾರ್ಪೋರೇಷನ್ ಅನ್ನು ಸೂಪರ್‌ಸೀಡ್ ಮಾಡಿ ಮೇಯರ್ ಅವರಿಗೂ

ಕಮಿಷನರಿಗೂ ಮತ್ತು ಕೌನ್ಸಿಲರ್‌ಗಳಿಗೂ ಒಬ್ಬರಿಗೊಬ್ಬರಿಗೆ ಸದ್ಭಾವನೆ ಬರುವಂತೆ ಮಾಡಿ ಕಾರ್ಪೊರೇಷನ್ನಿನಲ್ಲಿ ನಡೆಯುತಕ್ಕ ಗಲಾಟೆಯನ್ನು ತಪ್ಪಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಅಧಿಕಾರಿಗಳ ವರ್ಗಾವರ್ಗಿಗಳಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಅನೇಕ ಮುನಿಸಿ ಪಾಲಟಿಗಳಲ್ಲಿ ಕೆಲಸ ಮಾಡತಕ್ಕ 2, 3 ಮತ್ತು ನಾಲ್ಕನೇ ದರ್ಜೆಯ ಅಧಿಕಾರಿಗಳನ್ನು ಬೇರೆ ಮುನಿಸಿಪಾಲಟಿಗಳಿಗೆ ವರ್ಗಾ ಮಾಡತಕ್ಕ ಅವಕಾಶ ಈಗಿರತಕ್ಕ ಕಾನೂನಿನಲ್ಲಿ ಕಂಡುಬರುವುದಿಲ್ಲ. ಈ ನೌಕರರು ಮತ್ತು ಅಧಿಕಾರಿಗಳ ವಿಷಯದಲ್ಲಿ ಏನಾದರೂ ಅಪಾದನೆ ಇದ್ದರೆ ಅವರನ್ನು ಡಿಸ್‌ಮಿಸ್ ಮಾಡಬೇಕು, ಇಲ್ಲದಿದ್ದರೆ ನಿವೃತ್ತಿ ಮಾಡಬೇಕು. ಅದು ಹೊರತು ಬೇರೆ ಯಾವ ತರಹ ಬದಲಾವಣೆಯನ್ನು ಮಾಡುವುದಕ್ಕೆ ಆಗುತ್ತಾ ಇಲ್ಲ. ಇದರಿಂದ ಮುನಿಸಿಪಾಲಟಿಗಳಿಗೆ ತೊಂದರೆ ಯಾಗುತ್ತಿದೆ. ಈ ದೃಷ್ಟಿಯಿಂದ ಒಂದು, ಎರಡು, ಮೂರು ಮತ್ತು ನಾಲ್ಕನೇ ದರ್ಜೆಯ ನೌಕರರನ್ನು ಒಂದು ಮುನಿಸಿಪಾಲಿಟಿಯಿಂದ ಇನ್ನೊಂದು ಮುನಿಸಿಪಾಲಟಿಗೆ ವರ್ಗಾ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕೆಂದು ನಾನು ಹೇಳುತ್ತೇನೆ. ಸೀವರೇಜ್‌ಯೋಜನೆಯನ್ನು ಸರ್ಕಾರದವರು ಜಾರಿಗೆ ತಂದದ್ದನ್ನು ನಾನು ಬಹಳವಾಗಿ ಮೆಚ್ಚುತ್ತೇನೆ. ಹೀಗೇನೆ ಮನೆಯಿಲ್ಲದೇ ಇರತಕ್ಕ ಬಡ ಜನಗಳಿಗೆ ಮನೆಯನ್ನು ಕಟ್ಟಿಕೊಡತಕ್ಕ ಯೋಜನೆಯನ್ನು ಆದಷ್ಟು ಜಾಗ್ರತೆ ತಂದರೆ ಬಹಳ ಸಂತೋಷ. ಸರ್ಕಾರದವರು ಬಡಜನಗಳಿಗೆ, ಹರಿಜನ ಗಿರಿಜನರಿಗೆ, ಹಿಂದುಳಿದ ಜನಾಂಗದವರಿಗೆ ಉದ್ಯೋಗ, ವಸತಿ ಇತ್ಯಾದಿ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಹಮೀದ್‌ಷಾ (ಶಿವಾಜಿನಗರ).—ಮಾನ್ಯ ಅಧ್ಯಕ್ಷರೇ, ಇವೊತ್ತು ಮಾನ್ಯ ಪೌರಾಡಳಿತ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ವಿಷಯ ಗಳನ್ನು ನಾನು ಹೇಳಬಯಸುತ್ತೇನೆ. ಇವೊತ್ತು ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್ನಿನಲ್ಲಿ ಅಧಿಕಾರಿಗಳು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಕಾರ್ಪೊರೇಷನ್ನಿನಲ್ಲಿ ಆಡಳಿತ ನಡೆಸುತ್ತಾ ಇರತಕ್ಕ ಕಮಿಷನರಾಗಲೀ, ಇಂಜಿನಿಯರ ಗಾಗಲೀ, ಹೆಲ್ತ್ ಆಫೀಸರಿಗಾಗಲೀ ಯಾವುದಾದರೂ ಒಂದು ಅರ್ಜಿಯನ್ನು ಬರೆದರೆ ಅವಕ್ಕೆ ಜವಾಬೇ ಬರುವುದಿಲ್ಲ. ಮಂತ್ರಿಗಳಿಗೆ, ಮುಖ್ಯ ಮಂತ್ರಿಗಳಿಗೆ, ಮತ್ತು ಹೈಕೋರ್ಟ್ ಜಡ್ಜಿಗಳಿಗೆ ಪತ್ರವನ್ನು ಬರೆದರೆ ತಕ್ಷಣ ಜವಾಬು ಬರುತ್ತದೆ. ಆದರೆ ಕಾರ್ಪೊರೇಷನ್ ಅಧಿಕಾರಿಗಳಿಗೆ ಪತ್ರವನ್ನು ಬರೆದರೆ ಜವಾಬು ಬರುವುದಿಲ್ಲ. ಒಂದು ಅರ್ಜಿಗೆ ಎರಡು ವರ್ಷ, ಮೂರು ವರ್ಷ ಆದರೂ ಜವಾಬು ಕೊಡಬೇಕು ಎನ್ನುವ ಭಾವನೆ ಬಾರದೆ ಹೋದರೆ ಹೇಗೆ? ನಮ್ಮ ಬೆಂಗಳೂರು ನಗರದಲ್ಲಿ ಅನೇಕ ಜನ ಸಮಾಜವಾದ ಮಾತನಾಡುತ್ತಾರೆ. ಆದರೆ ಅದನ್ನು ಕಾರ್ಯತಃ ಅನುಸರಿಸುತ್ತಾ ಇಲ್ಲ. ನನ್ನ ಅಭಿಪ್ರಾಯದಲ್ಲಿ ಸಮಾಜವಾದ ಎಂದರೆ ಬಡಜನಗಳನ್ನು ಉದ್ಧಾರ ಮಾಡುವುದು ಎಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲರೂ ಹರಿಜನ ಗಿರಿಜನರ ಉದ್ಧಾರ ಮಾಡಬೇಕೆಂದು ಬಹಳವಾಗಿ ಹೇಳುತ್ತಿದ್ದಾರೆ. ಆದರೆ ಕಾರ್ಯತಃ ಅವರ ಉದ್ಧಾರದ ಬಗ್ಗೆ ಕೆಲಸ ಮಾಡುವುದಿಲ್ಲ. ನಾನು ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅದೇನೆಂದರೆ ಕಂಟೋನ್ಮೆಂಟನಲ್ಲಿ ಒಂದು ಕಡೆ ಒಂದು ಹರಿಜನ ಸ್ಕೂಲು ಇದೆ. ಅದು ಕಾರ್ಪೊರೇಷನ್ನಿಗೆ ಸೇರಿದ ಜಾಗ. ಅದರ ಪಕ್ಕದಲ್ಲಿ ನಾಯಿ ದೊಡ್ಡಿ ಇದೆ. ಆ ದೊಡ್ಡಿಯಲ್ಲಿ ವಾರಕ್ಕೆ ಒಂದು ಸಾರಿ ನಾಯಿಗಳನ್ನು ಎಲೆಕ್ಟ್ರಿಸಿಟಿಗೆ ಸಿಕ್ಕಿಸಿ ಸಾಯಿಸುತ್ತಾರೆ. ಆದ್ದರಿಂದ ಅಲ್ಲಿ ಇರತಕ್ಕಂಥಾ ದುರ್ವಾಸನೆಯನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಅಂಥಾ ಜಾಗದಲ್ಲಿ ಹರಿಜನರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದಕಾರಣ ಆ ಜಾಗಕ್ಕೆ ಒಂದು ಸಾರಿ ಮಾನ್ಯ ಪೌರಾಡಳಿತ ಶಾಖೆಯ ಮಂತ್ರಿಗಳು ಬಂದು ನೋಡಬೇಕು. ಅದನ್ನು ನೋಡಿ ಅವಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ನಮ್ಮ ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಸುಮಾರು 63 ಡಿವಿಜನ್‌ಗಳು ಇವೆ. ಈ ಡಿವಿಜನ್‌ಗಳಲ್ಲಿ ಸರಿಸಮಾನತೆ ಇಲ್ಲ. ಒಂದು ಡಿವಿಜನ್‌ನಲ್ಲಿ 40 ಸಾವಿರ ಮತದಾರರಿ ದ್ದಾರೆ. ಇನ್ನೊಂದು ಡಿವಿಜನ್‌ನಲ್ಲಿ 20 ಸಾವಿರ ಮತದಾರರು ಇದ್ದಾರೆ. ಈ ರೀತಿ ಡಿವಿಜನ್ ಗಳಲ್ಲಿ ಸರಿಸಮಾನತೆ ಇಲ್ಲ. ಇದನ್ನು ಸರಿಪಡಿಸಬೇಕು. ಈ ವೋಟರ್ಸ್ ಲಿಸ್ಟನ್ನು ಕಾರ್ಪೊರೇಷನ್ ಅಧಿಕಾರಿಗಳು ಏನು ತಯಾರು ಮಾಡಿದ್ದಾರೆ ಅದನ್ನು ನೋಡಿದರೆ ಅದೆಷ್ಟು ಸಂತೋಷಪಡಬೇಕೋ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಮತದಾರರ ಹೆಸರನ್ನು ಹೇಗೆ ಬರೆಯುತ್ತಾರೆ ಎಂದರೆ ಕರಿಯಪ್ಪ ಎಂದು ಇದ್ದರೆ ಕುರಿಯಪ್ಪ ಎಂದು ಬರೆದಿರುತ್ತಾರೆ. ಅದರಲ್ಲೂ ನಮ್ಮ ಮುಸ್ಲಿಮ್ ಜನಾಂಗದವರ ಹೆಸರನ್ನು ತಪ್ಪುತಪ್ಪಾಗಿ ಬರೆದಿರುತ್ತಾರೆ. ಇದನ್ನೆಲ್ಲಾ ಸರಿಯಾಗಿ ಬರೆಯುವಂತೆ ಕಾರ್ಪೊರೇಷನ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕು.

ವಾಟರ್‌ಸಪ್ಲೈ ಡಿಪಾರ್ಟ್‌ಮೆಂಟಿನ ಬಗ್ಗೆ ಹೇಳುವುದಾದರೆ ನಾನು ಒಂದು
ಯನ್ನು ಹೇಳುತ್ತೇನೆ. ಒಂದು ಊರಿನಲ್ಲಿ ತಾಯಿ ಮಗಳು ಇಬ್ಬರು ಇದ್ದರಂತೆ, ಮಗಳ ಹೆಸರು ಉದಾಹರಣೆ
ಗಂಗಾವತಿ, ಒಂದು ದಿವಸ ತಾಯಿ ಮಗಳನ್ನು ಕರೆದು ತುಂಬಾ ಬಾಯಾರಿಕೆಯಾಗಿದೆ ಕುಡಿಯು
ವುದಕ್ಕೆ ನೀರು ತೆಗೆದುಕೊಂಡುಬಾ ಎಂದು ಹೇಳಿದಳಂತೆ, ಆಕೆ ಕುಡಿಯುವುದಕ್ಕೆ ನೀರು ತರುವ
ವೇಳೆಗೆ ತಾಯಿ ಸತ್ತುಹೋಗಿದ್ದಳಂತೆ. ಈ ರೀತಿಯಾಗಿ ನಮ್ಮ ವಾಟರ್‌ಬೋರ್ಡ್ ಕೆಲಸ ಮಾಡು
ತ್ತಿದೆ. ನಿಜವಾಗಿಯೂ ವಾಟರ್ ಅಂಡ್ ಸೀವರೇಜ್ ಬೋರ್ಡಿನ ಆಡಳಿತವನ್ನು ನೋಡಿದರೆ ನಮಗೆ
ನಾಚಿಕೆಯಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಸರಿಪಡಿಸಬೇಕು. ಮತ್ತು ಬೆಂಗಳೂರಿನ
ನಾಗರೀಕರಿಗೆ ಕುಡಿಯುವ ನೀರಿನ ಸರಬರಾಜನ್ನು ಉತ್ತಮ ಪಡಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿರತಕ್ಕ ರಸ್ತೆಗಳ ಬಗ್ಗೆ ಹೇಳುವುದಾದರೆ ಕಾರ್ಪೊರೇಷನ್
ಏರಿಯಾದಲ್ಲಿರತಕ್ಕ ರಸ್ತೆಗಳು ಪ್ರಯಾಣ ಮಾಡುವುದಕ್ಕೆ ಸರಿಯಾಗಿಲ್ಲ. ಇವು ಫ್ಯಾಮಿಲಿ ಪ್ಲಾನಿಂಗ್
ರೋಡುಗಳಾಗಿವೆ. ಈ ರೋಡುಗಳಲ್ಲಿ 3-4 ತಿಂಗಳು ಗರ್ಭಿಣಿಯಾಗಿರತಕ್ಕ ಹೆಂಗಸರು
ಆಟೋರಿಕ್ಷಾದಲ್ಲಿ ಕುಳಿತು ಪ್ರಯಾಣ ಮಾಡಿದರೆ ಅವರಿಗೆ ಖಂಡಿತಾ ಅಬಾರಷನ್ ಆಗುತ್ತದೆ. ಆದ್ದ
ರಿಂದ ಈ ರೋಡುಗಳಿಗೆ ಫ್ಯಾಮಿಲಿ ಪ್ಲಾನಿಂಗ್ ರೋಡುಗಳು ಎಂದು ಹೇಳಬಹುದು. ಈ ರೋಡು
ಗಳನ್ನು ಹೀಗೆಯೇ ಇಟ್ಟುಕೊಂಡರೆ ಫ್ಯಾಮಿಲಿ ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಖರ್ಚು
ಮಾಡುವುದು ಬೇಡ. ಆದ್ದರಿಂದ ಈ ರಸ್ತೆಗಳ ಬಗ್ಗೆ ಮಾನ್ಯ ಮಂತ್ರಿಗಳು ಗಮನಿಸಬೇಕು.

ಕಾರ್ಪೊರೇಷನ್‌ನವರು ನಡೆಸುತ್ತಿರುವ ಸ್ಕೂಲುಗಳಲ್ಲಿ ಸರಿಯಾಗಿ ಉಪಾಧ್ಯಾಯರುಗಳನ್ನು
ನೇಮಕ ಮಾಡುತ್ತಿಲ್ಲ. ಆದ್ದರಿಂದ ಯಾವ ಯಾವ ಸ್ಕೂಲಿಗೆ ಯಾವ ಯಾವ ಭಾಷೆಯ ಉಪಾಧ್ಯಾ
ಯರು ಬೇಕು ಎಂಬುದನ್ನು ತಿಳಿದುಕೊಂಡು ಆ ಸ್ಕೂಲುಗಳಿಗೆ ವಿಳಂಬ ಇಲ್ಲದಂತೆ ಉಪಾಧ್ಯಾಯ
ರನ್ನು ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಬೆಂಗಳೂರು ನಗರದಲ್ಲಿ ಈಗ ಮೊಬೈಲ್ ಕೋರ್ಟು ಏನಿದೆ ಅವರು ಸಾಕಷ್ಟು ದಕ್ಷತೆಯಿಂದ
ಕೆಲಸ ಮಾಡಬೇಕು. ಬೆಂಗಳೂರು ನಗರದಲ್ಲಿ ರಸ್ತೆಗಳಲ್ಲಿ ಯಾರಾದರೂ ಗಲೀಜು ಮಾಡಿದರೆ
ಅಂಥವರನ್ನು ಹಿಡಿದು ಅವರಿಗೆ ಫೈನ್ ಹಾಕಬೇಕು. ಒಂದು ವೇಳೆ ನನ್ನ ಮಗನೇ ರೋಡಿನಲ್ಲಿ
ಗಲೀಜು ಮಾಡಿದರೆ ಅವನನ್ನು ಹಿಡಿದು ಇಂಥವರ ಮಗ ರೋಡಿನಲ್ಲಿ ಗಲೀಜು ಮಾಡಿದ್ದಕ್ಕೋಸ್ಕರ
ಅವನಿಗೆ 10 ರೂಪಾಯಿ ಫೈನ್ ಹಾಕಿದ್ದೇವೆ ಎಂದು ದೊಡ್ಡ ಅಕ್ಷರದಲ್ಲಿ ಪತ್ರಿಕೆಗಳಲ್ಲಿ ಹಾಕಿದರೆ
ನನಗೆ ಸಂತೋಷವಾಗುತ್ತದೆ. ಇಲ್ಲದೇ ಇದ್ದರೆ ದಿನಬೆಳಗಾದರೆ ಮಕ್ಕಳು ರಸ್ತೆಯಲ್ಲಿ ಗಲೀಜು
ಮಾಡುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಒಂದು ಕಾಲದಲ್ಲಿ ಬೆಂಗಳೂರಿನಲ್ಲಿ ಒಂದು ಮೊಹಲ್ಲಾ
ಮಾಡಲ್‌ಸ್ಟ್ರೀಟ್ ಎಂದು ಇತ್ತು. ಇವೊತ್ತು ಅದನ್ನು ನೋಡಿದರೆ ಮಾಡಲ್‌ಸ್ಟ್ರೀಟ್ ಎಂದು ಹೇಳು
ವುದಕ್ಕಾಗುವುದಿಲ್ಲ.

ಈಗ ಬೆಂಗಳೂರು ನಗರದಲ್ಲಿ ಕೆಲವು ಕಾರ್ಮಿಕರು ಕೆಲವು ಸೊಸೈಟಿಗಳನ್ನು ಮಾಡಿಕೊಂಡಿ
ದ್ದಾರೆ. ಆ ಸೊಸೈಟಿಗಳಲ್ಲಿ ತಪ್ಪುದಾರಿಯಲ್ಲಿ ಹೋಗತಕ್ಕಂಥಾ ಸೊಸೈಟಿಗಳನ್ನು ಕಂಡು ಹಿಡಿದು
ಅವುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ಮಾತು ಹೇಳುತ್ತೇನೆ. ಇವತ್ತು ಬೆಂಗಳೂರು ಸಿಟಿಗೆ ನಾಲ್ಕು ಏಜೆನ್ಸಿಗಳು
ಇವೆ. ಒಂದು ಸಿ. ಐ. ಟಿ. ಬಿ. ಇನ್ನೊಂದು ಕಾರ್ಪೊರೇಷನ್, ಮತ್ತೊಂದು ವಾಟರ್ ಬೋರ್ಡು.
ಇವರೆಲ್ಲರೂ ಸೇರಿಕೊಂಡು ಸಿಟಿಯನ್ನು ಹಾಳು ಮಾಡುತ್ತಿದ್ದಾರೆ. ಇವರಲ್ಲಿ ಯಾವ ಒಂದು
ಯುನಿಫಾರ್ಮಿಟಿಯು ಇಲ್ಲ, ಕೋಆರ್ಡಿನೇಶನೂ ಇಲ್ಲ. ಕಾರ್ಪೊರೇಶನಿನವರು ದಿನಾಲೂ ರೋಡು
ಗಳನ್ನು ರಿಪೇರಿ ಮಾಡಿ ಸರಿ ಮಾಡುತ್ತಾರೆ. ಅದರ ಮಧ್ಯದಲ್ಲಿ ಈ ವಾಟರ್-ಬೋರ್ಡಿನವರು
ಅದನ್ನು ಅಗೆದು ಹಾಗೆಯೇ ಬಿಟ್ಟು ಬಿಡುತ್ತಾರೆ. ಅದಕ್ಕೆ ಯಾರು ಬೇಳಲಿ ಅಥವಾ ಸಾಯಲಿ
ಯಾರೂ ನೋಡುತ್ತಾ ಇಲ್ಲ.

12-30 P.M.

ಇನ್ನೊಂದು ವಿಚಾರವೇನೆಂದರೆ, ಬೆಂಗಳೂರು ಕಾರ್ಪೊರೇಶನಾಗಲಿ, ಬಳ್ಳಾರಿ ಮುನಿಸಿ
ಪಾಲಟಿಯಾಗಲಿ, ಹುಬ್ಬಳ್ಳಿ ಕಾರ್ಪೊರೇಶನಾಗಲಿ, ಅಥವಾ ಬೀದರ್ ಮುನಿಸಿಪಾಲಟಿಯಾಗಲಿ
ಎಲ್ಲಾ ಕಡೆಗಳಲ್ಲಿಯೂ ಇದನ್ನು ಸರಿ ಮಾಡುವುದಕ್ಕೆ ಒಂದು ಕಬ್ಬಿಣದ ಕೈ ಬೇಕಾಗುತ್ತದೆ.
ಸಾಧಾರಣ ಕೈಯಿಂದ ಇದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸಚಿವರಿಗೆ

ಹೇಳುತ್ತಿದ್ದೇನೆ ಇಂತಹ ಕೆಲಸಗಳನ್ನು ಅಗತ್ಯವಾಗಿ ಮಾಡಬೇಕು ಎಂದು. ನೀವು ಒಂದು ಕಬ್ಬಿಣದ ಕೈಯಿಂದ ಇವುಗಳನ್ನು ಮಾಡಬೇಕಾಗಿದೆ.

ಮತ್ತೊಂದು ವಿಚಾರವೇನೆಂದರೆ ದೊಡ್ಡ ದೊಡ್ಡ ಬಂಗಲೆಗಳಿಗೆ ದೊಡ್ಡ ದೊಡ್ಡ ಕಂಪೌಂಡುಗಳು ಇವೆ. ಅಲ್ಲಿ ಗಂಧದ ಮರಗಳು ಬೇಕಾದಷ್ಟು ಇರುತ್ತವೆ. ಹಳೆಯ ಕಾಲದಲ್ಲಿ ಕಾರ್ಪೊರೇಶನವರು ಫಾರೆಸ್ಟ್ ಇಲಾಖೆಗೆ ತಿಳಿಸಿ ಅದಕ್ಕೆ ನಂಬರು ಹಾಕುತ್ತಿದ್ದರು. ಆ ಮೇಲೆ ಅದನ್ನು ಯಾರೂ ಕಡಿಯುವ ಹಾಗಿಲ್ಲ. ಆದರೆ ಈಗ ಅದನ್ನು ಮಾಡುತ್ತಾ ಇಲ್ಲ. ಇದರಿಂದ ಸರ್ಕಾರಕ್ಕೆ ಬರುವಂತಹ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಆದ್ದರಿಂದ ಎಲ್ಲಿ ಸೈಟ್ ಮಾಡುತ್ತಾರೆ ಅಲ್ಲಿ ಗಂಧದ ಮರಗಳು ಇವೆಯೇ ಎಂದು ನೋಡಿಕೊಂಡು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಈ ಮುನಿಸಿಪಾಲಿಟಿ ಆಕ್ಟಿನಲ್ಲಿ ಒಂದು ತಿದ್ದುಪಡಿಯನ್ನು ಮಾಡಿ ಯಾರ್‍ಯಾರು ಕ್ಲಾಸ್ 2, 3 ಮತ್ತು 4 ನೌಕರರು ತಪ್ಪು ಮಾಡಿದರೆ ಅವರನ್ನು ತಕ್ಷಣ ಬೆಂಗಳೂರಿಂದ ಶಿಕಾರಿಪುರಕ್ಕೆ ಟ್ರಾನ್ಸ್‌ಫರ್ ಮಾಡುವ ಹಾಗೆ ಮಾಡಬೇಕೆಂದು ಹೇಳಿ, ನಗರಾಡಳಿತವನ್ನು ಚೆನ್ನಾಗಿ ಮಾಡಲು ಕಬ್ಬಿಣದ ಕೈ ಕೊಡಲಿ ಎಂದು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೆ, ನಾನು ಪೌರಾಡಳಿತ ಸಚಿವರ ಬೇಡಿಕೆಯ ಮೇಲೆ ಕೆಲವು ಸಲಹೆಗಳನ್ನು ಮತ್ತು ಅನುಮಾನಗಳನ್ನು ವ್ಯಕ್ತಪಡಿಸಲು ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಮೈಸೂರು ದೇಶದೊಳಗೆ ಜನತಾ ಸರ್ಕಾರ ಬಂದ ಮೇಲೆ ಕಾರ್ಪೊರೇಶನ್ ಮತ್ತು ಮುನಿಸಿಪಾಲಟಿಗಳ ಸ್ಥಿತಿ ಏನಾಗಿದೆ ಅಂದರೆ ಹಿಂದೆ ಎಷ್ಟು ಮಟ್ಟಿನ ಅಧಿಕಾರಿಗಳನ್ನು ಸರ್ಕಾರದವರು ಕೊಟ್ಟಿದ್ದರೋ, ಅವರೆಲ್ಲರನ್ನೂ ಕಿತ್ತು ಹಾಕಿದ್ದಾರೆ. ಇದಕ್ಕೆ ಕಾರಣ, ರಾಜ್ಯ ಸರ್ಕಾರಗಳಿಗೆ ಇದ್ದಂತಹ ಅಧಿಕಾರವನ್ನು ಕೇಂದ್ರ ಸರ್ಕಾರದವರು ಮೊಟಕು ಮಾಡಿದ ಮೇಲೆ ರಾಜ್ಯಸರ್ಕಾರದ ಮಂತ್ರಿಗಳಿಗೆ ಕೆಲಸ ಸಾಲದೆ ಕಾರ್ಪೊರೇಶನ್ ಅಧಿಕಾರವನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ.

ಎರಡನೇಯದಾಗಿ ಹಿಂದೆ ಇದ್ದಂತಹ ಸರ್ಕಾರದವರು ಮತ್ತು ರಾಜ್ಯಪಾಲರ ಆಡಳಿತದಲ್ಲಿದ್ದಂತವರು ಕೂಡ ಆಕ್ಟ್ರಾಯಿ ಪದ್ಧತಿ ಬಹಳ ಹಳೆಯದು, ಇದನ್ನು ರದ್ದು ಮಾಡಬೇಕೆಂದು ಹೇಳಿದ್ದರು. ಕೇಂದ್ರ ಸರ್ಕಾರದವರು ಸಹ ಹಳೆಯ ಕಾಲದ ಆಕ್ಟ್ರಾಯಿಯನ್ನು ವಜಾ ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದ ಹಿಂದೆ ಹೇಳಿದಂತಹ ಸರ್ಕಾರದ ವಚನವನ್ನು ಪಾಲಿಸದೆ ಇವರು ಆಕ್ಟ್ರಾಯಿಯನ್ನು ಹಾಗೆಯೇ ಇಟ್ಟಿದ್ದಾರೆ. ಇದರಿಂದ ಏನಾಗಿದೆ ಅಂದರೆ, ಪ್ರತಿಯೊಂದು ಚೆಕ್ ಪೋಸ್ಟಿನಲ್ಲಿಯೂ ಲಂಚರುಷುವತ್ತುಗಳು ಜಾಸ್ತಿಯಾಗಿವೆ. ಕಾರ್ಪೊರೇಶನ್ ಆಕ್ಟ್ರಾಯಿಯನ್ನು ವಸೂಲು ಮಾಡತಕ್ಕವರು ಎಷ್ಟು ಮಟ್ಟಿಗೆ ಲಂಚಕೋರರಾಗಿದ್ದಾರೆಂಬುದು ಸರ್ಕಾರದ ಗಮನಕ್ಕೂ ಬಂದಿದೆ. ಆದ್ದರಿಂದ ಆಕ್ಟ್ರಾಯಿ ಪದ್ಧತಿಯನ್ನು ಇನ್ನಾದರೂ ಏಕೆ ವಜಾ ಮಾಡಬಾರದು ಎಂದು ಆಲೋಚನೆ ಮಾಡಬೇಕಾಗಿದೆ. ಹಿಂದೆ ಒಂದು ಸಾರಿ ಸರ್ಕಾರಕ್ಕೆ ನಾವು ಒಂದು ಮನವಿಯನ್ನು ಸಲ್ಲಿಸಿ, ಆಕ್ಟ್ರಾಯಿ ಎಷ್ಟು ಮಟ್ಟಿಗೆ ವಸೂಲಾಗುತ್ತದೋ ಅದಕ್ಕಿಂತ ಸೇಲ್ಸ್ ಟ್ಯಾಕ್ಸ್ ಮೇಲೆ ಸರ್ಚಾರ್ಜ್ ಹಾಕಬೇಕು ಮತ್ತು ಈ ಆಕ್ಟ್ರಾಯಿಯನ್ನು ನಿಲ್ಲಿಸಬೇಕೆಂದು ಹೇಳಿದ್ದೇವೆ. ಇನ್ನೊಂದು ವಿಚಾರವೇನೆಂದರೆ ಈಗ ಲಾರಿಗಳಲ್ಲಿ ಹೊರ ರಾಜ್ಯಗಳಿಂದ ಬರತಕ್ಕ ಸಾಮಾನುಗಳನ್ನು ಟೋಲ್ ಗೇಟ್‌ಗೆ ಬರುವ ಮೊದಲೇ ಹೊರಗಡೆಯೇ ಒಂದು ಗೋಡೌನ್ ಮಾಡಿಕೊಂಡು ಇಳಿಸುತ್ತಿದ್ದಾರೆ. ಇದಕ್ಕೆ ಅವರು ರಾತ್ರೋ ರಾತ್ರಿ ಸಾಮಾನುಗಳನ್ನು ತೆಗೆದುಕೊಂಡು ಬಂದು ಈ ರೀತಿ ಮಾಡುತ್ತಿದ್ದಾರೆ. ಈ ರೀತಿಯಾಗಿ ಅಲ್ಲಿ ನಡೆಯುತ್ತಿದೆ. ಇದರ ಜೊತೆಗೆ ವರಮಾನವನ್ನು ಹೆಚ್ಚಿಸುವುದಕ್ಕೆ ಬೇರೆ ದಾರಿಯನ್ನು ಕಂಡುಹಿಡಿಯಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಸೇಲ್ಸ್ ಟ್ಯಾಕ್ಸ್ ಮೇಲೆ ಸರ್ಚಾರ್ಜ್‌ನ್ನು ಹಾಕಿ ಮುನಿಸಿಪಾಲಟಿಯವರಿಗೆ ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು 1966ನೇ ಇಸವಿಯಲ್ಲಿ ಬೆಂಗಳೂರು ನಗರ ಕಾರ್ಪೊರೇಶನನ್ನು ರದ್ದು ಮಾಡಿದಾಗ 14 ಅಂಶಗಳ ಪೈಕಿ ಒಂದು ಅಂಶವನ್ನು ಹೇಳುತ್ತಿದ್ದೇನೆ. ಕಾರ್ಪೊರೇಶನಿನಲ್ಲಿ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಕಳಿಸಿಲ್ಲವೆಂದು ಹೇಳುತ್ತಿದ್ದರು. ಆ ಕಾರಣದಿಂದ ಕಾರ್ಪೊರೇಶನ್ ರದ್ದು ಮಾಡಿದರು. ಅದನ್ನು ರದ್ದು ಮಾಡಿ 7 ವರ್ಷಗಳು ಕಳೆದರೂ ಕೂಡ ಸರ್ಕಾರದವರು ಇನ್ನೂ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಜಾರಿಗೆ ಕೊಡುವುದಕ್ಕೆ ವಿಫಲವಾಗಿದೆ. ಆದ್ದರಿಂದ ಈ ಮಂತ್ರಿಮಂಡಲದವರಿಗೆ ಅಧಿಕಾರದಲ್ಲಿರಲು ಹಕ್ಕಿಲ್ಲವೆಂದು ಹೇಳಬೇಕಾಗಿದೆ.

(ಶ್ರೀ ಕೆ. ಎಂ. ನಾಗಣ್ಣ)

ಇನ್ನು ಸ್ಲಮ್ಸ್ ಬಗ್ಗೆ ಒಂದು ಮಾತು. ಬೆಂಗಳೂರು ನಗರದಲ್ಲಿ ಸ್ಲಮ್ಸ್ ಎಲ್ಲಿಂದ ಬಂತು, ಯಾವ ಊರಿನವರು ಅವರು; ಏಕೆ ಬಂದರು ಎಂದು ನೋಡಿದರೆ ಗೊತ್ತಾಗುತ್ತದೆ. ಅವರೆಲ್ಲರೂ ಮೈಸೂರು ದೇಶದ ಜನರಲ್ಲ. ಅವರು ಬೇರೆ ಪ್ರಾಂತ್ಯಗಳಿಂದ ಬಂದಂತಹವರು. ಅದರಲ್ಲಿ ಕನ್ನಡಿಗರ್ಯಾರೂ ಇಲ್ಲ. ಅವರು ವೇಲೂರು, ವಾನಂಬಾಡಿ ಕಡೆಯಿಂದ ಬಂದಂಥವರು. ಈಗ ಸಚಿವರು ಉದಾರ ಭಾವನೆಯಿಂದ ನಿವೇಶನಗಳನ್ನು ಹಂಚುತ್ತೇವೆಂದು ಹೇಳಿದ ಮೇಲೆ ಬೇಕಾದಷ್ಟು ಜನರು ಸ್ಲಮ್‌ಗಳನ್ನು ಮಾಡುತ್ತಿದ್ದಾರೆ. ಒಂದು ಮನೆಯಲ್ಲಿ 5 ಜನ ಇದ್ದರೆ, 5 ಸ್ಲಮ್ ಗುಡಿಸಲುಗಳನ್ನು ಇಂದು ಹಾಕುತ್ತಿದ್ದಾರೆ. ಆದ್ದರಿಂದ ಸ್ಲಮ್ಸ್‌ನಲ್ಲಿರುವವರಿಗೆ ಸೈಟುಗಳನ್ನು ಕೊಡುವಾಗ ಬೆಂಗಳೂರಿನ ಜನರು ಯಾರ್ಯಾರಿದ್ದಾರೆ, ಯಾರ್ಯಾರಿಗೆ ಮನೆ ಇಲ್ಲ, ಮನೆ ಇಲ್ಲದೆ ಬಾಡಿಗೆ ಮನೆಗಳಲ್ಲಿದ್ದಾರೋ ಅಂತಹವರಿಗೆ ಮಾತ್ರ ಸೈಟುಗಳನ್ನು ಕೊಡಬೇಕು. ಇದೂ ಅಲ್ಲದೆ ಅಲ್ಲಿರತಕ್ಕವರಿಗೆ ಈಗ ಯಾರಿಗೆ ಅರ್ಜಿ ಕೊಡಬೇಕೆಂಬುದೇ ಗೊತ್ತಿಲ್ಲ. ಈಗ 25 ಸಾವಿರ ಜನರು ಬಾಡಿಗೆ ಮನೆಗಳಲ್ಲಿ ಇದ್ದಾರೆ. ಅವರಿಗೆಲ್ಲರಿಗೂ ಕೊಡಬೇಕು ಬರೀ ಸ್ಲಮ್ಸ್‌ನಲ್ಲಿದ್ದವರಿಗೆ, ಹೊರಗಡೆಯಿಂದ ಬಂದವರಿಗೆ ಮಾತ್ರ ಸೈಟುಗಳನ್ನು ಕೊಡುತ್ತೇವೆಂಬ ಒಂದು ಕೃಪೆಯನ್ನು ತೋರಿಸಿದರೆ, ಬೆಂಗಳೂರಿನಲ್ಲಿ ನೂರಾರು ವರ್ಷಗಳಿಂದ ಇರತಕ್ಕವರಿಗೆ ಮನೆಗಳು ಇಲ್ಲದೇ ಇರುವವರ ಗತಿಯೇನು ? ಅವರಿಗೂ ಸಹ ಅದೇ ರೀತಿಯ ಕೃಪೆಯನ್ನು ತೋರಿಸಬೇಕು.

ಇನ್ನೊಂದು ವಿಷಯ ಮಾನ್ಯ ಮಂತ್ರಿಗಳು ಬೆಂಗಳೂರಿನ ನಿವಾಸಿಗಳಾಗಿ ಸ್ವಂತ ಮನೆಗಳಲ್ಲಿ ವಾಸವಾಗಿದ್ದಾರೆ. ಹಿಂದೆ ಪತ್ರಿಕೆಗಳಲ್ಲಿಯೂ ಈ ವಿಷಯ ವರದಿಯಾಗಿತ್ತು. ಏನೆಂದರೆ ಮನೆಯ ಮಾಲೀಕರುವಾಸವಾಗಿರತಕ್ಕಂಥ ಮನೆಗಳಿಗೆ ಕಂದಾಯವನ್ನು ಜಾಸ್ತಿ ಮಾಡಕೂಡದೆಂದು ಸರ್ಕಾರದವರು ಒಂದು ಆದೇಶವನ್ನು ಕೊಟ್ಟಿದ್ದಾರೆಂದು ವರದಿಯಾಗಿತ್ತು. ಆದರೆ ಅದರ ತದ್ವಿರುದ್ಧವಾಗಿ ಕಾರ್ಪೊರೇಷನ್ ಸಭೆಯಲ್ಲಿ 'ಕಾರ್ಪೊರೇಷನ್ ಮೇಯರ್ ಅವರು ಏನು ಹೇಳಿದ್ದಾರೆಂದರೆ, ಈ ರೀತಿಯಾಗಿ ಆದೇಶ ಕೊಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿಲ್ಲ, ಏನು ಮಾಡಬೇಕಾದರೂ ನಮಗೆ ಅಧಿಕಾರವಿದೆ. ಸರ್ಕಾರದ ಹೇಳಿಕೆಯನ್ನು ನಾವು ಪಾಲಿಸುವುದಕ್ಕೆ ತಯಾರ್ ಆಗಿಲ್ಲ. ಈ ಬಗ್ಗೆ ಸರ್ಕಾರದವರು ತಮ್ಮ ಆದೇಶವನ್ನು ಉಳಿಸಿಕೊಳ್ಳುತ್ತೀರೋ ಅಥವಾ ಮೇಯರ್ ಅವರು ಹೇಳಿದ ಮಾತನ್ನು ಉಳಿಸಿಕೊಳ್ಳುತ್ತಾರೋ ಎಂಬುದನ್ನು ಬೆಂಗಳೂರಿನ 15 ಲಕ್ಷ ಜನರು ಕಾದು ನೋಡುತ್ತಿದ್ದಾರೆ.

ಇನ್ನೊಂದು ವಿಷಯ. ಬೆಂಗಳೂರಿನಲ್ಲಿ ಕೋರ್ಟುಗಳ ಮುಂದೆ ಯಾವಾಗಲೂ ಸಾಮಾನ್ಯವಾಗಿ ಸಾಕ್ಷಿ ಹೇಳುವವರು ಹೆಚ್ಚಿಗೆ ಇರುತ್ತಾರೆ. ಅದೇ ರೀತಿ ಸುಮಾರು ಐದಾರು ವರ್ಷಗಳಿಂದೀಚೆಗೆ ಬರೀ ಬ್ರೋಕರ್ಸ್ ಕಾರ್ಪೊರೇಷನ್ನಿನ ಕಾಂಪೌಂಡ್ ಮುಂದೆ ಇರುತ್ತಾರೆ. ಅವರು ಅಲ್ಲಿನ ಅಧಿಕಾರಿಗಳನ್ನು ಹಾಳು ಮಾಡುತ್ತಿದ್ದಾರೆ. ಯಾವನಾದರೂ ಅರ್ಜಿಯನ್ನು ತೆಗೆದುಕೊಂಡು ಬಂದರೆ ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೋಗಿ ಅವನ ಕೆಲಸ ಮಾಡಿಸಿಕೊಳ್ಳಬೇಕೆಂದರೆ, ಅವನು ಅವನಿಗೆ ಲಂಚ ಕೊಡಬೇಕು. ಇದು ಮೊದಲು ನಿವಾರಣೆಯಾಗಬೇಕು. ಕಾರ್ಪೊರೇಷನ್ ಕಚೇರಿಯೊಳಗೆ ಏನಾದರೂ ಅವನ ಸ್ವಂತ ಕೆಲಸವಿರಬೇಕು, ಇನ್ನೊಬ್ಬರ ಕೆಲಸ ಇರಬಾರದೆಂಬ ಒಂದು ನೀತಿಯನ್ನು ಅಲ್ಲಿ ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ಒಟ್ಟಿನಲ್ಲಿ ಅಲ್ಲಿ ಬ್ರೋಕರ್ಸ್ ಹಾವಳಿಯನ್ನು ತಪ್ಪಿಸಿದರೆ ನಿಜವಾಗಿ ಜನಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ ಹಾಗೂ ಅಧಿಕಾರಿಗಳಿಗೂ ಹೆಚ್ಚಿಗೆ ಕೆಲಸವನ್ನು ನಿಷ್ಠೆಯಿಂದ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಇನ್ನೊಂದು ವಿಷಯವನ್ನು ಮಾನ್ಯ ಶ್ರೀ ಶಾಮಣ್ಣನವರು ಹೇಳಿದರು. ಅದು ಅವರಿಗೆ ಸರಿಯಾಗಿ ಗೊತ್ತಿಲ್ಲವೆಂದು ಕಾಣುತ್ತದೆ. ವಿಜಿಲೆನ್ಸ್ ಡಿಪಾರ್ಟ್‌ಮೆಂಟಿನವರು ಇಂಜಿನಿಯರುಗಳ ಮೇಲೆ ವರದಿ ಕೊಟ್ಟಿದ್ದಾರೆಂದು. ನಾನು ಹೇಳುವುದಿಷ್ಟೇ. ಇದಕ್ಕೆ ಬರೀ ಇಂಜಿನಿಯರುಗಳೇ ಜವಾಬ್ದಾರರಲ್ಲ. ಇದಕ್ಕೆ ಸಂಬಂಧಪಟ್ಟ ಆಡಿಟರುಗಳೂ ಸಹ ಜವಾಬ್ದಾರರು. ಇದರಲ್ಲಿ ಆಡಿಟರ್ಸ್ ಯಾರ್ಯಾರು ಸೇರಿದ್ದಾರೋ ಅವರಮೇಲೆಲ್ಲಾ ಕೂಡ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನೊಂದು ವಿಷಯ. ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಕಾರ್ಪೊರೇಷನ್ನಿಗೆ ಅಥವಾ ಮುನಿಸಿಪಾಲಿಟಿಗೆ ಎಷ್ಟು ಸೇರಬೇಕೋ ಅಷ್ಟು ಸೇರುತ್ತಾ ಇಲ್ಲ. ಈಗ ಆ ಬಾಬಿನಲ್ಲಿ 50 ಲಕ್ಷ ರೂಪಾಯಿಗಳನ್ನು ವಸೂಲು ಮಾಡುತ್ತಾರೆ. ಅದರಲ್ಲಿ ಕೇವಲ ನಾಲ್ಕೈದು ಲಕ್ಷ ರೂಪಾಯಿಗಳನ್ನು ಮಾತ್ರ ಕೊಡುತ್ತಾರೆ. ಸುಮಾರು 5—6 ಕೋಟಿ ರೂಪಾಯಿಗಳಾದರೂ ಅಲ್ಲಿಗೆ ನ್ಯಾಯವಾಗಿ

ನಂದಾಯವಾಗಬೇಕಾಗಿದೆ. ಆ ರೀತಿಯಾಗಿ ಸರ್ಕಾರದವರು ಕೂಡಲೇ ಕೊಡಬೇಕೆಂದು ಹೇಳಿ, ಅಧ್ಯಕ್ಷರು ನನಗೆ ಮಾತನಾಡಲಿಕ್ಕೆ ಇಷ್ಟು ಹೊತ್ತು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಾನ್ಯ ಮಂತ್ರಿಗಳು ಮಂಡಿಸಿದ ಡಿಮ್ಯಾಂಡುಗಳಿಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಈ ಪೌರಸಭೆಗಳಲ್ಲಿ ಮಾನ್ಯ ಶ್ರೀ ಗುಂಡೂರಾವ್ ಅವರು ಹೇಳಿದ ಹಾಗೆ ಈ ಹೊಸ ಆಕ್ಟ್‌ನಲ್ಲಿ ಬಹಳ ಡಿಫೆಕ್ಟ್ಸ್ ಇವೆ. ಹೊಸದಾಗಿ ನಾನೂ ಒಬ್ಬ ನಗರ ಸಭಾಸದಸ್ಯನಾಗಿದ್ದೇನೆ. ಎಷ್ಟೋ ಮಾತುಗಳನ್ನು ನಗರ ಸಭೆಯಲ್ಲಿ ಮಾತನಾಡುತ್ತೇವೆ. ಆದರೆ ಎಲ್ಲಾ ಪವರ್ಸ್ ಈಗ ಮುನಿಸಿಪಲ್ ಕಮಿಷನರ್ ಕೈಲಿ ಇದೆ. ಆದ್ದರಿಂದ, ಈ ಆಕ್ಟನ್ನು ಬದಲಾಯಿಸಿ ಜನರನ್ನು ಪ್ರತಿನಿಧಿಸತಕ್ಕ ಎಲ್ಲಾ ಸದಸ್ಯರಿಗೂ ಮತ್ತು ಮುನಿಸಿಪಾಲಿಟಿ ಅಧ್ಯಕ್ಷರಿಗೂ ಕೂಡ ಕೆಲವು ಹಕ್ಕುಗಳು ಸಿಗುವಂತೆ ಅದರಲ್ಲಿ ಕೆಲವು ಬದಲಾವಣೆಗಳು ಆಗಬೇಕೆಂದು ನಾನು ಇಚ್ಛೆಪಡುತ್ತೇನೆ. ಮತ್ತೊಂದು ಮಾತು. ನಾನು ಗುಲ್ಬರ್ಗಾ ಮುನಿಸಿಪಾಲಿಟಿಯಲ್ಲಿದ್ದಾಗ ಎಷ್ಟೋವೇಳೆ ವಿರೋಧಪಕ್ಷದ ನಾಯಕರಾಗಿರತಕ್ಕವರು ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ಹೆಸರನ್ನು ಹೇಳಿ ಕೊಂಡು ಇಲ್ಲಿ ಎಂ. ಎಲ್. ಎ., ಅಲ್ಲಿ ಮುನಿಸಿಪಲ್ ಪ್ರೆಸಿಡೆಂಟ್‌ರಾಗಿದ್ದರು. ಆ ವೇಳೆಗೆ ಗುಲ್ಬರ್ಗಾ ಮುನಿಸಿಪಾಲಿಟಿಯಲ್ಲಿ ನಡೆದಿರತಕ್ಕ ಎಷ್ಟೋ ವಿಷಯಗಳನ್ನು ತಮ್ಮಲ್ಲಿ ತಿಳಿಸಬಯಸು ತ್ತೇನೆ. ಅಂತಹವರು ನಮ್ಮಲ್ಲಿ ಮುನಿಸಿಪಲ್ ಅಧ್ಯಕ್ಷರು ಆಗಿದ್ದಂಥ ಕಾಲದಲ್ಲಿ ಬಸವೇಶ್ವರ ಮೂರ್ತಿಯನ್ನು ಕೊಡಿಸಬೇಕೆಂಬ ಇಚ್ಛೆ ಇತ್ತು. ಈಗ ಅದನ್ನು ಅಲ್ಲಿ ಸ್ಥಾಪನೆಮಾಡಿದ್ದಾರೆ. ಅವರು ಬಸವ ಸಮಿತಿಯ ಅಧ್ಯಕ್ಷರಾಗಿದ್ದಾರೆ. ನಗರ ಸಭೆಯ ಅಧ್ಯಕ್ಷರಾಗಿದ್ದಾರೆ. ಯಾರಾದರೂ ಬಂದರೆ ಅವರಿಂದ 500ರಿಂದ 700 ರೂಪಾಯಿಗಳವರೆಗೆ ತೆಗೆದುಕೊಳ್ಳುತ್ತಾರೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಎಷ್ಟೋ ಲಕ್ಷ ರೂಪಾಯಿಗಳನ್ನು ಕಲೆಕ್ಟ್‌ಮಾಡಿ ಬಸವೇಶ್ವರರ ಹೆಸರಿನಲ್ಲಿ ಒಂದು ಫಂಡ್ ಮಾಡಿರುತ್ತಾರೆ. ಈ ರೀತಿ ಮಾಡಿದ್ದಾರೆಂದು ನಗರಸಭೆಯಲ್ಲಿ ಹೇಳಿದ್ದರೂ ಲಕ್ಷಗಟ್ಟಲೆ ರೂಪಾಯಿಗಳನ್ನು ಕಲೆಕ್ಟ್‌ಮಾಡಿದ್ದರೂ ಸರಿಯಾಗಿ ರಶೀದಿ ಕೊಟ್ಟಿಲ್ಲ. ರಶೀದಿಗಳನ್ನು ಮಿಸ್‌ಯೂಜ್ ಮಾಡುತ್ತಿದ್ದಾರೆ. ನಗರಸಭಾಧ್ಯಕ್ಷರ ಹೆಸರನ್ನು ಉಪಯೋಗಿಸಿ ಈ ರೀತಿ ಮಾಡುತ್ತಾರೆ. ಇದರ ಬಗ್ಗೆ ವಿರೋಧವನ್ನು ವ್ಯಕ್ತ ಪಡಿಸಿದಾಗ ಮೈಸೂರು ಸರ್ಕಾರ ದಿಂದ ಒಂದು ಎನ್‌ಕ್ವೈರಿ ಕಮಿಟಿ ಆಯಿತು. ಆದರೆ ಇಲ್ಲಿಯವರೆಗೂ ಏನು ಎನ್‌ಕ್ವೈರಿ ಆಯಿತೋ ಗೊತ್ತಿಲ್ಲ. ಇದರ ಬಗ್ಗೆ ಎಷ್ಟೋ ರೆಪ್ರಸೆಂಟೇಷನ್‌ಗಳನ್ನು ಮಾಡಿದ್ದರೂ ಸಹ ಇವತ್ತಿನವರೆಗೂ ಏನೂ ಸರ್ಕಾರದಿಂದ ಉತ್ತರ ಬಂದಿಲ್ಲ. ಇದೇ ರೀತಿಯಲ್ಲಿ ಗುಲ್ಬರ್ಗಾದಲ್ಲಿ ಒಂದು ಹೊಸ ಮಾರ್ಕೆಟ್ ಆಗಬೇಕೆಂದು ತೀರ್ಮಾನವಾಗಿತ್ತು. ಅಲ್ಲಿ ಒಂದು ವೆಜಿಟಬಲ್ ಮಾರ್ಕೆಟ್ ಇತ್ತು. ಅಲ್ಲಿರತಕ್ಕ ಜನರಿಗೆ ಮೊದಲು ಸ್ಥಾನ ಕೊಡಬೇಕು. ಆದಾದಮೇಲೆ ಫ್ರೆಷ್ ಅಪ್ಲಿಕೇಷನ್ಸ್‌ನ್ನು ಕನ್ಸಿಡರ್ ಮಾಡಬೇಕು. ಅಲ್ಲಿನ ವೆಜಿಟಬಲ್ ಮಾರ್ಕೆಟ್ ಕಮಿಟಿಯಲ್ಲಿ ನಾನು ಇದ್ದೆ. ಆದರೆ ಆ ಕಮಿಟಿಯಲ್ಲಿಯೂ ಕೂಡ ತಮಗೆ ಬೇಕಾದವರಿಗೆ ಸ್ಥಳ ಕೊಟ್ಟಿದ್ದಾರೆ. ಅನೇಕರು ಇನ್ನೂ ಆ ಹೊಸ ಮಾರ್ಕೆಟ್ಟಿಗೆ ಹೋಗಿಲ್ಲ. ಹೊಸದಾಗಿ ಏನೋ ಮಾರ್ಕೆಟ್ ಕಟ್ಟಿಸಿದ್ದಾರೆ. ಇದರಿಂದ ಲಕ್ಷಾಂತರ ರೂಪಾಯಿಗಳು ಲುಕ್ಸಾನು ಆಗಿದೆ. ಆದಕಾರಣ ತಾವು ಆ ವಿಷಯದಲ್ಲಿ ತಮ್ಮ ಗಮನವನ್ನು ಕೊಡಬೇಕು.

ಮತ್ತೊಂದು ವಿಷಯ. ಇವತ್ತಿನದಿವಸ ಈ ಗುಲ್ಬರ್ಗ ನಗರದಲ್ಲಿ ನೀರಿನದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಅದನ್ನು ಕೂಡಲೇ ಬಗೆಹರಿಸಬೇಕಾಗಿದೆ. ಹಿಂದೆ ರಾಜ್ಯಪಾಲರು ಆಡಳಿತ ಮಾಡುತ್ತಿದ್ದಾಗ ಅಲ್ಲಿ ನೀರೇ ಇರಲಿಲ್ಲ. ಅಲ್ಲಿಗೆ ಬನ್ನಿತುರ ಪ್ರಾಜೆಕ್ಟ್‌ನಿಂದ ನೀರು ತರಬೇಕಾಗಿತ್ತು. ಇದಕ್ಕಾಗಿ ನಗರಸಭೆಯ ಸದಸ್ಯರು ರಾಜೀನಾಮೆ ಕೊಟ್ಟಿದ್ದರೂ ಆಗ ರಾಜ್ಯಪಾಲರು ಇದರ ಬಗ್ಗೆ ತೀವ್ರ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಈಗ ಫಸ್ಟ್‌ಸ್ಟೇಜ್ ಕೆಲಸ ಮುಗಿದಿದೆ. ಇನ್ನು ಸೆಕೆಂಡ್ ಸ್ಟೇಜ್ ಕೆಲಸ ಮುಗಿಸಬೇಕಾದರೆ ಪೈಪ್ ಕೆಲಸ ಮಾಡಬೇಕು. ಐರನ್ ಅಂಡ್ ಸ್ಟೀಲ್ ಸಪ್ಲೈ ಆಗಬೇಕು ಎಂಬುದಾಗಿ ಹೇಳುತ್ತಿದ್ದಾರೆ. ಅದಕ್ಕಾಗಿ ನಾವು ಲೀಡ್ ತೆಗೆದುಕೊಳ್ಳ ಬೇಕೆಂದು ಹೇಳಿದ ಮೇಲೆ ನಾವು ಒಂದು ಡೆಲಿಗೇಷನ್ ಕೊಟ್ಟಾಗ್ಗೆ ತಾವು ಒಂದು ಇಂಟರೆಸ್ಟ್ ತೋರಿಸಿ ಆಗ ಏನೇನು ಮಾಡುತ್ತೇವೆಂದು ಹೇಳಿದ್ದರೋ ಅದನ್ನು ಇದುವರೆಗೆ ಮಾಡಲಿಲ್ಲ. ಗುಲ್ಬರ್ಗ ಜನರಿಗೆ ನೀರಿನ ಅಭಾವ ಇದೆ. ಆದ್ದರಿಂದ ಹೆಚ್ಚಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಬೇಕು. ಒಬ್ಬ ಡೆಪ್ಯುಟಿ ಕಮಿಷನರ್ ಪಬ್ಲಿಕ್ ಹೆಲ್ತ್ ಆಫೀಸರ್ಸ್ ಮೂಲಕ ಅವರ ಮನೆಯಲ್ಲಿ ಬೋರ್‌ವೆಲ್ ಹಾಕಿಕೊಂಡು, ಅದನ್ನು ಸರಿಯಾಗಿ ಫಂಕ್ಷನ್ ಮಾಡಿಸಲಿಲ್ಲ. ಇದರಿಂದ

(ಶ್ರೀ ಧರ್ಮಸಿಂಗ್ ನಾರಾಯಣಸಿಂಗ್)

ಬೇರೆ ನೀರಿಗೆ ತುಂಬಾ ಅಭಾವವಾಗಿದೆ. ಒಟ್ಟಿನಲ್ಲಿ ನಾನು ಹೇಳಿರುವ ಬಸವ ಸಮಿತಿಯ ವಿಷಯವಾಗಿ, ವೆಜಿಟಬಲ್ ಮಾರ್ಕೆಟ್ ವಿಷಯವಾಗಿ ಹಾಗೂ ನೀರಿನ ವಿಷಯವಾಗಿ ಸರ್ಕಾರದವರು ಅತಿ ಜಾಗ್ರತೆಯಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಕೊನೆಯದಾಗಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಯವರೇ, 'ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಮುನಿಸಿಪಲ್ ಇಲಾಖೆ ಮತ್ತು ಕಾರ್ಪೊರೇಷನ್‌ಗೆ ಸಂಬಂಧಪಟ್ಟ ಬೇಡಿಕೆಗಳು ಏನಿವೆ, ಇವುಗಳನ್ನು ನಾನು ವಿರೋಧಿಸುತ್ತ ಎರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ನಾನು ಹೇಳಬೇಕಾಗಿರುವುದು ಈ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ನಿಗೆ ಸಂಬಂಧಪಟ್ಟ ಇಲಾಖೆಗಳೇನಿವೆ ಅವು ಮುಖ್ಯವಾಗಿ ಜನಸಂಪರ್ಕವನ್ನು ಇಟ್ಟುಕೊಂಡಿರತಕ್ಕಂಥ ಇಲಾಖೆಗಳಾಗಿವೆ. ಹಾಗೆ ಒಂದು ಜನಸಂಪರ್ಕವನ್ನು ಇಟ್ಟುಕೊಳ್ಳಬೇಕಾದುದು ಅವುಗಳ ಒಂದು ಜವಾಬ್ದಾರಿಯೂ ಹೌದು. ಆ ಸಂಸ್ಥೆಗಳು ಜನಸಂಪರ್ಕವನ್ನು ಯಾವ ಕಾರಣ ದಿಂದಲೂ ಕಳೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ಇವು ಯಾವ ರೀತಿಯಲ್ಲಿ ಈ ಜನ ಸಂಪರ್ಕವನ್ನು ಇಟ್ಟುಕೊಂಡಿರಬೇಕು, ಅವು ಯಾವ ರೀತಿಯಲ್ಲಿ ತಮ್ಮ ಆಡಳಿತವನ್ನು ನಿರ್ವಹಿಸಬೇಕು ಮತ್ತು ಯಾವ ರೀತಿಯಲ್ಲಿ ತಮ್ಮ ಜವಾಬ್ದಾರಿಯನ್ನು ಅವು ನಿರ್ವಹಿಸಬೇಕು. ಅನ್ನುವ ವಿವರಗಳ ಬಗ್ಗೆ ನಾನೀಗ ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೆ ನನಗೆ ಕಾಲಾವಕಾಶವೂ ಇಲ್ಲ. ಆದರೆ 1971 ರಲ್ಲಿ ಆ ದೆಹಲಿ ಕಾರ್ಪೊರೇಷನ್ ಅಡ್ಮಿನಿಸ್ಟ್ರೇಷನ ವಿಚಾರದಲ್ಲಿ ಹಾಗೂ ಅಲ್ಲಿನ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಬಹಳ ಒಳ್ಳೆಯ ಅಂಶಗಳನ್ನು ಒಳಗೊಂಡ ಒಂದು ಪುಸ್ತಕವನ್ನು ಬರೆದಿದ್ದಾರೆ. ಆ ಅಂಶಗಳ ಕಡೆಗೆ ಸರ್ಕಾರದವರ ಗಮನವನ್ನು ಸೆಳೆಯುವುದಕ್ಕೆ ನಾನು ಇಚ್ಛಿಸುತ್ತೇನೆ. ಆ ಪುಸ್ತಕದ ಹೆಸರು 'ದಿ ಸಿಟಿಜನ್ ಅಂಡ್ ಮುನಿಸಿಪಲ್ ಬ್ಯೂರಾಕ್ರಸಿ' ಎಂದು. ಇದನ್ನು ಬರೆದವರು—ವಿ. ಜಗನ್ನಾಥ್ ಮತ್ತು ಎಂ. ಎಸ್. ಬಕ್ಷಿ ಇವರುಗಳು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ಬೆಂಗಳೂರು ನಗರ ಕಾರ್ಪೊರೇಷನ್ ವಿಚಾರದಲ್ಲಿ ಈಗಾಗಲೇ ಸಾಕಷ್ಟು ದುರ್ವಾರ್ತೆ ಹೊರಟಿದೆ. ಒಳಗೂ ದುರ್ವಾರ್ತೆ. ಅದರ ವಾಸನೆ ಹೊರಗಡೆಯೂ ಹರಡಿದೆ. ಕಾರ್ಪೊರೇಷನ್ ಸಭೆಯಲ್ಲಿ ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರನ್ನು 'ಚಪ್ಪಲಿಯಿಂದ ಎಸೆಯುತ್ತೇನೆಂದು ಹೇಳಿದ ವಿಷಯ' ಸಾಕಷ್ಟು ಪ್ರಚಾರವಾಗಿ ಎಲ್ಲರಿಗೂ ತಿಳಿದಿರತಕ್ಕ ವಿಚಾರ ಹಾಗೇ ಇನ್ನೊಬ್ಬ ಸದಸ್ಯರು ಡೆಪ್ಯುಟಿ ಮೇಯರನ್ನು ಎತ್ತಿ ಹೊರಗೆ ಹಾಕುತ್ತೇನೆಂದು ಹೇಳಿದ್ದೂ ಈ ದುರ್ವಾರ್ತೆ ಒಳಗೂ ಹೊರಗೂ ಸಾಕಷ್ಟು ಹರಡಿದೆ. ಇದನ್ನು ಕೂಡಲೇ ಸರಿಪಡಿಸಬೇಕು.

ಹಾಗೇ ಇನ್ನು ರಾಜಾಜಿನಗರ ಮತ್ತು ಮಲ್ಲೇಶ್ವರಂ ಕೆಲವು ಭಾಗದಲ್ಲಿ ಇರತಕ್ಕ ಗಲೀಜನ್ನು ನೋಡಿದರೆ ಅಲ್ಲಿ ಯಾರಾದರೂ ಗರ್ಭಿಣಿ ಹೆಂಗಸರು ಹೋದರೆ ಅಬಾರ್ಷನ್ ಆಗುವುದರಲ್ಲಿ ಸಂಶಯವೇ ಇಲ್ಲ. ಇದೇ ವಿಚಾರದಲ್ಲಿ ಶಾಸಕರು ಮುಖ್ಯಮಂತ್ರಿಗಳನ್ನು ಕಂಡಿದ್ದರು. ಸರಿಮಾಡಬೇಕೆಂದು ಹೇಳಿದ್ದೆವು. ಈಗಲಾದರೂ ಇದರ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟವಾದ ಕಾರ್ಯ ಕ್ರಮವನ್ನು ಕೈಗೊಳ್ಳಬೇಕು.

ಇನ್ನು ಆ ಬೆಂಗಳೂರು ಕಾರ್ಪೊರೇಷನ್ನಿಗೆ ಸಂಬಂಧಪಟ್ಟಹಾಗೆ ಇನ್‌ವಾಲ್ವ್ ಆಗಿದ್ದ 203 ಜನರಲ್ಲಿ ಸರ್ಕಾರದವರು ಸಸ್‌ಪೆಂಡ್ ಮಾಡಿರುವುದು ಕೇವಲ 18 ಜನರನ್ನು ಮಾತ್ರ ಸಸ್‌ಪೆಂಡ್ ಮಾಡಿದ್ದಾರೆ. ಅದರಲ್ಲೂ ಆ ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಒಬ್ಬ ಅಸಿಸ್ಟೆಂಟ್ ಇಂಜನಿಯರನ್ನೂ ಮತ್ತು ಒಬ್ಬ ಎಸ್. ಇ. ಇವರನ್ನು ಬಿಟ್ಟರೆ ಬಾಕಿ ಇನ್ನಾವ ಆಫೀಸರುಗಳನ್ನೂ ಇವರು ಟಚ್‌ಮಾಡಿಲ್ಲ. ಕರಪ್ಟ್ ಅಧಿಕಾರಿ ಬಗ್ಗೆ ಕ್ರಮ ಕೈಗೊಂಡರೆ ನನಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಯಾರದೋ ಪ್ರೆಷರ್ ಬಂತೆಂದು ಮಂಗಳೂರಲ್ಲಿ ಸಸ್ಪೆಂಡ್ ಮಾಡಿದ್ದವರೊಬ್ಬರ ಬಗ್ಗೆ ಅದನು ಆ ಸಸ್ಪೆನ್‌ಷನ್ನು ಮಂತ್ರಿಗಳೇ ಫೋನ್ ಮಾಡಿ ವಾಪಸ್ ತೆಗೆದುಕೊಂಡಿದ್ದಾರೆ. ಆದರೆ ಮಾನ್ಯ ಮಂತ್ರಿಗಳಿಗೆ ಮಂಗಳೂರು ಜನರ ಬಗ್ಗೆ ಬಹಳ ಪ್ರೇಮವಿರಬಹುದು. ಅದಕ್ಕಾಗಿ ವಿತ್‌ಡ್ರಾ ಮಾಡಿರಬಹುದು. ಆದರೆ ನಾನು ಹೇಳತಕದ್ದು ಹಾಗೆ ಒತ್ತಾಯಕ್ಕೆ ಮಂತ್ರಿಗಳು ಮಣಿಯಬಾರದು ಎಂದು.

ಶ್ರೀ ಬಿ. ಬಸವಲಿಂಗಪ್ಪ.—ಯಾರು ಹೇಳಿದ್ದು ನಾನು ಫೋನ್ ಮಾಡಿದ್ದಾನೆ ಎಂದು ? ಅವರ ಹೆಸರೇನು ?

ಶ್ರೀ ಎಂ. ಎಸ್. ಕೃಷ್ಣನ್.—ನನ್ನಲ್ಲಿ ಎಲ್ಲಾ ವಿವರಗಳೂ ಇವೆ. ಅನಂತರ ಮಂತ್ರಿಗಳಿಗೆ ಬೇಕಾದರೆ ಕೊಡುತ್ತೇನೆ.

ಇನ್ನು ಆ ಬೇಗಂ ಮೊಹಲ್ಲಾ ವಿಚಾರದಲ್ಲಿ ಏನು ತೀರ್ಮಾನ ಮಾಡಿದ್ದಾರೋ ತಿಳಿಯಲಿಲ್ಲ. ಆದರೆ ಅದು ದುರ್ವ್ಯವಹಾರ ಅದನ್ನು ಕೈಬಿಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್. ಇದರಲ್ಲಿ ಸ್ಥಳೀಯ ಸಂಸ್ಥೆಗಳಿಗೆ 1957 ರಲ್ಲಿ ಏನು ನಿಗದಿಮಾಡಲಾಗಿತ್ತೋ ಅದನ್ನೇ ಈಗಲೂ ಕೊಡುತ್ತಿದ್ದಾರೆ. ಈ ದಿವಸ ಈ ಬಾಬಿನಲ್ಲಿ ಉತ್ಪತ್ತಿ ಒಂದಕ್ಕೆ ಹತ್ತಾಗಿದೆ. ಆದ್ದರಿಂದ ಸರ್ಕಾರದವರು ಈ ಬಾಬಿನಿಂದ ಬರತಕ್ಕ ವರಮಾನದಲ್ಲಿ ಕನಿಷ್ಠ ಶೇ 50 ರಷ್ಟನ್ನಾದರೂ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇದಕ್ಕಾಗಿ ಮುನಿಸಿಪಲ್ ಮತ್ತು ಕಾರ್ಪೊರೇಷನ್ ಆಕ್ಟ್‌ಗಳನ್ನು ತಿದ್ದುಪಡಿ ಮಾಡಬೇಂದು ಹೇಳುತ್ತೇನೆ.

ಇನ್ನು ರೆವಿನ್ಯೂ ಸೈಟುಗಳನ್ನು ಮಾಡತಕ್ಕ ವಿಚಾರದಲ್ಲಿ ನಾವೆಲ್ಲರೂ ಮಾನ್ಯ ಸಚಿವರನ್ನು ಕಾಣಲು ಹೋಗಿದ್ದೆವು. ಅವುಗಳನ್ನು ಮಾಡಬಾರದೆಂಬ ವಿಷಯಕ್ಕೆ ಕೈಹಾಕಿ ಸುಮ್ಮನೆ ಇಲ್ಲದ ಗೊಂದಲಕ್ಕೆ ಅವಕಾಶ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ನಾನು ಕೇಳಿಕೊಳ್ಳುವುದು ಗಲಾಟೆಗೆ ಅವಕಾಶ ಕೊಡಬೇಡಿ ಎಂದು.

ಇನ್ನು ಇರತಕ್ಕ 71 ಹೌಸಿಂಗ್ ಕೋ . ಆ . ಸೊಸೈಟಿಗಳಲ್ಲಿ 36 ಸೊಸೈಟಿಗಳು ಕಾರ್ಮಿಕರಿಗೆ ಸೇರಿರುತ್ತವೆ. ಇವುಗಳಲ್ಲಿ ಯಾವುದು ಜನ್ಯುಯಿನ್ ಯಾವುದು ಅಲ್ಲ ಎಂಬುದನ್ನು ತಾವು ವಿಚಾರ ಮಾಡಿಕೊಳ್ಳಿ. ಆದರೆ ಈ ದಿವಸ ಈ ಸೊಸೈಟಿಗಳವರು ಅನೇಕರು ಸಾಲವನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಬೆಳೆಯುತ್ತಿರುವ ಬಡ್ಡಿಯನ್ನು ಕಟ್ಟುವುದಕ್ಕೆ ಈಗ ತೊಂದರೆಯಾಗಿದೆ. ಅದಕ್ಕೆ ಅದನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು ವಾಟರ್‌ಸಪ್ಲೈ ಅಂಡ್ ಸೂಯೆರೇಜ್ ಬೋರ್ಡಿನ ಬಗ್ಗೆ ಸರ್ಕಾರದವರು ಪ್ರೋಬ್ ಮಾಡಲೇ ಬೇಕು, ಅಲ್ಲಿ ಅನೇಕ ಇರ್ರೆಗ್ಯುಲಾರಿಟೀಸ್ ಇವೆ. ಅದಕ್ಕಾಗಿ ಒಂದು ಜುಡಿಷಿಯಲ್ ಪ್ರೋಬ್ ನಡೆಸಬೇಕೆಂದು ಹೇಳಿ ನನ್ನ ಮಂಗಳೂರು ಸ್ನೇಹಿತರು ಕೇಳಿರತಕ್ಕ ವಿಚಾರಕ್ಕೆ ಸರ್ಕಾರದವರು ಕೂಡಲೇ ಗಮನಕೊಡಬೇಕೆಂದು ಹೇಳುತ್ತೇನೆ.

With regard to the affairs of the Bangalore Water Supply and Sewerage Board, a judicial probe is necessary. Not only is there a bureaucratic attitude regarding the employees but also the way in which the whole thing is done is highly irregu ar. Irregular appointments are made. In respect of Cauvery Water Supply Scheme also such things are going on. Till such time as an enquiry is done, the concerned officers have to be suspended. You have to keep them under suspension.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ, ನಾನೀಗ ಸಭೆಯ ಮುಂದಿರತಕ್ಕ ಮುನಿಸಿಪಲ್ ಬೇಡಿಕೆಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತ, ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ.

ಬೆಂಗಳೂರು ನಗರ ಈ ದಿವಸ ಕಲ್ಯಾಣನಗರವಾಗಿ ಮೈಸೂರು ರಾಜ್ಯದ ರಾಜಧಾನಿ. ಅಷ್ಟೇ ಏಕೆ ಇಡೀ ಭಾರತದಲ್ಲೇ ಒಂದು ವೈಶಿಷ್ಟ್ಯತೆಯನ್ನು ಪಡೆದುಕೊಂಡಿರುವಂಥ ಸುಂದರ ನಗರ. ಈ ನಗರ ಕಾರ್ಪೊರೇಷನ್‌ಗೆ ಸುಮಾರು 8 ಕೋಟಿ ಉತ್ಪನ್ನವಿದೆ. ಅದರಲ್ಲಿ 3 ಕೋಟಿ ಸಿಬ್ಬಂದಿ ವೆಚ್ಚಕ್ಕೆ ಖರ್ಚಾಗುತ್ತಿದೆ. ಈ ಖರ್ಚು ಬಹಳ ದುಬಾರಿ. ಆದರೆ ಹೆಚ್ಚು ದಕ್ಷತೆಯ ಕಡೆಗೆ ಸರ್ಕಾರದ ಗಮನವನ್ನು ನಾನು ಸೆಳೆಯಬಯಸುತ್ತೇನೆ.

ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಸ್ಥಾಪನೆಯಾದುದು 1945 ರಲ್ಲಿ, ಇಲ್ಲಿಯವರೆಗೆ ಅದು 37 ಸಾವಿರ ಸೈಟುಗಳನ್ನೂ ಮತ್ತು ಇನ್ನು ಕೆಲವು ಕಟ್ಟಿದ ಮನೆಗಳನ್ನೂ ಹಂಚಿಕೆ ಮಾಡಿದ್ದಾರೆ. ಅದೇ ರೀತಿಯಲ್ಲಿ ಕೆಲವು ಖಾಸಗೀ ಸೊಸೈಟಿಗಳವರೂ ಕೂಡ ಕಳೆದ 5 ವರ್ಷಗಳಲ್ಲಿ ಸುಮಾರು 15 ಸಾವಿರ ಸೈಟುಗಳನ್ನು ಹಂಚಿಕೆ ಮಾಡಿದ್ದಾರೆ. ಇದೂ ಕೂಡ ಪ್ರಶಂಸನೀಯವಾದುದೇ. ಆದರೆ ಇತ್ತೀಚೆಗೆ ಸರ್ಕಾರದವರು ಕೆಲವು ಖಾಸಗೀ ಲೇಔಟುಗಳಿಗೆ ಅವಕಾಶ ಕೊಡಬಾರದೆಂದು ಹೇಳಿದ್ದಾರೆಂದು ಕೇಳುತ್ತೇನೆ. ಆದರೆ ಅದು ಸರಿಯಲ್ಲ. ಸರ್ಕಾರ

(ಶ್ರೀ ಕೆ. ಎಂ. ರುದ್ರಪ್ಪ)

ದವರು ತಮ್ಮ ತೀರ್ಮಾನವನ್ನು ಬದಲಾವಣೆ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಡವರು, ಮಧ್ಯಮ ವರ್ಗದವರಿಗೆ ಸಚಿವರು ಹೆಚ್ಚಿನ ಅನುಕೂಲ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ.

1-00 P. M.

ಇನ್ನೊಂದು ವಿಚಾರ. ಅದು ಡಿಪಾರ್ಟ್‌ಮೆಂಟ್ ಆಫ್ ಟೌನ್ ಪ್ಲಾನಿಂಗ್‌ಗೆ ಸಂಬಂಧ ಪಟ್ಟಿದೆ. ಇಲ್ಲಿ ಆಡಳಿತದ ದಕ್ಷತೆ ಹೆಚ್ಚಬೇಕು. ಸಿಟಿ ಸರಿಯಾಗಿ ಬೆಳೆಯುವುದಕ್ಕೆ ಅವಕಾಶ ಕೊಡದಿದ್ದರೆ ಅನೇಕ ಸಮಸ್ಯೆಗಳು ಉದ್ಭವಿಸುವುವು. ಜನಸಂಖ್ಯೆ ವಿಪರೀತವಾಗುವುದು. ಆದುದರಿಂದ ಕಟ್ಟುನಿಟ್ಟಾಗಿ ಕಾರ್ಯ ಮಾಡಬೇಕಾಗುವುದು. ಮೈಸೂರು ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಎಂಬ ಆಕ್ಟ್ ಇದೆ. ಈ ಆಕ್ಟನ್ನು ಹಾಸನ ಪಟ್ಟಣಕ್ಕೆ ಅನ್ವಯಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಕಾರಣ ಇಷ್ಟೇ, ಹಾಸನ—ಮಂಗಳೂರು ರೈಲ್ವೆ ಲಿಂಕ್ ಇದೆ, ಜನಸಂಖ್ಯೆ ಬೆಳೆಯುತ್ತಿದೆ. ಇಲ್ಲಿಗೆ ಆ ಆಕ್ಟನ್ನು ಅನ್ವಯಿಸಿದರೆ ಆ ಪಟ್ಟಣ ಸಮಗ್ರ ರೀತಿಯಲ್ಲಿ ಬೆಳೆಯಲು ಅನುಕೂಲವಾಗುವುದು. ಅದು ಪ್ರವಾಸಿಗರ ಕೇಂದ್ರ ಸಹ ಆಗಿದೆ. ಲೋಕ ವಿಖ್ಯಾತವಾದ ದೇವಸ್ಥಾನಗಳು ಹಾಸನ ಜಿಲ್ಲೆಯಲ್ಲಿರುವುದರಿಂದ ಅನೇಕ ಭಾಗಗಳಿಂದ ಪ್ರವಾಸಿಗರು ಬರುವರು. ಆ ಪಟ್ಟಣದ ಬೆಳವಣಿಗೆ ಯಾವರೀತಿ ಆಗಬೇಕಾಗಿತ್ತೋ ಆ ರೀತಿ ಆಗುತ್ತಿಲ್ಲ. ಕಾರಣ ಸರಿಯಾದ ಪ್ಲಾನಿಲ್ಲ ಮತ್ತು ಮುನಿಸಿಪಾಲಿಟಿಯ ಉತ್ಪತ್ತಿ ಕಡಮೆಯಾಗಿದೆ. ಸರಕಾರ ಅದಕ್ಕೆ ಹೆಚ್ಚು ಗ್ರ್ಯಾಂಟನ್ನು ಕೊಟ್ಟು ಆ ಪಟ್ಟಣವನ್ನು ಅಭಿವೃದ್ಧಿಮಾಡಬೇಕು. ಅಲ್ಲಿ ಸೊಳ್ಳೆಕಾಟ ವಿಪರೀತ ವಾಗಿದೆ. ಆದುದರಿಂದ ಪ್ರವಾಸಿಗರು ಅಲ್ಲಿ ತಂಗಲು ಇಷ್ಟಪಡುವುದಿಲ್ಲ. ಇದರಿಂದ ಹಾಸನದ ಹೆಸರು ಕೆಡುವುದಕ್ಕೆ ಕಾರಣವಾಗಿದೆ. ಇದನ್ನು ಹೋಗಲಾಡಿಸಲು ತೀವ್ರ ಗಮನ ಕೊಡಬೇಕು. ಇದಲ್ಲದೆ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಆಗಬೇಕು. ಅದಾಗಬೇಕಾದರೆ ಒಂದು ಸಮಗ್ರವಾದ ಪ್ಲಾನ್ ಮಾಡಬೇಕು. ಮೈಸೂರು ದೇಶದಲ್ಲಿ 217 ಪಟ್ಟಣಗಳೇನಿವೆ ಅವುಗಳಲ್ಲಿ 167ಕ್ಕೆ ಕುಡಿಯುವ ನೀರಿನ ಸೌಕರ್ಯ ಇದೆ, ಉಳಿದ ಕಡೆಗಳಲ್ಲಿ ಸರಿಯಾದ ಸೌಕರ್ಯವಿಲ್ಲ. ಹೊಟೇಲುಗಳಲ್ಲಿ ಗಲೀಜು ಇರುವುದರಿಂದ ನಗರ ನೈರ್ಮಲ್ಯ ಕೆಡುವುದು, ಆರೋಗ್ಯ ಕೆಡುವುದು. ಆದುದರಿಂದ ಹೆಚ್ಚಿನ ಆಸಕ್ತಿ ವಹಿಸಿ ಹೋಟೇಲುಗಳಲ್ಲಿ ನೈರ್ಮಲ್ಯದ ಬಗ್ಗೆ ಗಮನಕೊಡಬೇಕು. ಶುಚಿಯಾಗಿಲ್ಲದಿರುವ ಹೋಟೇಲುಗಳ ಲೈಸ್‌ನ್ಸನ್ನು ರದ್ದುಮಾಡಬೇಕು. ಈ ಬಗ್ಗೆ ತೀವ್ರ ಕಾರ್ಯ ಕ್ರಮ ಕೈಕೊಳ್ಳಬೇಕು.

ಇನ್ನೊಂದು ವಿಚಾರ. ಸಕಲೇಶಪುರ ಸುಂದರವಾದ ಪಟ್ಟಣವಾಗಿದೆ. ಅಲ್ಲಿ ನೀರಿನ ಸೌಕರ್ಯ ಸಾಲದು. 9 ಲಕ್ಷ ರೂಪಾಯಿಗಳ ಸ್ಕೀಂ ಮಂಜೂರಾಗಿದೆ. ಇದಕ್ಕೆ ತೀವ್ರ ಗಮನ ಕೊಟ್ಟು ಈ ಕಾರ್ಯವನ್ನು ಆಗಮಾಡಿಕೊಡಬೇಕು.

ಪ್ರಾಪರ್ಟಿ ಟ್ಯಾಕ್ಸ್ ಮತ್ತು ಆಕ್ಟ್ರಾಯಿನಿಂದ ಮುನಿಸಿಪಾಲಿಟಿಗಳಿಗೆ ಹೆಚ್ಚು ಆದಾಯ ಬರುವುದು. ಹೆಚ್ಚು ಆದಾಯ ತರುವ ಆಕ್ಟ್ರಾಯನ್ನು ರದ್ದುಮಾಡುವುದಕ್ಕೆ ಮುಂಚೆ ಅದಕ್ಕೆ ಬದಲಾಗಿ ಬೇರೆ ಆದಾಯ ಬರುವ ಮೂಲಗಳನ್ನು ಹುಡುಕಿ ನಂತರ ರದ್ದು ಮಾಡಬಹುದು. ಆದ್ದರಿಂದ ಈಗ ಇರುವುದನ್ನು ಮುಂದುವರೆಸಬೇಕು. ಇಷ್ಟು ತಿಳಿಸಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಉತ್ತರ ಸೋಮವಾರ ಕೊಡಬಹುದು. ಅಂದು ಮಾರ್ನಿಂಗ್ ಸೆಷನ್ ಇಟ್ಟು ಉತ್ತರ ಕೊಟ್ಟ ನಂತರ ಪ್ರಶ್ನೋತ್ತರ ವಗೈರೆ ಮಧ್ಯಾಹ್ನ ಇಟ್ಟುಕೊಳ್ಳಬಹುದು.

ಉಪಾಧ್ಯಕ್ಷರು.—ಅದಕ್ಕೆ ಅವಕಾಶವಿಲ್ಲ.

† **Sri C. M. ARUMUGAM** (KGF).—Mr. Deputy Speaker, I join with Mr. Nagaraj in requesting you to direct the Minister to reply to the debate on Monday Morning if possible because there are other Members to speak......

Mr. DEPUTY SPEAKER.—All these matters have been discussed and agreed upon and it is final. Please do not rake up things which have been settled.

SRI C. M. ARUMUGAM.—Sir, As stated by the Leader of the Opposition, I welcome some of the important measures undertaken by the Hon'ble Minister so far as Municipal workers are concerned. He has passed certain rules under which municipal employees, particularly the sweepers and scavengers, who were neglected all these years, will be deemed as permanent employees of the local bodies and they will be given service gratuity and pension. The previous Governments were only looking after the welfare of the officials who were paid high salary. But they were neglecting the poorer classes. These sweepers and scavengers were treated as casual labour. They were not entitled to servic gratuity or pension. So I compliment them for having got these rules amended providing for service gratuity and pension. With this, Government must also take action against the municipalities which are reluctant to provide uniforms. I hear it is so in Mangalore. You must take drastic action. Reactionary forces are also in important positions in the Municipal administrations of the State. Therefore the Minister and the Government should take action. You must supersede the municipalities who refuse to look after the welafare of the poor, refuse to provide uniform to sweepers and scavengers. To that end, the Municipalities Act should be suitably amended because it was drafted by these reactionary people who wanted to control and dictate to municipalities in the State. It needs a lot of revision. The Municipalities Act says that for every population of 1000 there should be one sweeper.

MR. DEPUTY SPEAKER.—The Assembly consisting of representatives of people has passed the Bill.

SRI C. M. ARUMUGAM.—The Assembly is sovereign and I have no right to criticise. What I submit is that instead of 1000 population, it must be said that there must be one sweeper for every 500 of population. It will increase the employment potential of sweepers and also it will help to keep the cities clean within the municipal area. Coming to Municipal Administration, regarding the Water Supply and Sewerage Board, the Hon'ble Leader of the Opposition said that this Board was constituted by Sri Veerendra Patil four years ago. The Patil Ministry, which was ineffective, never called for a report from the Water Board. Probably they were afraid of the Chairman and Members of the Water Board for four years. The Board never submitted any report on the administration as well as its working. It is provided in the Act that such a report should be submitted to Government. In the same Act, Government have certain powers even to take action to remove or suspend the Member of the Board or even the Chairman, if they do not submit the report. But this Government is in saddle only for three months and it is too small a period. The previous Government has utterly failed in not pulling up the administration of the Board. Now it is time for the Government to take action. If the Act is defective, it must be amended. In the Act if there is a provision made, why the report of the Board is not placed before the House ? I ask the Minister.

(SRI C. M. ARUMUGAM)

Sir, on the last occasion when I was talking on the Municipal Administration, I made certain allegations against one officer namely the Engineer-in-Chief. I may tell in this House that this person gave a statement saying that he had no property when he was working as Superintending Engineer, Sharavathi; but now I have also said that in course of time, from 11-5-1968 to 10-1-1969 this gentleman has acquired a lot of property.

The Santhanam Committee have stated that if an officer amasses disproportionate assets, he must take the permission of the Government. But here it is also mentioned that he has not taken the permission of the Government. I am not referring to the present Government. The previous Government has not taken any action against him for not taking permission to acquire this property disproportionate to his earnings. The Santhanam Committee says:

> "No Government servant shall, except with the previous knowledge of the prescribed authority acquire or dispose of any immovable property by lease, mortgage, purchase, Sale, gift or otherwise either in his own name or in the name of any member of his family."

In general law, a member of the family includes wife, father, mother, son, sisters and brothers and relatives. According to the Santhanam Committee, I believe, all those I have mentioned come under family members. It is for the Minister to define who exactly are the members of a family.

This Officer has acquired lot of property in a few years' time. He has purchased land to the extent of 122 acres in a place called Sindhnoor in Raichur District in the name of his maternal uncle. Two or three contractors are involved in this transaction. Ultimately he purchased this land at a cost of Rs. 35,000. He induced his relatives to give a power-of-attorney to his maternal uncle. On 4-3-1968 in Bangalore registration was done for all the 122 acres. His maternal uncle has sold the land at a cost of Rs. 1500 per acre. This Officer purchased a Car No. ADX 19968 bearing Andhra registration. This car has also passed two hands of contractors. The car now bears Mysore No. MYO 1763. Ultimately this Officer instructed the Contractor to change the registrati n of the car to his maternal uncle's name. He used the car for two years. For the present, the car is in Belgaum and is being used by his brother. This Officer has again purchased an estate a farm, very close to Bangalore. He has got a house worth Rs. 4 lakhs. There is something fishy in the registration of the car. His maternal uncle gave the address: "300, Upper Palace Orchard" before the registration authority. There is no such address at all; a wrong address has been given. The Government has suspended so many Engineers. I don't mind if they suspend some more Engineers if they

are found to be guilty. I wish they suspend the auditors of the Finance Department who have colluded with them. The Government should suspend non-technical officers also. If the Mayor is involved in any of those transactions, he may also be Suspended if Government have power to do so. There are two parties in the Congress (R) itself and one party is headed by the Mayor and the other by somebody else. Even though the Congress Legislature Party had directed its Corporators not to contest the Mayoral election, the present Mayor and his followers disobeyed the direction and the result was the present Mayor was elected. So Congress itself is a divided house. That apart, the Government must take action against this Officer, namely, the Engineer in-Chief who is also the Additional Secretary to Government, P.W.D., and the Chairman, Mysore Water Supply and Sewerage Board.. I may also say here that it is not possible for the Government to bring water to Bangalore by December 1973 because the work is sub-standard. Sri Deve Gowda and I have seen the quality of work executed and have brought cement concrete pieces from the lining tc pipes. I will pass them to the Minister. Let him subject them to laboratory test and find out if there has been proper and proportinate mixture of cement and sand. The pipes have been buried without plastering. With regard to the work carried out by the Water Supply Board in regard to the Cauvery water supply scheme, a challenge has been thrown by a retired Chief Engineer to the members of the Board. When an allegation is made against an officer, the Government should have asked that Officer to sue the person who has made allegation in a Court. Why did not this Engineer-in-Chief go to the Court against that retired Chief Engineer who has made allegations against him ? That retired Chief Engineer did not make the allegations in this House or the other House and was not entitled to any protection in the eye of law. So this Engineer-in-Chief could have gone to the Court. Why did he not go to the Court. The Minister must also note down that if there is any charge against a Government Officer and if he wants to go to the Press, he must take the permission of the Government, according to the Santhnam Committee Report. The relevant portion reads thus :

> " Vindication of facts and character of Government Servants in Government Service : No Government servant shall, except with the previous sanction of the Government, have recourse to any court or to the Press for the vindication of any official act which has been the subject matter of adverse criticism or talk of defamatory character. "

So this Engineer-in-Chief should have taken the previous permission of the Government to rush to the Press. Has he done so ? He has induced one of his colleagues in the Institution of Enginneers to write a letter to the Press in regard to the speech delivered by him on the 7th July. Even for that, he has to take the permission of the Government. Has he taken permission ? This Officer is indulging in politics ; he is threatening the Government ; he is threatening the Press ; he is

(SRI C. M. ARUMUGAM)

threatening the Assembly. On this Officers's behalf, Sri S. G. Ramachandra, Chairman, The Institution of Engineers, Mysore Centre, issues a Press statement to correct the impression created by this Officer by his speech delivered at the Institution of Engineers. The abovesaid Chairman states that this Officer has not made the statement attributed to him. What right has this Chairman to make such a statement to the Press? There is also a threat to the Press. If you call for the Press report, we can know whether this Engineer-in-Chief has made the statement ascribed to him or not. The Chairman Sri Ramachandra writes to the Press, among other things, as follows :

> "Mr. Magdum further made a fervent appeal that Government would always protect honest and efficient officers who need not be afraid of any dent in their records and that for such officers, nobody can bulldoze nor demolish their morale."

You must kindly mark the word 'bulldoze' used by this Officer.

SRI H. D. DEVE GOWDA.—On the other day when I moved the privilege motion the Hon. Speaker stated that the officer has denied having used that word. I would like to know from my hon. friend Sri Armugum the letter which he is referring to is written by the same officer or any other person? Whether it is a letter written by Mr. Magdum or by some other person? On receiving a denial letter from the officer concerned, the Chair ruled out that there is no privilege. From the proceedings of the Institute of Fngineers it should have been verified before coming to any conclusion. There is the proceedings book as also the tape-record there. If these had been called for and verified that would have helped us.

MR. DEPUTY SPEAKER.—Once a matter is raised it should be raised in all its entirety. If it was not raised in entirety the person who raised it will have to take the responsibility. The ruling on that subject has already been given by the Speaker and the matter is laid at rest. The matter which has been referred to by hon. member Sri Armugum is about the Chairman of the Institute of Engineers. This matter is completely *De Novo*. This cannot be tagged on to certain matters which are laid at rest.

SRI H. D. DEVE GOWDA.—If sufficient reasons are there I think the Chair could re-open the issue. The information now given by my hon. friend Sri Arumugum if it isgoing to be useful for the revision of the rulings already given by the Chair, it could be done.

MR. DEPUTY SPEAKER.—The information now furnished is not sufficient or justified to reconsider the ruling already given on the subject.

SRI C. M. ARUMUGAM.—Sir, I was saying that this Chief Engineer addressed the meeting of Engineers and used that word. Finally I submit that there should be a probe into the property of this particular

officer. I repeat that he has furnished a statement saying that he has no property. Secondly, it is not possible for the Board to bring water to Bangalore by the end of December 1974. I appeal and demand the Hon. Minister to order for a probe into these two aspects.

†ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಅಧ್ಯಕ್ಷರೇ, ಪೌರಾಡಳಿತ ಸಚಿವರು ಮಂಡಿಸಿರ ತಕ್ಕ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತ ಕೆಲವು ಮಾತುಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಸೈಟುಗಳನ್ನು ಮುಫತ್ತಾಗಿ ಹಂಚಲು ಸರ್ಕಾರದವರು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಹಾಗೆಯೇ ದೊಡ್ಡ ದೊಡ್ಡ ಪಟ್ಟಣ ಗಳಲ್ಲಿ, ಮೈಸೂರು, ಬೆಂಗಳೂರು ಮುಂತಾದ ಕಡೆ ಬಡ ಜನರಿಗೆ, ಯಾರಿಗೆ ಸೈಟುಗಳಿಲ್ಲವೋ ಅಂಥವರಿಗೆ ಸೈಟುಗಳನ್ನು ಹಂಚಲು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದೇನೆ.

ರೂರಲ್ ಹೌಸಿಂಗ್ ಸೆಲ್ ಎಂದು ಏನಿದೆ, ಬಡ ಜನತೆ ಸರ್ಕಾರದಿಂದ ಏನೊಂದು ನಿರೀಕ್ಷೆ ಮಾಡುತ್ತಿದೆ ಅಷ್ಟು ತ್ವರಿತವಾಗಿ, ಅಷ್ಟೊಂದು ವೇಗದಿಂದ ಅಲ್ಲಿ ಕೆಲಸಕಾರ್ಯಗಳು ನಡೆಯುತ್ತಿಲ್ಲ. ಇದಕ್ಕೆ ಅನೇಕ ರೀತಿಯಲ್ಲಿ ಅಡಚಣೆಗಳು ಬರುತ್ತಿವೆ, ಅದು ಅಧಿಕಾರಿಗಳಿಂದ ಇರಬಹುದು. ಕಾನೂನುಗಳಿಂದ ತೊಡಕು ಇರಬಹುದು. ಹೆಚ್ಚಿನ ರೀತಿಯಲ್ಲಿ, ಬಹಳ ತ್ವರಿತವಾಗಿ ಬಡ ಜನತೆಗೆ ಆದಷ್ಟು ಬೇಗ ವಾರ್ ಫುಟಿಂಗ್ ಮೇಲೆ ಕ್ರಮ ತೆಗೆದುಕೊಂಡು ಗ್ರಾಮಾಂತರ ಪ್ರದೇಶದಲ್ಲಿ ಸೈಟು ಗಳನ್ನು ಹಂಚಬೇಕೆಂದಿರುವ ರೀತಿಯಲ್ಲಿ, ಬಡ ಜನತೆಗೆ ವಾಸ ಮಾಡಲಕ್ಕೆ ಅನುಕೂಲವಾಗುವ ರೀತಿ ಯಲ್ಲಿ ಮನೆಗಳನ್ನು ರೂರಲ್ ಹೌಸಿಂಗ್‌ಸೆಲ್ ಮುಖಾಂತರ ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಸೂಚಿಸುತ್ತೇನೆ.

ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಜನಗಳಿಗೆ ಮನೆಗಳನ್ನು ಕಟ್ಟಿಕೊಡುವುದರಲ್ಲಿ ಅನೇಕ ತೊಂದರೆಗಳಿವೆ. ಬಹುಶಃ ಅನೇಕ ಜನರು ಈಗ ಮನೆಗಳನ್ನು ಕಟ್ಟಲಿಕ್ಕೆ ಮುಂದೆ ಬರು ತ್ತಿದ್ದಾರೆ. ಅಂಥ ಜನಗಳಿಗೆ ಈ ಹೊತ್ತಿನ ದಿವಸ ಅನೇಕ ಸೌಕರ್ಯಗಳನ್ನು ಒದಗಿಸಿ, ಎಸ್ಟಿ ಮೇಟುಗಳನ್ನು ಚೆಕ್ ಮಾಡಿಸಿಕೊಡುವುದರಲ್ಲಿ, ಮತ್ತು ಸೊಸೈಟಿಗಳವರು ಮನೆಗಳಿಗೆ ಕೊಡಲು ಮಂಜೂರಾಗಿರುವ ಹಣವನ್ನು ಒಂದೊಂದು ಸ್ಟೇಜ್ ಕೆಲಸವಾದ ಕೂಡಲೇ ಕಂತುಗಳಲ್ಲಿ ಕೊಡುವುದರ ಬಗ್ಗೆ ಹೆಚ್ಚು ಗಮನವನ್ನು ಸೇವಾ ಮನೋಭಾವದಿಂದ ಅಧಿಕಾರಿಗಳು ಮತ್ತು ಖಾಸಗಿಯವರು ಕೊಡಬೇಕು. ಸಾಲ ಕೊಟ್ಟ ದಿನದಿಂದ ಮನೆಯನ್ನು ಪೂರೈಸುವ ಕೆಲಸ ಬಹಳ ಬೇಗ ನಡೆಯುವಂತೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಟ್ಟು, ಹರಿಜನ ಗಿರಿಜನರಿಗೆ ಮನೆ ಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ಕೂಡ ಸರ್ಕಾರದ ಗಮನ ಹೆಚ್ಚಾಗಿರಬೇಕೆಂದು ಸೂಚಿಸುತ್ತೇನೆ.

ಮೈಸೂರು ಮುನಿಸಿಪಾಲಿಟಿಯನ್ನು ಕಾರ್ಪೊರೇಷನ್ ಮಾಡಬೇಕೆಂದು ಅನೇಕ ವರ್ಷ ಗಳಿಂದಲೂ ಆ ಮುನಿಸಿಪಾಲಿಟಿ ಮತ್ತು ಮೈಸೂರಿನ ಜನತೆ ಬೇಡಿಕೆಯನ್ನು ಸರ್ಕಾರದ ಮುಂದೆ ಇಡುತ್ತಿದ್ದಾರೆ. ಮೈಸೂರು ಮುನಿಸಿಪಾಲಿಟಿ ಕಾರ್ಪೊರೇಷನ್ ಆಗುವುದಕ್ಕೆ ಯೋಗ್ಯವಾಗಿ, ಹೆಚ್ಚಿನ ರೀತಿಯಲ್ಲಿ ಜನಸಂಖ್ಯೆ ಬೆಳೆದಿದೆ. ಅದರ ಸುತ್ತ ಮುತ್ತ ಇರುವ ರಮಣೀಯ ಪ್ರದೇಶಗಳ ಆಡಳಿತ ವ್ಯವಸ್ಥೆ ಸರಿಯಾಗಿಲ್ಲದ್ದರಿಂದ ಅಲ್ಲಿಗೆ ಕಾರ್ಪೊರೇಷನ್ ಬೇಕು. ಮೈಸೂರು ನಗರದ ಅಭಿವೃದ್ಧಿಯ ದೃಷ್ಟಿಯಿಂದ ಅಲ್ಲಿ ಕಾರ್ಪೊರೇಷನ್ ಆಗಬೇಕೆಂದು ಜನತೆ ಕೇಳುತ್ತಿರುವುದರಿಂದ ಅವರ ಬೇಡಿಕೆಯನ್ನು ಈಡೇರಿಸಿಕೊಡಬೇಕು. ಅಲ್ಲಿ ಮುನಿಸಿಪಲ್ ಚುನಾವಣೆಗಳು ಹತ್ತಿರ ವಾಗುತ್ತಿವೆ. ಚುನಾವಣೆಗೆ ಮುಂಚೆಯೇ ಕಾರ್ಪೊರೇಷನ್ ಆಗಿ ಮಾಡಬೇಕು. ಹಾಗೆ ಮಾಡಲು ಸಾಧ್ಯವಾಗದೆ ಇದ್ದರೆ ಚುನಾವಣೆಯಾದ ಕೂಡಲೇ ಮುನಿಸಿಪಾಲಿಟಿಯನ್ನು ಕಾರ್ಪೊರೇಷನ್ ಆಗಿ ಮಾರ್ಪಡಿಸಲು ಸರ್ಕಾರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅನೇಕ ಸಣ್ಣ ಸಣ್ಣ ಮುನಿಸಿಪಾಲಿಟಿಗಳಲ್ಲಿ ನೀರಿನ ಸೌಕರ್ಯದ ಬಗ್ಗೆ ಹೆಚ್ಚಿನ ಗಮನವನ್ನು ಆ ಮುನಿಸಿಪಾಲಿಟಿಗಳು ಕೊಡುತ್ತಿಲ್ಲ. ಬಹುಶಃ ಹಣದ ಅಭಾವದಿಂದ ಹೀಗಾಗಿದೆ ಮತ್ತು ಅನೇಕ ಸಾಲಗಳನ್ನು ಮುನಿಸಿಪಾಲಿಟಿಗಳು ಮಾಡಿಕೊಂಡಿವೆ. ಹಣದ ಅಭಾವದಿಂದ ಅವರು ಸರ್ಕಾರದ ಬಳಿ ಸಾಲಕ್ಕೆ ಬಂದರೆ ಸರ್ಕಾರದವರು ಸಾಲವನ್ನು ಕೊಡುತ್ತಿಲ್ಲ. ಮುನಿಸಿಪಾಲಿಟಿಗಳು ಸರ್ಕಾರಕ್ಕೆ ಹಣವನ್ನು ಕೊಡಬೇಕಾಗಿದ್ದರೂ ಮುನಿಸಿಪಾಲಿಟಿಗಳಿಗೆ ನೀರನ್ನು ಒದಗಿಸುವುದರಲ್ಲಿ ವಿಶೇಷ ರೀತಿಯಿಂದ ಪರಿಶೀಲನೆ ಮಾಡಿ ಮುಖ್ಯವಾಗಿ ಅಲ್ಲಿ ವಾಸ ಮಾಡುವ ನಾಗರಿಕರಿಗೆ ನೀರನ್ನು ಒದಗಿಸಿಕೊಡುವುದು ಸರ್ಕಾರದ ಹಾಗೂ ಸ್ಥಳೀಯ ಆಡಳಿತವನ್ನು ವಹಿಸಿಕೊಂಡಿರುವ ಪೌರ

ಇನ್ನು ಬೆಂಗಳೂರಿಗೆ ಸೇರಿದ 36 ಹಳ್ಳಿಗಳ ಪರಿಸ್ಥಿತಿಯನ್ನು ತಮ್ಮ ಗಮಣಕ್ಕೆ ತರುತ್ತೇನೆ. ಈವೊತ್ತು, ಆ ಹಳ್ಳಿಗಳ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅವುಗಳ ಕೆಲವು ಚಿತ್ರಗಳನ್ನು ತಮಗೆ ಕಳುಹಿಸುತ್ತೇನೆ, ಆ ಹಳ್ಳಿಗಳಲ್ಲಿ ನೀರು ಇಲ್ಲ, ಬರೀ ಗುಡಿಸಲುಗಳು ಇವೆ, ರ್‍ಯಾವೆಟರಿ ಕೂಡ ಇಲ್ಲ. ಅಲ್ಲಿಯ ಜನರು, ಲೈಟ್ ನೋಡಿಯೇ ಇಲ್ಲ. ಆದರೂ ಈ ಹಳ್ಳಿಗಳು ಕಾರ್ಪೋರೇಷನ್‌ಗೆ ಸೇರಿವೆ. ಹರಿಜನರ ಉದ್ಧಾರಮಾಡುತ್ತೇವೆ, ಅಂತ ಬೀದಿ ಬೀದಿಯಲ್ಲಿ ಉದ್ದ ಉದ್ದವಾಗಿ ಭಾಷಣ ಬಿಗಿಯುತ್ತೀರಿ. ತಾವು ಈವೊತ್ತು ಈ ಸ್ಥಳಗಳಲ್ಲಿ ಏನು ಮಾಡಿದ್ದೀರಿ. ಹೇಳಿ. 35 ಹಳ್ಳಿಗಳ ಪರಿಸ್ಥಿತಿ ಸಂಪೂರ್ಣವಾಗಿ ಚಿಂತಾಜನಕವಾಗಿದೆ. ಸಾಮಾನ್ಯ ವ್ಯವಸ್ಥೆ ಅಂದರೆ, ನೀರು ಇಲ್ಲ, ರಸ್ತೆ ಇಲ್ಲ, ಲ್ಯಾವೇಟರಿ ಇಲ್ಲ, ಹೆಂಗಸರು ಹಗಲು ಹೊತ್ತು ಲ್ಯಾವೇಟರಿಗೆ ಹೋಗುವ ಪರಿಸ್ಥಿತಿ ಇಲ್ಲ. ಪಬ್ಲಿಕ್ ಲ್ಯಾವೇಟರಿ ಕಲ್ಪಿಸಿದ್ದಾರೆಯೇ ಅಂದರೆ, ಇಲ್ಲ. ತಾವು ಬರುವುದಾದರೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಈ 35 ಹಳ್ಳಿಗಳಲ್ಲಿ ಜನರು ಪಡುತ್ತಿರತಕ್ಕ ಕಷ್ಟ ನರಕಯಾತನೆ ನೋಡಿದರೆ, ತಮಗೂ ಕಣ್ಣೀರು ಬರುತ್ತದೆ. ಈ ಹಳ್ಳಿಗಳ ಚಿತ್ರಗಳನ್ನು ತಮಗೆ ಕಳುಹಿಸುತ್ತೇವೆ. ಅಲ್ಲಿ ಬಹಳ ಕೆಟ್ಟ ವಾತಾವರಣ ನಿರ್ಮಾಣವಾಗಿದೆ, ಎಂದು ಸರ್ಕಾರದ ಗಮನಕ್ಕೆತರುತ್ತೇನೆ. ಇದನ್ನು ಸರ್ಕಾರ ಸಂಪೂರ್ಣವಾಗಿ ಸರಿಪಡಿಸಲಿಕ್ಕೆ ಸಾಧ್ಯವಾಗದಿದ್ದರೆ, 35 ಹಳ್ಳಿಗಳು ಕಾರ್ಪೋರೇಷನ್‌ಗೆ ಸೇರಿಲ್ಲ ಎಂದು ಹೇಳಿ ಬಿಡಿ. ಅವುಗಳನ್ನು ಸೇರಿಸಿಕೊಂಡ ಮೇಲೆ ಒಂದು ಸುಂದರ ನಗರ ಮತ್ತೊಂದು ಕೊಳಚೆ ನಗರ ಎಂದು ಎರಡು ಡಿವಿಜನ್ ಮಾಡಿದ್ದೀರಿ. ಮೇಯರ್ ಅವರು ಮೊನ್ನೆ ಉದ್ದ ಗೌನ್ ಹಾಕಿಕೊಂಡು ರಾಷ್ಟ್ರಪತಿಗಳನ್ನು ಈ ಸುಂದರ ನಗರಕ್ಕೆ ಕರೆದುಕೊಂಡು ಹೋಗಿ ಅವರ ಜೊತೆ ಫೋಟೊ ತೆಗೆಸಿಕೊಂಡಿದ್ದಾರೆ. ಈ 35 ಹಳ್ಳಿಗಳಲ್ಲಿ ಬಡ ಜನರು ಇರುವ ಕಡೆ ಹೋಗಬೇಕಾಗಿತ್ತು. ಹರಿಜನರ ಕಾಲೋನಿಗೆ ಮೊದಲು ಜಾಗ ಕೊಟ್ಟು ಅನಂತರ ಅದನ್ನು ಬೇರೆ ರೀತಿ ಉಪಯೋಗಿಸಬೇಕೆಂದು ಅಲ್ಲಿಗೆ ಬುಲ್‌ಡೋಸ್‌ರ ತಂದಿರಿ. ನಾನು ಹೇಳಿದೆ ಈ ಜಾಗವನ್ನು ಹರಿಜನರ ಕಾಲೋನಿಗೆ ಕೊಟ್ಟಿಲ್ಲ ಎಂದರೆ ನಾನೇ ಬುಲ್‌ಡೋಸ್‌ರ್ ಕೆಳಗೆ ಮಲಗುತ್ತೇನೆ, ಇದು ನನ್ನ ಕ್ಷೇತ್ರಕ್ಕೆ ಸೇರಿದ ಪ್ರದೇಶ ಎಂದು. ಇನ್ನು ಜಯನಗರದಲ್ಲಿ 45 ಲಕ್ಷ ರೂಪಾಯಿನಲ್ಲಿ ಕಾರ್ಪೋರೇಷನ್‌ನವರು ದೊಡ್ಡ ಆಸ್ಪತ್ರೆಯನ್ನು ಕಟ್ಟುತ್ತಿದ್ದಾರೆ. ಆ ಬಿಲ್ಡಿಂಗ್ ಕೊಟ್ಟಾಗ ಕಂಟ್ರಾಕ್ಟ್‌ದಾರನೇ ಕಬ್ಬಿಣ ತರಬೇಕು ಎಂದು ಅಗ್ರಿಮೆಂಟ್ ಇರುವುದು. ಅಗ್ರಿಮೆಂಟಿನಲ್ಲಿ ಕಂಟ್ರಾಕ್ಟ್‌ದಾರ ಕಬ್ಬಿಣ ತರಬೇಕು ಎಂದು ಇರುವುದನ್ನು ಕಿತ್ತು ಹಾಕಿ ಬಿಟ್ಟಿದ್ದಾರೆ. ಈವೊತ್ತು ಕಂಟ್ರಾಕ್ಟ್‌ರು ಕಾರ್ಪೋರೇಷನ್ ಮೇಲೆ ತಿರುಗಿಬಿದ್ದಿದ್ದಾನೆ. ಕಾರ್ಪೋರೇಷನ್‌ನವರೇ ಕಬ್ಬಿಣ ಕೊಡಬೇಕೆಂದು ಕಂಟ್ರಾಕ್ಟ್‌ದಾರ ಕೇಳುತ್ತಿದ್ದಾನೆ. ಅವನೇ ಕಬ್ಬಿಣ ತೆಗೆದುಕೊಂಡು ಮಾಡಬೇಕು ಎಂದಿದ್ದ ಅಗ್ರಿಮೆಂಟನ್ನು ರಾಜಕೀಯ ಮಾಡಿ ಕಿತ್ತು ಹಾಕಿದ್ದಾರೆ. ಈವೊತ್ತು ಆ ಅಗ್ರಿಮೆಂಟ್ ಇಲ್ಲ. ಅವನು ಕೋರ್ಟಿಗೆ ಹೋಗುತ್ತಾನೆ. ಇದರ ಬಗ್ಗೆ ತನಿಖೆ ನಡೆಸಬೇಕು. ನಮ್ಮ ಮೇಯರ್‌ಗೆ ಪಿಸ್ತೂಲ್ ಕೊಟ್ಟಿದ್ದಾರೆ. ಅವರು ಈ ಊರಿಗೆ ಬಂದಾಗ ಈಗ ಇರತಕ್ಕ ಮಾನ್ಯ ಮೇಯರ್‌ರವರಿಗೆ ಒಂದು ಇಂಚು ಆಸ್ತಿ ಇರಲಿಲ್ಲ. ಇವೊತ್ತು ಅವರಿಗೆ ಕೇಂಗೇರಿ ರಸ್ತೆಯಲ್ಲಿ 8 ಎಕರೆ ಆಸ್ತಿ ಇದೆ. ಇದು 8 ಲಕ್ಷಕ್ಕೆ ಹೋಗುತ್ತದೆ. ತ್ಯಾಗರಾಜನಗರದಲ್ಲಿ ಒಂದು ಮನೆಯನ್ನು ಕಟ್ಟುತ್ತಿದ್ದಾರೆ. ಅವರು ಪ್ಲಾನಿಗೆ ವಿರುದ್ಧವಾಗಿ ಮನೆ ಕಟ್ಟುತ್ತಿದ್ದಾರೆ. ದೇಶದಲ್ಲಿ ಎಲ್ಲರೂ ಪ್ಲಾನು ಪ್ರಕಾರ ಮನೆ ಕಟ್ಟಬೇಕು. ಆದರೆ ಪ್ಲಾನಿಗೆ ವಿರುದ್ಧವಾಗಿ ಮೇಯರ್‌ರವರು ಮನೆಯನ್ನು ಕಟ್ಟಿಸುತ್ತಿದ್ದಾರೆ. ಅದಕ್ಕೆ ಒಂದೂವರೆ ಲಕ್ಷ ರೂಪಾಯಿ ಬೆಲೆ ಆಗುತ್ತದೆ. ಅವರಿಗೆ ಎಲ್ಲಿಂದ ಈ ಆಸ್ತಿ ಬಂತು ಎಂದು ಕೇಳುತ್ತೇನೆ. ಇದರ ಬಗ್ಗೆ ತನಿಖೆ ನಡೆಸುವ ಶಕ್ತಿ ಸರ್ಕಾರಕ್ಕೆ ಇದೆಯೇ ಎಂದು ಕೇಳುತ್ತೇನೆ. ಬೇಲಿಯೇ ಎದ್ದು ಹೊಲವನ್ನು ಮೇಯುವ ರೀತಿ ಆಗಿದೆ. ಸಾಮಾನ್ಯ ಬಡವನು ಗುಡಿಸಲನ್ನು ಕಟ್ಟಿಕೊಂಡರೆ ನೀವು ಬಂದು ಲೈಸನ್ಸ್ ಇಲ್ಲದೆ ಕಟ್ಟುತ್ತಿದ್ದೀರಿ, ಎಂದು ಹೇಳಿ ಅವನ್ನು ಡೆಮಾಲಿಷ್ ಮಾಡುತ್ತೀರಿ. ಬೆಂಗಳೂರು ಸಿಟಿ ಕಾಂಗ್ರೆಸ್ಸಿನ ಅಧ್ಯಕ್ಷರು ಸುಭಾಸ್ ನಗರದಲ್ಲಿ ಕಾರ್ಪೋರೇಷನ್ ಲೈಸನ್ಸ್ ಇಲ್ಲದೆ ಒಂದೂವರೆ ತಿಂಗಳ ಕಾಲ ನ್ಯಾಷನಲ್ ಫೇರ್ ನಡೆಸಿದರು. ಸರ್ಕಾರದವರೇ ಕುಮ್ಮಕ್ಕು ಕೊಟ್ಟು ಅಲ್ಲಿ ಲಕ್ಷಾಂತರ ರೂಪಾಯಿ ಸ್ವಾರ್ ಇಟ್ಟಿದ್ದೀರಿ. ಆದರೆ ಬಡವ ಮನೆ ಕಟ್ಟಿಕೊಂಡರೆ ಅದನ್ನು ಒಡೆಸುವುದಕ್ಕೆ ಹೋದಿರಿ. ಒಂದೂವರೆ ತಿಂಗಳ ಕಾಲ ಲೈಸೆನ್ಸ್ ಇಲ್ಲದೆ ನಡೆಸಿದಂಥ ನ್ಯಾಷನಲ್ ಫೇರ್ ಬಗ್ಗೆ ತಾವು ತನಿಖೆ ನಡೆಸಿದಿರಾ? ಖಂಡಿತ ನಡೆಸಲಿಲ್ಲ. ಅದೇ ಸರ್ಕಾರಿ ಜಾಗವನ್ನು ಒಂದು ಸರ್ಕಸ್ಸಿಗೆ ಲೀಸ್‌ಗೆ ಕೊಟ್ಟರು ಅದು ನಿಮ್ಮ ಗಮನಕ್ಕೆ ಬಂದಿದೆಯೋ? ಎಂ.ಎಸ್.ಆರ್.ಟಿ.ಸಿ. 10-12 ಸಾವಿರ ರೂಪಾಯಿ ಬಾಕಿ ಕೊಡಲಿಲ್ಲ. ದೇಶದಲ್ಲಿ ಭ್ರಷ್ಟಾಚಾರ ತೆಗೆಯುತ್ತೇವೆ, ಭ್ರಷ್ಟಾಚಾರ ಒಡಿಸುತ್ತೇವೆ ಎಂದು ಏತಕ್ಕೆ ಉದ್ದುದ್ದವಾಗಿ ಭಾಷಣ ಮಾಡುತ್ತೀರಿ? ಧೈರ್ಯವಿಲ್ಲದಿದ್ದರೆ ರಾಜಿನಾಮೆ ಕೊಡುತ್ತೀರಾ? ಆ ಮಾತು ಒತ್ತಾಯ ಮಾಡದಿದ್ದರೆ ನನ್ನ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

(ಶ್ರೀ ಕೆ. ಬಿ. ಶಿವಯ್ಯ)

ಸಮಿತಿಗಳ ಕರ್ತವ್ಯ. ಎಲ್ಲೆಲ್ಲಿ ನೀರಿನ ಸೌಕರ್ಯವಿಲ್ಲವೋ ಅಂಥ ಕಡೆ ನೀರನ್ನು ಒದಗಿಸುವುದಕ್ಕೆ ಸಾಲವನ್ನು ಅಥವಾ ವಿಶೇಷ ನೆರವನ್ನು ಕೊಟ್ಟು ನೀರು ಒದಗಿಸುವ ಕಾರ್ಯಕ್ರಮಕ್ಕೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

1-30 P.M.

ಗ್ರಾಮಾಂತರಗಳಲ್ಲಿ ಬಾವಿಗಳನ್ನು ತೋಡಿಸಿಕೊಳ್ಳುವ ರೂರಲ್ ವಾಟರ್ ಸಪ್ಲೈ ಯೋಜನೆ ಇದೆ. ಮುನಿಸಿಪಾಲಿಟಿಗಳಲ್ಲಿಯೂ ಕೂಡ ಈ ಒಂದು ಯೋಜನೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಅಂತಹ ಮುನಿಸಿಪಾಲಿಟಿಗಳಿಗೆ ಸರ್ಕಾರ ಸಾಲ ಕೊಟ್ಟು ಈ ಕೆಲಸ ಮಾಡುವ ಅವಶ್ಯಕತೆ ಇದೆ. ಅನೇಕ ಕೆಲಸ ಕಾರ್ಯಗಳಿಗೆ ಅವರು ಸಾಲ ಮಾಡಿರುವುದರಿಂದ ಹೊಸದಾಗಿ ಸಾಲ ಮಾಡಲು ಅವಕಾಶ ಇಲ್ಲದೆ ಇರುವ ಪ್ರಯುಕ್ತ ಮತ್ತು ಅಲ್ಲಿ ನೀರಿನ ಕೊರತೆ ವಿಶೇಷವಾಗಿ ಹೆಚ್ಚಾಗಿ ಬೆಳೆದಿರುವ ಪ್ರಯುಕ್ತ, ಈ ನೀರಿನ ಅವಶ್ಯಕತೆಯನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಲು ಮತ್ತು ಅವಕಾಶ ಇಲ್ಲದೆ ಇರುವ ಕಡೆ ಅವರಿಗೆ ಹೆಚ್ಚಿನ ರೀತಿಯಲ್ಲಿ ಒಂದು ಯೋಜನೆ ತಯಾರು ಮಾಡಿ, 10 ವರ್ಷಗಳವರೆಗೆ ಅವರಿಗೆ ನೀರಿನ ವ್ಯವಸ್ಥೆ ಮಾಡಿ ಕೊಡಬೇಕು. ಇದು ಬಹಳ ಮುಖ್ಯವಾದ ಕೆಲಸ. ಅದಕ್ಕೆ ಸರ್ಕಾರ ಒಂದು ಯೋಜನೆ ಮಾಡಿಸಿ ಎಲ್ಲಾ ಸಣ್ಣ ಮುನಿಸಿಪಾಲಿಟಿಗಳಿಗೂ ಸಹ ನೀರಿನ ಸೌಕರ್ಯವನ್ನು ಮಾಡಿಕೊಡಬೇಕೆಂದು ಸರ್ಕಾರವನ್ನು ಕೇಳಲು ಇಚ್ಛೆಪಡುತ್ತೇನೆ.

ಕೊನೆಯದಾಗಿ ಈ ಮುನಿಸಿಪಾಲಿಟಿಗಳ ಆಡಳಿತ ಏನಿದೆಯೋ ಅದರಲ್ಲಿ ರಾಜಕೀಯ ಇಲ್ಲದಂತೆ ಅಲ್ಲಿರುವ ಮುನಿಸಿಪಾಲಿಟಿ ಮೇಯರುಗಳು ಯಾವ ಪಾರ್ಟಿಗೆ ಸೇರಿರಲಿ ಅವರು ಜನರಿಗೆ ಸೌಕರ್ಯ ಮಾಡುವ ಮತ್ತು ಅಲ್ಲಿಯ ಡೆವೆಲಪ್‌ಮೆಂಟ್ ಕಾರ್ಯಗಳಲ್ಲಿ ಅವರೆಲ್ಲರ ಒಂದು ಮನಸ್ಸು ಇರಬೇಕು ಎನ್ನುವ ವಾತಾವರಣವನ್ನು ಎಲ್ಲಾ ಮುನಿಸಿಪಾಲಿಟಿಗಳಲ್ಲೂ ಕೂಡ ಉಂಟುಮಾಡಲು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಈವೊತ್ತಿನ ದಿವಸ ಈ ಬೇಡಿಕೆಯನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ಬೆಂಗಳೂರು ನಗರದ ಕಾರ್ಪೊರೇಷನ್‌ಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ತಮ್ಮ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಈವೊತ್ತಿನ ದಿವಸ, ಬೆಂಗಳೂರು ನಗರದಲ್ಲಿ ಕಾರ್ಪೊರೇಷನ್‌ಗೆ ಚುನಾವಣೆ ನಡೆಸಿ ಅದಕ್ಕೆ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಿದ್ದಾರೆ. ಆ ಕಾರ್ಪೊರೇಷನ್ ಸಭೆಯ ವೈಖರಿಯನ್ನು ನೋಡಿದಾಗ ನನಗನ್ನಿಸುತ್ತದೆ, ಈಗ ಇರತಕ್ಕ ಮೇಯರ್ ಒಂದು ರೀತಿಯ ಡಿಕ್ಟೇಟರ್ ರೀತಿ ಸಭೆಯನ್ನು ನಡೆಸುತ್ತಿದ್ದಾರೆ. ಇದನ್ನು ನೋಡಿದಾಗ ನನಗಾದರೂ ವ್ಯಥೆಯಾಗುತ್ತದೆ. ಈ ಸಭೆಯನ್ನು ಎಂಟು ಗಂಟೆಯ ಒಳಗೆ ನಡೆಸಬೇಕು ಎಂದು ಇದ್ದರೆ, ರಾತ್ರಿ 12 ಗಂಟೆಯವರೆ ನಡೆಸಿ ಲಕ್ಷಾಂತರ ರೂಪಾಯಿ ವಿನಿಯೋಗ ಮಾಡತಕ್ಕ ಬಿಲ್‌ಗಳನ್ನು ಪಾಸ್ ಮಾಡಿ, ಭ್ರಷ್ಟಾಚಾರ, ನಡೆಸಿರತಕ್ಕಂಥಾದ್ದು ಹಿಂದೆ ಯಾವ ಮೇಯರ್ ಕಾಲದಲ್ಲೂ ನಡೆದಿಲ್ಲ. ಈವೊತ್ತಿನ ದಿವಸ ಕಾರ್ಪೊರೇಷನ್‌ನಲ್ಲಿ ಮೇಯರ್ ಆಡಳಿತದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ವ್ಯಥೆಯಿಂದ ಹೇಳಬೇಕಾಗಿದೆ. ಕೆಲವು ಅಧಿಕಾರಿಗಳನ್ನು ಇಂಜಿನಿಯರುಗಳನ್ನು ಕಾರ್ಪೊರೇಷನ್‌ನಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಸಸ್ಪೆಂಡ್ ಮಾಡಿದ್ದಾರೆ. ಸಸ್ಪೆಂಡ್ ಆದ ಇಂಜನಿಯರುಗಳ ಜೊತೆಯಲ್ಲಿದ್ದಂತಹ ಕಮಿಷನರ್ ಅವರು, ಅಡ್ಮಿನಿಸ್ಟ್ರೇಟರ್ ಅವರನ್ನು ಏತಕ್ಕೆ ಬಿಟ್ಟರು; ಎಂದು ನಾನು ಪ್ರಶ್ನೆ ಮಾಡುತ್ತೇನೆ. ಲಕ್ಷಾಂತರ ರೂಪಾಯಿ ಹಣದ ಅವ್ಯವಸ್ಥೆ ನಡೆದಿರುವಾಗ ಇವರು ಜವಾಬ್ದಾರರು. ಅವರನ್ನು ಬಿಟ್ಟು ಬರೀ ಇಂಜನಿಯರ್‌ಗಳನ್ನು ಮುಖಕ್ಕೆ ಮಸಿ ಬಳಿಯುವ ಒಂದು ರೀತಿಯ ತಾರತಮ್ಯವನ್ನು ತೋರಿಸಿದಂತಾಗುತ್ತದೆ. ಎಲ್ಲರನ್ನು ನ್ಯಾಯಾಧೀಶರ ಮುಂದೆ ತರುವ ಉದ್ದೇಶವಿದ್ದರೆ, ದಕ್ಷ ಆಡಳಿತ ನಡೆಸಬೇಕು ಎನ್ನುವ ಧೈರ್ಯ ಇದ್ದರೆ, ಹಿಂದೆ, ಇದ್ದಂಥ ಮೇಯರ್ ಮತ್ತು ಇವತ್ತು ಇದ್ದಂಥ ಕಮಿಷನರ್ ಅನ್ನು ಇಂಜಿನಿಯರ್ ಅನ್ನು ಸಂಪೂರ್ಣವಾಗಿ ತನಿಖೆಗೆ ಗುರಿಪಡಿಸಿದರೆ, ಕಾರ್ಪೊರೇಷನ್ ಮೇಲೆ ನೀವು ನಡೆಸತಕ್ಕ ವಿಜಿಲೆನ್ಸ್ ಏನಿದೆ ಅದನ್ನು ನ್ಯಾಯವಾದ ರೀತಿಯಲ್ಲಿ ನಡೆಸುತ್ತೀರಿ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಬರೀ ಇಂಜಿನಿಯರ್‌ಗಳನ್ನು ಸಸ್ಪೆಂಡ್ ಮಾಡಿ, ಮೇಯರ್ ಮತ್ತು ಕಮಿಷನರನ್ನು ಬಿಟ್ಟಿರುವುದಾದರೆ ತಾವು ಯಾವುದೋ ಪ್ರಭಾವಕ್ಕೆ ಒಳಗಾಗಿದ್ದೀರಿ ಎಂದು ತಿಳಿದುಕೊಳ್ಳುತ್ತೇನೆ. ಅವೊತ್ತು ಇದ್ದಂಥ ಅಧಿಕಾರಿಗಳ ಮೇಲೆ, ಮೇಯರ ಮೇಲೆ ಜವಾಬ್ದಾರಿಯನ್ನು ಹೊರಿಸಿ ಜುಡಿಷಿಯಲ್ ಎನ್‌ಕ್ವಯರಿ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ವಾಟಾಳ್ ನಾಗರಾಜ್)

ಇನ್ನು ಸ್ವೀಪರ್‌ಗಳ ಬಗ್ಗೆ ಹೇಳುತ್ತೇನೆ. ಸ್ವೀಪರ್‌ಗಳು ಒಂದೇ ಕೋಮಿನವರು ಎನ್ನತಕ್ಕಂಥ ನಿರ್ಣಯ ಬೇಡ. ಕಸ ಗುಡಿಸತಕ್ಕ ಜನ ಯಾವುದೋ ಒಂದೇ ಕೋಮಿನವರು ಆಗಿರಬೇಕು ಎನ್ನುವುದನ್ನು ನಾನು ಒಪ್ಪುವುದಿಲ್ಲ. ಸಮಾಜ ಬದಲಾವಣೆಯಾಗಿವೆ. ಎಲ್ಲಾ ಕೋಮಿನ ಜನ ಇವೊತ್ತು ಪ್ರತಿಯೊಂದು ಕೆಲಸಗಳನ್ನು ಮಾಡುವುದಕ್ಕೆ ಬಂದಾಗ ಮಾತ್ರ ಇದಕ್ಕೆ ಒಂದು ವಿಶೇಷವಾದ ಸಮಾಜವಾದದ ರೂಪಕೊಟ್ಟಂತಾಗುತ್ತದೆ. ಈ ಕೆಲಸಕ್ಕೆ ಬೇರೆಯವರು ಬರತಕ್ಕದ್ದು ಅಗೌರವ ಎನ್ನುವುದನ್ನು ತಪ್ಪಿಸಿ, ಎಲ್ಲರೂ ಬರುವಂತೆ ಅಟ್ರಾಕ್ಟ್ ಮಾಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ ಇನ್ನು ಈ ಸಿ.ಐ.ಟಿ.ಬಿ. ಬರೀ ಶ್ರೀಮಂತರಿಗೆ, ಮಂತ್ರಿಗಳಿಗೆ, ಅಧಿಕಾರಿಗಳಿಗೆ, ಮಾಜಿಮಂತ್ರಿಗಳಿಗೆ ಇರತಕ್ಕ ಟ್ರಸ್ಟ್‌ಬೋರ್ಡ್ ಆಗಿದೆ. ಸದಾಶಿವ ನಗರದಲ್ಲಿ ಹಂಚಿರತಕ್ಕ ಸೈಟುಗಳಲ್ಲಿ ಯಾವ ಒಬ್ಬ ಬಡವನಿಗೆ ಸೈಟು ಕೊಟ್ಟಿದ್ದಾರೆ? ಅದನ್ನು ಪರಿಶೀಲನೆಮಾಡಿ. ಮಂತ್ರಿಗಳ,. ಅದೂ ಮಾಜಿ ಮಂತ್ರಿಗಳ ದೊಡ್ಡ ದೊಡ್ಡ ಐ.ಎ.ಎಸ್ ಮತ್ತು ಐ.ಪಿ.ಎಸ್, ಅಧಿಕಾರಿಗಳು ವೈಸ್ ಚಾನ್ಸಲರ್ ಇವರುಗಳ ಒಂದು ಭವ್ಯ ನಗರ ಆಗಿದೆಯೇ ಹೊರತು ಒಬ್ಬ ಸಾಮಾನ್ಯ ಬಡವನಿಗೆ ನೀವು ಅಲ್ಲಿ ಒಂದು ಸೈಟ್ ಕೊಟ್ಟಿದ್ದೀರಾ? ಒಂದೊಂದು ಸೈಟಿಗೆ ಅರ್ಜಿ ಹಾಕಿದರೆ, 8 ವರ್ಷ ಆದರೂ ಕೊಡುವುದಿಲ್ಲ. ಕೆಂಗೇರಿ ಉಪನಗರ ಮಾಡಿದ್ದಾರೆ ಅಲ್ಲೂ ಸಿಕ್ಕುವುದಿಲ್ಲ. ಇನ್ನೂ ನಾವು ಮಂಡ್ಯಾಕ್ಕೆ ಹೋಗಬೇಕು ಎಂದು ಕಾಣುತ್ತದೆ. ಟ್ರಸ್ಟ್‌ಬೋರ್ಡಿನವರು ಇನ್ನು ಮುಂದೆ ನಮ್ಮಂಥ ಸಾಮಾನ್ಯ ಜನರಿಗೆ ಕೊಡತಕ್ಕ ನೀತಿಯನ್ನು ಹಾಕಬೇಕು ಎಂದು ತಮ್ಮಲ್ಲಿ ಮನವಿಮಾಡುತ್ತೇನೆ. ಇನ್ನು ಬೆಂಗಳೂರು ಕಾರ್ಪೊರೇಷನ್‌ನಲ್ಲಿ ನಡೆಯುವ ವ್ಯವಹಾರ ಹೇಳುತ್ತೇನೆ. ಹಳೇ ಕಲ್ಲು ಹೊಸ ಬಿಲ್ಲು. ಒಂದೇ ರಸ್ತೆಗೆ 5—5 ಬಿಲ್ಲುಗಳು ಮಾಡಿ ಹಣ ತೆಗೆದುಕೊಂಡಿದ್ದಾರೆ. ರಸ್ತೆಗಳನ್ನು ರಿಪೇರಿ ಮಾಡದೆ ಬಿಲ್ಲನ್ನು ತೆಗೆದುಕೊಂಡಿದ್ದಾರೆ. ಇದು ಬೆಂಗಳೂರು ಕಾರ್ಪೊರೇಷನ್‌ನಲ್ಲಿ ನಡೆಯತಕ್ಕ ವೈಖರಿ. ಮೊದಲು ಕಂಟ್ರಾಕ್ಟರ್ ಅಲ್ಲಿಗೆ ಬರುವಾಗ ಸ್ಕೂಟರಿನಲ್ಲಿ ಬರುತ್ತಾನೆ ಬರಬರುತ್ತಾ ಸುಮಾರು ಒಂದು ಫರ್ಲಾಂಗ್ ದೂರದ ಕಾರ್ ತೆಗೆದುಕೊಳ್ಳುತ್ತಾನೆ. 45 ಲಕ್ಷ ರೂಪಾಯಿ ಕಂಟ್ರಾಕ್ಟ್ ಮಾಡತಕ್ಕ ಒಬ್ಬ ಕಂಟ್ರಾಕ್ಟರಿಗೆ ಭಾರಿ ದೊಡ್ಡ ಕಾರ್ ಇದೆ. ಈ ರೀತಿ ಮಾಡಿದರೆ ಕಾರ್ ಬರುತ್ತದೆ ಎಲ್ಲವೂ ಬರುತ್ತದೆ. ಇಲ್ಲಿಗೆ ಬರತಕ್ಕ ಅಸಿಸ್ಟೆಂಟ್ ಇಂಜಿನಿಯರ್ ಈ ಊರಿನಲ್ಲಿ ಮನೆ ಕಟ್ಟದೆ ಇದ್ದರೆ, ಒಂದು ಕಾರ್ ತೆಗೆದುಕೊಳ್ಳದಿದ್ದರೆ, ಅದು ಒಂದು ಡಿಸ್‌ಕ್ವಾಲಿಫಿಕೇಷನ್. ಕಾರ್ಪೊರೇಷನ್‌ಗೆ ಬಂದರೆ ಒಂದು ಮನೆ ಕಟ್ಟಬೇಕು ಒಂದು ಕಾರ್ ತೆಗೆದುಕೊಳ್ಳಬೇಕು. ಇದು ಕ್ವಾಲಿಫಿಕೇಷನ್. ಕಾರ್ಪೊರೇಷನ್‌ಗೆ ಹೋದರೆ, ಮನೆ ಖಾತಾ, ಟ್ರಾನ್ಸ್‌ಫರ್ ಆಗಲಿಕ್ಕೆ 6 ತಿಂಗಳಾಗುತ್ತದೆ. ಇವೆಲ್ಲವನ್ನೂ ಸರ್ಕಾರದ ಗಮನಕ್ಕೆ ಆಗಿಂದಾಗ್ಗೆ ತಂದರೂ ಅವರು ಯಾವುದೇ ರೀತಿಯಲ್ಲಿ ಕಾರ್ಯಕ್ರಮ ಕೈಕೊಂಡಿಲ್ಲ. ನಿಮಗೆ ನಿಷ್ಠೆ ಇದ್ದರೆ ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡಬೇಕೆಂದು ಇದ್ದರೆ, ದಯಮಾಡಿ ಕಂಟ್ರಾಕ್ಟ್ ಸಿಸ್ಟಂನಲ್ಲಿ ನಡೆಯತಕ್ಕ ಮೋಸ ಮತ್ತು ಮೇಯರ್ ನಡೆಸತಕ್ಕ ಗುಂಡಾಗಿರಿಯನ್ನು ತಪ್ಪಿಸುವುದಕ್ಕೆ ಸತತವಾಗಿ ಕ್ರಮ ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಈ ವರೆಗೆ ರಚನಾತ್ಮಕ ಹಾಗೂ ರಚನಾತ್ಮಕ ಇಲ್ಲದಂಥ, ವ್ಯಕ್ತಿ ದ್ವೇಷದಿಂದ ಕೂಡಿದ ಸಲಹೆಗಳು, ಟೀಕೆಗಳು ಬಂದಿವೆ. ಆದರೆ ನಾನು ಕೇವಲ ಒಂದು ವಾಕ್ಯದಲ್ಲಿ ನಾಲ್ಕು ಮಾತು ಹೇಳಿ ಬಿಟ್ಟು ನನ್ನ ಭಾಷಣವನ್ನು ಮುಗಿಸಬೇಕು ಎಂದು ನಿಂತಿದ್ದೇನೆ. ಈ ಮುನಿಸಿಪಾಲಿಟಿ ವಿಷಯದಲ್ಲಿ ಸರ್ಕಾರ ತುಕೋಲ್ ಕಮಿಷನ್ ಕೊಟ್ಟಿರತಕ್ಕ ರಿಪೋರ್ಟನ್ನು ಕಾರ್ಯಗತಮಾಡಿ ಎಲ್ಲಾ ದರ್ಜೆಯ ಹುದ್ದೆಗಳಿಗೂ ರಕ್ಷಣೆಯನ್ನು ಕೊಡಬೇಕು ಮತ್ತು ನಾಲ್ಕನೆ ದರ್ಜೆಯವರಿಗೂ ಇದನ್ನು ಅನ್ವಯ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಈಗ ಇರುವ ಮುನಿಸಿಪಲ್ ಆಕ್ಟ್‌ನಲ್ಲಿ ನೀವು ಹೇಳತಕ್ಕ ಸಮಾಜವಾದ ನೀವು ಹೇಳತಕ್ಕ ಬಡವರ ಸೇವೆ, ನೀವು ಹೇಳತಕ್ಕ ಹೊಸ ನೀತಿಯನ್ನು ಅಳವಡಿಸುವುದಕ್ಕೆ ಅವಕಾಶವಿಲ್ಲ, ಅದನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿಮಾಡಿ. ಮಾಡದೆಹೋದರೆ ಅದು ಮಾತಾಗುತ್ತದೆಯೇ ಹೊರತು ಕಾರ್ಯವಾಗುವುದಿಲ್ಲ. ಆದುದರಿಂದ ಇದನ್ನು ತಿದ್ದುಪಡಿ ಮಾಡಬೇಕು ಎಂದು ಮಂತ್ರಿಮಂಡಲಕ್ಕೆ ಸಲಹೆ ಮಾಡುತ್ತೇನೆ. ರಾಜ್ಯಕ್ಕೆ ಸಂಬಂಧಪಟ್ಟ ಪೌರ ಸಮಿತಿಗಳಿಗೆ ಸಿ ಅಂಡ್ ಆರ್ ರೂಲ್ಸ್ ಜಾರಿಗೆ ತರಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇನ್ನೂ ಲಕ್ಷ ಸೈಟುಗಳನ್ನು ಹಂಚಬೇಕು, 1973 ಆಗಸ್ಟ್ ತಿಂಗಳ ಹೊತ್ತಿಗೆ ಮೈಸೂರು ರಾಜ್ಯದಲ್ಲಿ ಸೈಟುಗಳು ಇಲ್ಲದೆ ಇರತಕ್ಕ ಸಂಸಾರ ಇರಕೂಡದು ಎನ್ನುವ ತತ್ವವನ್ನು ಮಂತ್ರಿಗಳು ಅನೇಕ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಬೆಳ್ಳಿ ಹಬ್ಬ ಆಚರಿಸುವ ಸಂದರ್ಭದಲ್ಲಿ ಹಲವಾರು ಕಡೆ ಸೈಟು

ಗಳನ್ನು ಕೊಡುತ್ತೇವೆಂದು ಮಂತ್ರಿಗಳು ಅನೇಕ ಭಾಷಣಗಳನ್ನು ಮಾಡಿದ್ದಾರೆ. ಎಷ್ಟು ಸೈಟು ಗಳನ್ನು ಬಡವರಿಗೆ ಕೊಡಲು ವ್ಯವಸ್ಥೆ ಮಾಡಿದ್ದೀರಿ ಎನ್ನುವ ಅಂಕಿ ಅಂಶಗಳನ್ನು ದಯವಿಟ್ಟು ತಿಳಿಸಬೇಕು. ಈ ಬಗ್ಗೆ ಅರ್‌ಬನ್ ಡೆವಲಪ್‌ಮೆಂಟ್ ಬಿಲ್ ಜಾರಿಗೆ ತಂದು ಸೂಕ್ತ ವ್ಯವಸ್ಥೆ ಮಾಡಿ ಬಡವರಿಗೆ, ಕೂಲಿಗಾರರಿಗೆ ನಿರ್ಗತಿಕರಿಗೆ ಮತ್ತು ಶ್ರಮಜೀವಿಗಳಿಗೆ ಹೆಚ್ಚು ಹೆಚ್ಚು ಸೈಟುಗಳನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು. ಸಿಐಟಿಬಿ ರೂಲ್ಸ್ ತಿದ್ದುಪಡಿ ಮಾಡಿ ಹೊಸ ರೂಲ್ಸ್ ತಂದು ಲಾಟರಿ ಸಿಸ್ಟಮ್ ಜಾರಿಯಲ್ಲಿದೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸಿ ಐ ಟಿ ಬಿಯನ್ನು ಡೆಲ್ಲಿಯಲ್ಲಿರುವ ಬೋರ್ಡಿನಂತೆ ಪರಿವರ್ತನೆ ಮಾಡಿ ಅದರ ಮೂಲಕ ಎಲ್ಲ ಜನರಿಗೂ ಅನುಕೂಲಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕು.

ಪ್ರೈವೇಟು ಲೇ ಔಟುಗಳ ಬಗ್ಗೆ ಹೇಳುವಾಗ ಕೆಲವು ಕಡೆಗಳಲ್ಲಿ ನಿಯಮಗಳಿಗೆ ಅನುಸಾರ ವಾಗಿ ಮನೆಗಳನ್ನು ಕಟ್ಟಿರುತ್ತಾರೆ. ಇಂತಹ ಕಡೆಗಳಲ್ಲಿ ಕಾರ್ಪೊರೇಷನ್‌ನವರು ಪ್ರೈವೇಟು ಲೇ ಔಟುಗಳಿಗೆ ಎನ್‌ಕರೇಜು ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಶೇಕಡಾ 18 ಪರ್ಸೆಂಟಿನಷ್ಟು ಸೈಟುಗಳನ್ನು ಹರಿಜನ ಹಾಗೂ ಗಿರಿಜನರಿಗೆ ಹಂಚಬೇಕೆಂದು ನಿಯಮ ಇದ್ದರೂ ಅದರಂತೆ ಎಲ್ಲರಿಗೂ ಸೈಟುಗಳು ಸಿಗುವ ವ್ಯವಸ್ಥೆ ಮಾಡಬೇಕು.

ಇನ್ನು ವಾಟರ್ ಸಪ್ಲೈ ಬೋರ್ಡಿನ ಬಗ್ಗೆ ಇಲ್ಲಿ ಅನೇಕ ಟೀಕೆ ಟಿಪ್ಪಣಿಗಳು ಬಂದಿವೆ. ಮತ್ತು ಇಲ್ಲಿನ ಅಧಿಕಾರಿಗಳ ಬಗ್ಗೆ ಕೂಡ ದೋಷಾರೋಪಣೆ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದ ಒಂದು ಕಮಿಟಿಯ ಐದಾರು ಜನ ಸದಸ್ಯರು ವಾಟರು ಬೋರ್ಡ್ ಸಪ್ಲೈ ಕೆಲಸ ಕಾರ್ಯ ಗಳು ಹೇಗೆ ನಡೆಯುತ್ತಿವೆ ಎಂದು ನೋಡಲು ಹೋಗಿದ್ದರು. ಅವರು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿದ್ದ ಅಧಿಕಾರಿಗಳು ಅವರು ಮಾಡುತ್ತಿರುವ ಕೆಲಸಗಳ ಪೂರ್ಣ ವಿವರಗಳು ಮ್ಯಾಪು ಇತ್ಯಾದಿ ಗಳನ್ನೆಲ್ಲಾ ತೋರಿಸಿದಾಗ ಇಲ್ಲಿಗೆ ಬಂದ ಸದಸ್ಯರಿಗೆ ಈ ಬೋರ್ಡು ಬಹಳ ಚೆನ್ನಾಗಿ ಕೆಲಸ ಮಾಡು ತ್ತಿದೆ ಎನ್ನುವ ಭರವಸೆ ಬಂದಿದೆ ಮತ್ತು ಇದು ಇನ್ನೂ ಉತ್ತಮ ರೀತಿಯಲ್ಲಿ ಕೆಲಸ ಮಾಡಿ ಬೆಂಗಳೂರು ಜನತೆಗೆ ಸಹಾಯ ಮಾಡುತ್ತದೆ ಎಂದು ನಾವು ಆಶಿಸುತ್ತೇವೆ. ಸರಕಾರ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿ ಬೆಂಗಳೂರು ನಗರಕ್ಕೆ ಬೇಗ ನೀರು ಸಿಗುವ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಅತಿ ಮುಖ್ಯವಾದದ್ದು ಬಡಜನರು ಹಾಗೂ ಕೂಲಿಗಾರರು ಹಾಗೂ ಸ್ಲಂಗಳಲ್ಲಿ ವಾಸ ಮಾಡತಕ್ಕ ಜನರನ್ನು ಸರಕಾರ ನೆಗ್‌ಲೆಕ್ಟ್ ಮಾಡುತ್ತಿದ್ದಾರೆ. ಇದಕ್ಕೋಸ್ಕರ ಇಲ್ಲಿ ಸ್ಲಂ ಡೆವಲಪ್‌ಮೆಂಟ್ ಬೋರ್ಡ್ ಒಂದನ್ನು ನೇಮಕ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತು ಇದರ ಬಗ್ಗೆ ಅಂಕಿ ಅಂಶಗಳನ್ನು ತಯಾರು ಮಾಡುವ ವ್ಯವಸ್ಥೆ ಮಾಡಬೇಕು.

ಇನ್ನು ಹೌಸಿಂಗ್ ಬೋರ್ಡು ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇದರಲ್ಲಿ ಲೋ ಇನ್‌ಕಂ ಗ್ರೂಪು, ಮಿಡ್ಲ್ ಇನ್‌ಕಂ ಗ್ರೂಪು ಮತ್ತು ಹೈ ಇನ್‌ಕಂ ಗ್ರೂಪು, ಇಂಡಸ್ಟ್ರಿಯಲ್ ಇನ್‌ಕಂ ಗ್ರೂಪು ಎಂದು ಮಾಡಿ ಬೇಕಾದಷ್ಟು ಸೈಟುಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಮುಖ್ಯವಾಗಿ ಬಡವರಿಗೆ ಹಾಗೂ ಕೂಲಿಗಾರರುಗಳಿಗೆ ಕೊಟ್ಟಿಲ್ಲ. ಇನ್ನು ಮುಂದೆ ಆದರೂ ಬಡ ಜನರಿಗೆ ಹೆಚ್ಚು ಸೈಟುಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು. ಇನ್ನು ಎಸ್ ಟಿ ಹಾಗೂ ಎಸ್ ಸಿ ಹೌಸಿಂಗು ಕೋಆಪರೇಟೀವ್ ಸೊಸೈಟಿಗೆ ಹೌಸಿಂಗು ಬೋರ್ಡಿನವರು ಸಾಕಾದಷ್ಟು ಹಣವನ್ನು ಕೊಡದೇ ಇರುವುದರಿಂದ ಇಲ್ಲಿ ಮಾಡುವ ಸ್ಕೀಂಗಳಿಗೆ ಬಹು ತೊಂದರೆಯಾಗುತ್ತಿದೆ. ಬಡ್ಜೆಟ್ಟಿನಲ್ಲಿ ಕೂಡ ಹೌಸಿಂಗು ಸ್ಕೀಂಗಾಗಿ ಈ ಸೊಸೈಟಿಗೆ ಹಣ ಇಲ್ಲ. ಇದನ್ನು ವಿಚಾರ ಮಾಡಿ ಇವರಿಗೆ ಸರಕಾರ ಸಹಾಯ ಮಾಡಬೇಕು.

ಇನ್ನು ಟೌನ್‌ಪ್ಲಾನಿಂಗು ವರ್ಕ್ ಕೆಲಸವೇನೋ ಸಮರ್ಪಕವಾಗಿ ನಡೆಯುತ್ತಿದೆ. ಅದ ರಂತೆಯೇ ಕಂಟ್ರಿ ಪ್ಲಾನಿಂಗು ಎಂದು ಮಾಡಿ ರಾಜ್ಯದಾದ್ಯಂತ ಇದರ ಕೆಲಸಗಳು ಆಗುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ಹುಚ್ಚು ನಾಯಿಗಳು ಕಡಿದರೆ ಅದಕ್ಕೆ 14 ಇಂಜಕ್ಷನ್‌ಗಳನ್ನು ಕೊಡಬೇಕೆಂದು ಹೇಳು ತ್ತಾರೆ. ಇದಕ್ಕಾಗಿ ಜನ ಬೆಂಗಳೂರು ಕಾರ್ಪೊರೇಷನ್ನಿಗೇ ಬರಬೇಕಾಗಿದೆ. ಬೇರೆ ಕಡೆ ಇರುವ ಮುನಿಸಿಪಾಲಿಟಿಗಳಲ್ಲಿ ಇಂತಹ ಇಂಜಕ್ಷನ್‌ಗಳನ್ನು ಇಡುವ ವ್ಯವಸ್ಥೆ ಮಾಡಿಲ್ಲ. ಸರಕಾರ ಎಲ್ಲ ಮುನಿಸಿಪಾಲಿಟಿಗಳಲ್ಲೂ ಹುಚ್ಚು ನಾಯಿಕಡಿದವರಿಗೆ ಚಿಕಿತ್ಸೆ ಮಾಡಲು ಅನುಕೂಲವಾಗುವಂತೆ ಇಂತಹ ಇಂಜಕ್ಷನ್ ಟ್ಯುಬುಗಳನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ಒತ್ತಾಯ ಮಾಡು ತ್ತೇನೆ.

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಇನ್ನು ಹೆಂಡದ ಅಂಗಡಿಗೆ ಕಾರ್ಪೊರೇಷನ್‌ನವರು ಲೈಸನ್ಸ್ ಕೊಡುವಾಗ ಹರಿಜನರು ಎಲ್ಲಿರುತ್ತಾರೋ ಅಲ್ಲೇ ಹೆಂಡದಂಗಡಿಗಳನ್ನು ತೆಗೆಯಲು ಲೈಸನ್ಸ್ ಕೊಡುತ್ತಿದ್ದಾರೆ. ಇಂತಹವರಿಗೆ ಲೈಸನ್ಸ್ ಕೊಡಬಾರದು. ಇದರಿಂದ ಹರಿಜನರಿಗೆ ಹಾನಿಯುಂಟಾಗುತ್ತದೆ. ಸರಕಾರದವರು ಸಮಾಜವಾದ ದಾರಿಗೆ ತರುತ್ತೇವೆ ಎಂದು ಹೇಳುವಂತೆ ಎಲ್ಲ ಜನರಿಗೂ ಸೈಟುಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕು ಮತ್ತು ಮಾನ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರುವ ಸುಮಾರು 14 ಕೋಟಿಯ ಬೇಡಿಕೆಗಳನ್ನು ಪುಷ್ಟೀಕರಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಇಲಾಖೆಯ ಬೇಡಿಕೆಗಳ ಬಗ್ಗೆ ಸದನದ ಮಾನ್ಯ ಸದಸ್ಯರು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಇದನ್ನು ಸದಸ್ಯರುಗಳು ಈಗಿರತಕ್ಕ ವ್ಯವಸೆಯ ಬಗ್ಗೆ ಪ್ರತಿಯಾಗಿ ಬೇರೆ ವ್ಯವಸ್ಥೆ ಮಾಡಬೇಕು ಮತ್ತು ಇದನ್ನು ಯಾವ ರೀತಿ ಉಪಯೋಗ ಮಾಡಬೇಕು ಎನ್ನುವುದರ ಬಗ್ಗೆ ಟೀಕೆಯ ರೂಪದಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನು ಕೆಲವು ಸದಸ್ಯರು ಕೆಲವು ಅಧಿಕಾರಿಗಳ ಬಗ್ಗೆ ತೀವ್ರವಾದ ಟೀಕೆಗಳನ್ನೂ ಮಾಡಿದ್ದಾರೆ. ಯಾರು ಯಾರು ಯಾವ ಯಾವ ಸಲಹೆಗಳನ್ನು ಕೊಟ್ಟಿದ್ದಾರೆ ಆ ಸಲಹೆಗಳನ್ನೆಲ್ಲಾ ಸರಕಾರ ಆತ್ಮೀಯತೆಯಿಂದ ಪರಿಶೀಲಿಸಿ ಯಾವ ರೀತಿ ಕಾರ್ಯಗತಮಾಡಬೇಕೋ ಆ ರೀತಿ ಮಾಡುತ್ತೇವೆ. ಮತ್ತು ಕೆಲವು ರಚನಾತ್ಮಕವಾದ ಟೀಕೆಗಳ ಬಗ್ಗೆ ಅಧಿಕಾರಸ್ಥಾನದಲ್ಲಿರುವ ನಾನು ಅವೆಲ್ಲ ವಿಚಾರಗಳನ್ನು ಇಲ್ಲಿ ಸ್ಪಷ್ಟೀಕರಿಸಲು ಕಾತುರನಾಗಿದ್ದೇನೆ. ಅದೇನೆಂದರೆ ಯಾರೇ ಅಧಿಕಾರಿ ಇರಲಿ ಅವರು ಒಂದು ಇಲಾಖೆಯಲ್ಲಿ ಕೆಲಸ ಮಾಡುವಾಗ ಆ ಅಧಿಕಾರಿಗಳು ಸತ್ಯ ಹಾಗೂ ನಿಷ್ಠೆಯಿಂದ ದೇಶದ ಒಂದು ಆಗುಹೋಗುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ದೇಶಾಭಿಮಾನದಿಂದ ಕೆಲಸ ಮಾಡಬೇಕು ಮತ್ತು ಆ ರೀತಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಯಾರಾದರೂ ಸ್ವೇಚ್ಛೆಯಾಗಿ ಕೆಲವು ಕಡೆ ಆಸ್ತಿಪಾಸ್ತಿಗಳನ್ನು ಮಾಡಬೇಕೆನ್ನುವ ಉದ್ದೇಶದಿಂದ ಲಂಚರುಷುವತ್ತುಗಳಿಗೆ ಈಡಾಗಿ ಸರಕಾರಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದರೆ ತಕ್ಷಣ ಅಂತವರ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ನಾನು ಈ ಸದನದಲ್ಲಿ ತಮಗೆ ಭರವಸೆ ಕೊಡುತ್ತೇನೆ. ಮತ್ತು ಇಂತಹ ಒಂದು ಕಾರ್ಯಕ್ರಮ ತೆಗೆದುಕೊಳ್ಳುವಾಗ ಈಗ ಇರತಕ್ಕ ನಿಯಮಾವಳಿಗಳು ಸರಿಯಾಗಿಲ್ಲ ಮತ್ತು ಸಮರ್ಪಕವಾಗಿಲ್ಲ. ಇದನ್ನು ಬದಲಾವಣೆಮಾಡಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಸರಕಾರದ ಉದ್ದೇಶವಾಗಿದೆ. ಇದನ್ನು ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಸರಕಾರ ಬಹಳ ತೀವ್ರತೆಯಿಂದ ಯೋಚನೆ ಮಾಡುತ್ತಿದೆ. ಇಂತಹ ಒಂದು ನಿಯಮಾವಳಿಗಳನ್ನು ಬದಲಾಣೆ ಮಾಡಿ ಮುಂದಿನ ವರ್ಷ ನಾವು ಈ ಸಭೆಗೆ ಬರುವಾಗ ತಮ್ಮ ಮುಂದೆ ಇಟ್ಟರೆ ಆಗ ತಮಗೆ ಇದರಲ್ಲಿ ಒಂದು ರೀತಿಯಾದ ಸಂತೋಷ ಮತ್ತು ತೃಪ್ತಿ ಉಂಟಾಗುತ್ತದೆ ಎಂದು ನಾನು ನಂಬಿದ್ದೇನೆ. ಮತ್ತು ಮಾನ್ಯ ಸದಸ್ಯರು ಈ ಸಭೆಯ ಮುಂದೆ ಇಟ್ಟಿರತಕ್ಕ ಹಲವಾರು ಸಲಹೆಗಳ ಬಗ್ಗೆ ಒಂದೊಂದಾಗಿ ಇಲ್ಲಿ ಉತ್ತರ ಕೊಡಲು ಪ್ರಯತ್ನಪಡುತ್ತೇನೆ.

ಮೊಟ್ಟ ಮೊದಲನೆದಾಗಿ ನಮ್ಮ ಬೆಂಗಳೂರು ಕಾರ್ಪೊರೇಷನ್ ಬಗ್ಗೆ ಬಹಳ ತೀವ್ರವಾದ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ನಮ್ಮ ಸರಕಾರ ಬಂದು ಸುಮಾರು 113 ದಿವಸಗಳಾಗಿರಬಹುದು. ಈ ಅವಧಿಯಲ್ಲಿ ಕಾರ್ಪೊರೇಷನ್ ಮೂಲಕ ನಾಗರಿಕರಿಗೆ ಹೆಚ್ಚು ಹೆಚ್ಚು ಸೌಲಭ್ಯಗಳು ಸಿಗಲಾರದು ಎಂದು ಸಂಶಯಪಡಬೇಕಾಗಿಲ್ಲ. ಆದರೆ ಕಾರ್ಪೊರೇಷನ್ ಆದ ನಂತರ ಅಲ್ಲಿ ನಡೆದಿರುವ ವ್ಯವಹಾರಗಳ ಬಗ್ಗೆ ವಿಜಿಲೆನ್ಸ್ ಕಮಿಷನ್‌ನವರು ಒಂದು ತನಿಖೆ ನಡೆಸಿ ಸರಕಾರಕ್ಕೆ ಒಂದು ರಿಪೋರ್ಟು ಕೊಟ್ಟಿದ್ದಾರೆ. ಅದು ಮಾನ್ಯ ಸದಸ್ಯರಿಗೂ ಕೂಡ ಗೊತ್ತಾಗಿದೆ, ಸರಕಾರ ಇದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದೋ ಅವನ್ನು ಮಾಡಬೇಕೆಂದು ಜನತೆ ನಿರೀಕ್ಷಿಸುವುದು ಸ್ವಾಭಾವಿಕ. ಮತ್ತು ಕಾರ್ಪೊರೇಷನ್‌ನಲ್ಲಿರುವ ಸದಸ್ಯರು ಹಾಗೂ ಮೇಯರ್‌ರವರೂ ಸೇರಿ ಎಲ್ಲರೂ ಜನತೆಯ ಸೇವೆ ಮಾಡಬೇಕೆಂದು ಮತ್ತು ನಾಗರಿಕರ ಜೀವನವನ್ನು ಸುವ್ಯವಸ್ಥೆಯಿಂದ ನಡೆಸಿಕೊಂಡು ಹೋಗಲು ಪ್ರಯತ್ನ ಮಾಡಬೇಕು. ಯಾವ ರೀತಿಯಾಗಿ ಇಲ್ಲಿ ಕೆಲಸಗಳು ಆಗುತ್ತಿವೆ ಮತ್ತು ಜನರಿಗೆ ಯಾವ ರೀತಿಯ ಅನುಕೂಲಗಳನ್ನು ಕೊಡುತ್ತಿದ್ದಾರೆ ಎನ್ನುವುದನ್ನೆಲ್ಲಾ ಸರಕಾರ ಬಹು ಜಾಗರೂಕತೆಯಿಂದ ನೋಡುತ್ತಿದೆ. ಆದರೆ ನಾವೇನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ ಮತ್ತು ಯೋಚನೆ ಮಾಡಿಲ್ಲ ಎನ್ನತಕ್ಕದ್ದು ಸರಿಯಲ್ಲ.

2-00 P.M.

ನಾವೇನಾದರೂ ಕ್ರಮ ತೆಗೆದು ಕೊಳ್ಳಬೇಕಾದರೆ, ಯಾರು ಯಾರು ವಿಧಿವತ್ತಾಗಿ ಕೆಲಸ ಮಾಡುತ್ತಾರೆ, ನಿಯಮಗಳಿಗನುಗುಣವಾಗಿ ಕೆಲಸ ಮಾಡುತ್ತಾರೆ, ಯಾರು ಯಾರು ಮಾಡುವುದಿಲ್ಲ ಎಂಬ ಬಗ್ಗೆ ಸಾಕ್ಷಿಗಳನ್ನು ಸಂಗ್ರಹ ಮಾಡಿ, ಅವನ್ನೆಲ್ಲಾ ಪರಿಶೀಲನೆ ಮಾಡಿ ನಂತರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾರೋ ಹೇಳಿದರು ಎಂದು ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆದಕ್ಕಾಗಿಯೇ ಯಾರು ಯಾರು ಯಾವ ರೀತಿಯಿಂದ ಕೆಲಸ ಮಾಡುತ್ತಾರೆಂಬುದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರುತ್ತೇವೆ. ತಪ್ಪು ಮಾಡಿದವರಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಯೋಚನೆ ಮಾಡಿ ನಂತರ ಕ್ರಮ ತೆಗೆದುಕೊಳ್ಳುತ್ತೇವೆ. ಕಾರ್ಪೊರೇಷನ್ ಆಡಳಿತದಲ್ಲಿ ಅವ್ಯವಹಾರಗಳು ನಡೆಯುತ್ತಿವೆ, ನಾಗರಿಕರಿಗೆ ತೃಪ್ತಿಕರವಾದಂಥ ಕೆಲಸ ಕಾರ್ಯಗಳು ನಡೆಯುತ್ತಿಲ್ಲ ಎಂಬುದಾಗಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅಲ್ಲಿ ಎಲ್ಲವೂ ತೃಪ್ತಿಕರವಾಗಿ ಕೆಲಸಗಳಾಗುತ್ತಿವೆ ಎಂಬುದು ನನ್ನ ಅಭಿಪ್ರಾಯವಲ್ಲ. ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡ ಮೇಲೆ, ಇತರೇ ಅಧಿಕಾರಿಗಳು ಇಂದು ಹೆದರಿ, ಹೆದರಿ ಕೆಲಸ ಮಾಡುವ ಪ್ರಸಂಗ ಬಂದಿದೆ. ಒಟ್ಟಿನಲ್ಲಿ ಮೇಯರ್ ಆಗಲಿ, ಮಾನ್ಯ ಸದಸ್ಯರುಗಳಾಗಲಿ, ತಮ್ಮ ತಮ್ಮ ಕಾರ್ಯ ವ್ಯಾಪ್ತಿ, ಅಧಿಕಾರ ವ್ಯಾಪ್ತಿಯನ್ನು ತಿಳಿದುಕೊಂಡು ಕೆಲಸ ಮಾಡಿದ್ದೇ ಆದರೆ, ಕೆಲಸಗಳು ಚೆನ್ನಾಗಿ ಆಗುತ್ತವೆ ಮತ್ತು ಜನರಿಗೂ ಹೆಚ್ಚಿನ ಸೇವೆಯನ್ನು ಕೊಡಬಹುದು. ಮತ್ತು ಆ ರೀತಿ ಮಾಡಿದ್ದೇ ಆದರೆ ಸರ್ಕಾರವೂ ಸಹ ಬೆಂಬಲ ಕೊಡುತ್ತದೆ. ಆದರೆ ವಿಧಿವತ್ತಾಗಿ ಕೆಲಸ ಮಾಡದೆ, ಆದಕ್ಕೆ ತದ್ವಿರುದ್ಧವಾಗಿ ಕೆಲಸ ಮಾಡುವುದು, ಮತ್ತು ಯಾರನ್ನೋ ಅವಮಾನ ಮಾಡಬೇಕು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಸಭೆಗಳಲ್ಲಿ ಮತ್ತು ಬಹಿರಂಗ ಸಭೆಗಳಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಒಳ್ಳೆಯದಲ್ಲ. ಅದು ಯಾರಿಗೂ ಸಲ್ಲದ ಮಾತು. ಸರಿಯಾದ ರೀತಿಯಿಂದ ಮತ್ತು ಜನರ ಮನಸ್ಸನ್ನು ತೃಪ್ತಿಪಡಿಸುವ ರೀತಿಯಲ್ಲಿ ಯಾವಾಗಲೂ ಕೆಲಸ ಮಾಡಬೇಕು. ಸರ್ಕಾರದ ಇಚ್ಛೆ ಕೂಡ ಇದೇ ಆಗಿದೆ. ವಿಧಿವತ್ತಾಗಿ ಯಾರು ಕೆಲಸ ಮಾಡುತ್ತಾರೋ, ಅವರ ಬೆನ್ನು ತಟ್ಟುವುದಕ್ಕೆ ನಾವು ಸಿದ್ಧರಿದ್ದೇವೆ. ಬಹಿರಂಗವಾಗಿ ಅವಮಾನವಾಗುವಂತಹ ಮಾತನ್ನಾಡುವುದು, ಸಸ್ಪೆಂಡ್ ಮಾಡುತ್ತೇನೆ ಎಂದು ಹೇಳುವುದು, ಅವರು ಅಂತಹವರು, ಇವರು ಇಂತಹವರು ಎಂದು ಹೇಳುವುದು, ಇದರಿಂದ ಏನಾಗಿದೆ ಎಂದರೆ, ಕಮೀಷನರ್ ಆದಿಯಾಗಿ ಎಲ್ಲರೂ ಹೆದರಿ ನಡೆದುಕೊಳ್ಳುವ ಹಾಗೆ ಆಗಿದೆ. ದೊಡ್ಡ ದೊಡ್ಡ ಅಧಿಕಾರಿಗಳನ್ನು ಹೆದರಿಸಿದರೆ, ಸಣ್ಣ ಸಣ್ಣ ಅಧಿಕಾರಿಗಳು ಎಲ್ಲರೂ ತಾವು ಹೇಳುವ ಹಾಗೆ ಕೇಳುತ್ತಾರೆ ಎಂದು ತಿಳಿದುಕೊಳ್ಳುವುದು ತಪ್ಪು ಮತ್ತು ಕೆಲವು ಮಾನ್ಯ ಸದಸ್ಯರು ಸಭೆಯ ಪ್ರತಿನಿಧಿ ಎಂಬುದನ್ನು ಮರೆತು ಈ ರೀತಿ ವರ್ತನೆ ಮಾಡುವುದು ಸರಿಯಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ನಾವು ಇವೊತ್ತಿನ ದಿವಸ ಕಣ್ಣಲ್ಲಿ ಕಣ್ಣಿಟ್ಟು ಯಾರು ಯಾರು ತಪ್ಪು ಮಾಡುತ್ತಿದ್ದಾರೆ ಎಂಬುದನ್ನು ನೋಡುತ್ತಿದ್ದೇವೆ. ಮತ್ತು ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುವಾಗ ಪಾರ್ಟಿಯಿಂದ ಏನಾದರೂ ಬಣ್ಣ ಹಚ್ಚಿನೋಡಿ ಅದರ ಒಂದು ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಂದು ತಾವು ತಿಳಿದುಕೊಳ್ಳಬಾರದು. ನ್ಯೂನತೆ ಇರುವುದನ್ನು ಸರಿಪಡಿಸುತ್ತೇವೆ. ಯಾರು ಚೆನ್ನಾಗಿ ಕೆಲಸ ಮಾಡುತ್ತಾರೆ, ಅವರ ಬೆನ್ನನ್ನು ತಟ್ಟುತ್ತೇವೆ. ಅಂತಹವರಿಗೆ ಉತ್ತೇಜನ ಕೊಡುವುದು ಸರ್ಕಾರದ ಧರ್ಮ. ಅದನ್ನು ಮಾಡುತ್ತೇವೆ. ಆ ವಿಚಾರದಲ್ಲಿ ನಾವು ಹಿಂದೆ ಬೀಳುವುದಿಲ್ಲ.

ಮಾನ್ಯ ನಾಗಣ್ಣನವರು ಆಕ್ಟ್ರಾಯ್ ರದ್ದು ಮಾಡಬೇಕು, ಇದರಲ್ಲಿ ಅವ್ಯವಹಾರಗಳು ಮತ್ತು ಲಂಚರುಷುವತ್ತುಗಳು ನಡೆಯುತ್ತಿವೆ ಎಂಬುದಾಗಿ ಹೇಳಿದರು. ಬಹಳ ದಿವಸದಿಂದ ಇದನ್ನು ತೆಗೆಯಬೇಕೆಂದು ಎಲ್ಲ ಕಡೆ ಮಾತನಾಡುತ್ತಾರೆ. ಅದನ್ನು ಏತಕ್ಕೆ ತೆಗೆಯಬೇಕು ಎಂಬುದು ನನಗೆ ಇವೊತ್ತಿನವರೆಗೆ ಅರ್ಥವಾಗಿಲ್ಲ. ಒಂದು ಉದಾಹರಣೆ ಹೇಳಬೇಕೆಂದರೆ, ದಿನಬಳಕೆ ವಸ್ತುಗಳ ಬೆಲೆ ಹೆಚ್ಚುತ್ತಾ ಹೋದಂತೆಲ್ಲಾ ಸರ್ಕಾರದವರು ನೌಕರರ ತುಟ್ಟಿಭತ್ಯವನ್ನು ಹೆಚ್ಚಿಸುತ್ತಾ ಬಂದಿದ್ದಾರೆ. ಸರ್ಕಾರದವರು ತನ್ನ ನೌಕರರ ತುಟ್ಟಿಭತ್ಯವನ್ನು ಹೆಚ್ಚಿಸುತ್ತಾ ಬಂದಂತೆಲ್ಲಾ ವರ್ತಕರು ಸಹ ಅಷ್ಟೇ ರೂಪದಲ್ಲಿ ಬೆಲೆಗಳನ್ನು ಹೆಚ್ಚಿಸುತ್ತಾ ಹೋಗುತ್ತಿದ್ದಾರೆ. ಒಟ್ಟಿನಲ್ಲಿ ಸರ್ಕಾರದವರು ಹೆಚ್ಚಿಸುವ ಸಂಬಳದಿಂದ ನೌಕರರಿಗೆ ಅನುಕೂಲವಾಗದೆ, ವರ್ತಕರಿಗೆ ಮತ್ತು ಬೇರೆ ಬೇರೆ ಕ್ಷೇತ್ರಗಳಲ್ಲಿ ವ್ಯವಹಾರ ಮಾಡುವವರಿಗೆ ಅನುಕೂಲವಾಗುತ್ತಿದೆ. ಈ ಒಂದು ಕಾರಣದಿಂದ ಇಂದಿನ ಲಿವಿಂಗ್ ಇಂಡೆಕ್ಸ್ ಏನು ಇದೆ, ಅದು ವಾಸ್ತವಿಕವಾದುದು ಎಂದು ನನಗೆ ಭಾಸವಾಗಿಲ್ಲ. ಒಂದು ಪಕ್ಷ ಆಕ್ಟ್ರಾಯ್‌ನ್ನು ರದ್ದು ಮಾಡಿದರೆ, ಅದರಂತೆ ವರ್ತಕರು ಸಹ ಆಹಾರಪದಾರ್ಥಗಳ ಬೆಲೆಗಳನ್ನು ಕಡಿಮೆ ಮಾಡಿ ಮಾರಾಟ ಮಾಡಿದರೆ ನಮಗೆ ಸಂತೋಷವಾಗುತ್ತದೆ. ಆದರೆ ವ್ಯಾಪಾರಗಾರರು ಆ ರೀತಿ ಮಾಡುವುದಿಲ್ಲವೆಂದು ನನಗನ್ನಿಸುತ್ತದೆ. ಇದುವರೆಗೆ ಬಡವರು ಯಾರು ನನ್ನ ಹತ್ತಿರ

(ಶ್ರೀ ಬಿ. ಬಸವಲಿಂಗಪ್ಪ)

ಬಂದು ಆಕ್ಟ್ರಾಯ್‌ನ್ನು ರದ್ದು ಮಾಡಿ ಎಂದು ಕೇಳಿಲ್ಲ. ಕೇವಲ ವ್ಯಾಪಾರ ಮಾಡುವವರು ಮತ್ತು ಹೋಲ್‌ಸೇಲ್ ಡೀಲರ್ಸ್ ಬಂದು ಆಕ್ಟ್ರಾಯ್ ರದ್ದು ಮಾಡಬೇಕೆಂದು ಕೇಳಿದ್ದಾರೆಯೇ ಹೊರತು ಬಡವರಾರೂ ಬಂದು ನನ್ನನ್ನು ಕೇಳಿಲ್ಲ. ಈ ಆಕ್ಟ್ರಾಯ್‌ನಿಂದ ನಮ್ಮ ಕಾರ್ಪೊರೇಷನ್‌ಗೆ ಸುಮಾರು 2 ಕೋಟಿ ರೂಪಾಯಿಗಳ ಆದಾಯ ಇದೆ. ಈ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡಿದ್ದೇ ಆದರೆ, ಅದರಿಂದ ನಮ್ಮ ಹಣದ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನಿವಾರಣೆ ಮಾಡುವುದಕ್ಕೆ ಅವಕಾಶವಾಗುತ್ತದೆಂದು ನನಗನ್ನಿಸುತ್ತದೆ. ಆಕ್ಟ್ರಾಯನ್ನು ರದ್ದು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದರೇ ಹೊರತು, ಅದಕ್ಕೆ ಪ್ರತಿಯಾಗಿ ಆದಾಯ ಪಡೆದುಕೊಳ್ಳಲು ಯಾವ ಸಲಹೆಯನ್ನು ಸಹ ಕೊಡಲಿಲ್ಲ. ಮುಖ್ಯವಾಗಿ ಈಗ ಸಾಮಾನುಗಳ ಬೆಲೆಗಳು ಹೆಚ್ಚುತ್ತಾ ಹೋಗಿರುವುದು ಅದಕ್ಕನುಸಾರವಾಗಿ ನೌಕರರ ತುಟ್ಟಿಭತ್ಯವನ್ನು ಹೆಚ್ಚಿಸುತ್ತಾ ಹೋಗಿರುವುದು ಏನು ಬೆಳೆದುಕೊಂಡು ಬಂದಿದೆ, ಇದು ಸರಿಹೋಗುವವರೆಗೂ ಈ ಆಕ್ಟ್ರಾಯ್‌ನ್ನು ರದ್ದು ಮಾಡುವುದಕ್ಕಾಗುವುದಿಲ್ಲ. ಒಂದು ಪಕ್ಷ ಆಕ್ಟ್ರಾಯನ್ನು ರದ್ದು ಮಾಡಿದರೆ ಸಾಮಾನುಗಳ ಬೆಲೆ ಏನೂ ಕಡಿಮೆಯಾಗುವುದಿಲ್ಲ. ಆದ್ದರಿಂದ ಆಕ್ಟ್ರಾಯನ್ನು ರದ್ದು ಮಾಡುವ ಪ್ರಶ್ನೆ ನನ್ನ ಮನಸ್ಸಿನಲ್ಲಿ ಇಲ್ಲ.

ಇನ್ನು ಈಗಿನ ಕಾರ್ಪೊರೇಷನ್ ಆಕ್ಟ್‌ಗಳು ಸರಿಯಾಗಿಲ್ಲ, ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಒಂದು ರೀತಿಯ ಆಕ್ಟ್ ಇದ್ದರೆ, ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್‌ಗೆ ಒಂದು ರೀತಿಯ ಆಕ್ಟ್ ಇದೆ. ಇದು ಸರಿಯಿಲ್ಲ, ಎಲ್ಲ ಕಾರ್ಪೊರೇಷನ್‌ಗಳಿಗೂ ಅನ್ವಯವಾಗುವಂತೆ ಏಕರೂಪವಾದ ಆಕ್ಟ್‌ನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಇದು ಒಳ್ಳೆಯ ಸೂಕ್ತವಾಗಿರತಕ್ಕಂಥ ಸಲಹೆಯಾಗಿದೆ. ಸರ್ಕಾರದ ಮುಂದೆ ಕೂಡ ಈ ಸಲಹೆ ಇದೆ. ಇದರ ಬಗ್ಗೆ ಒಂದು ಬಿಲ್ ನ್ನು ಮುಂದಿನ ಸೆಷನ್‌ನೊಳಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ರೆಕ್ರೂಟ್‌ಮೆಂಟ್‌ರೂಲ್ಸ್‌ನ್ನು ಇನ್ನೂ ತಯಾರು ಮಾಡಿಲ್ಲ. ಈ ಒಂದು ತಪ್ಪಿಗಾಗಿ ಸರ್ಕಾರ ರಾಜೀನಾಮೆ ಕೊಡಬೇಕೆಂದು ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀಮಾನ್ ನಾಗಣ್ಣನವರು ಹೇಳಿದರು. ಅವರು ಈ ವಿಚಾರವನ್ನು ಸ್ವಲ್ಪ ತನಿಖೆ ಮಾಡಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು. ತಾ. 3—3—1971ರಲ್ಲಿಯೇ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಿದ್ದೇವೆ. ಅದು ಅವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಈಗಲಾದರೂ ಮಾನ್ಯ ಸದಸ್ಯರು ತಮ್ಮ ಭಾವನೆಯನ್ನು ಸರಿಪಡಿಸಿಕೊಳ್ಳುತ್ತಾರೆಂದು ತಿಳಿದಿದ್ದೇನೆ.

ಇನ್ನು ಮಾನ್ಯ ಕೃಷ್ಣನ್ ಅವರು, ಮಾನ್ಯ ವಾಟಾಳ್ ನಾಗರಾಜ್ ಅವರು ಮತ್ತು ಮಾನ್ಯ ಶಾಮಣ್ಣನವರು ಮೋಟಾರ್ ವೆಹಿಕಲ್ಸ್‌ನಿಂದ ನಗರ ಕಾರ್ಪೊರೇಷನ್‌ಗೆ ಎಷ್ಟು ಉತ್ಪತ್ತಿ ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲ ಎಂಬುದಾಗಿ ಹೇಳಿದರು. ಅದನ್ನು ಪರಿಶೀಲನೆ ಮಾಡಿ ಹೆಚ್ಚು ಉತ್ಪತ್ತಿ ಬರುವ ಹಾಗೆ ಮಾಡಬೇಕೆಂದು ಸರ್ಕಾರದ ಮನಸ್ಸಿನಲ್ಲಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

Sri AZEEZ SAIT (Minister for Labour).—Since the Motor Vehicles Tax is directly concerned with me, I would like to inform the House that at this moment we are not in a position to commit anything. The matter has to be examined.

Sri KONANDUR LINGAPPA.—The Minister cannot intervene in the debate at this state. ಅವರು ಪರಿಶೀಲಿಸುತ್ತೇವೆಂದು ಆಗಲೇ ಹೇಳಿದ್ದಾರೆ.

Sri AZEEZ SAIT.—I have given this information for the benefit of the Hon. Minister for Municipal Administration.

ಶ್ರೀ ಬಿ. ಬಸವಲಿಂಗಪ್ಪ.—ನಾನು ಪರಿಶೀಲಿಸುತ್ತೇನೆ ಎಂದು ಹೇಳಿದೆ. ಅಂದರೆ ಕೊಡುತ್ತೇನೆ ಎಂದು ಅರ್ಥವಲ್ಲ.

35 ಹಳ್ಳಿಗಳನ್ನು ಕಾರ್ಪೊರೇಷನ್ನಿಗೆ ಸೇರಿಸಿಕೊಂಡಿದ್ದಾರೆ. ಅಲ್ಲಿರತಕ್ಕ ಜನಗಳಿಗೆ ನೀರಿನ ಸೌಕರ್ಯ, ರಸ್ತೆಯ ಸೌಕರ್ಯ ಇತ್ಯಾದಿ ನಾಗರೀಕ ಸೌಕರ್ಯಗಳನ್ನು ಸರಿಯಾಗಿ ಒದಗಿಸಿ ಕೊಟ್ಟಿಲ್ಲ ಎಂದು ಹೇಳಿ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಈಗ ಅವರ ಅವಗಾಹನೆಗೆ ತರುವುದಕ್ಕೆ ಇಚ್ಛೆಪಡುತ್ತೇನೆ, ನಾವು ಈ ವರ್ಷ ಆ ಹಳ್ಳಿಗಳಿಗೆ ನಾಗರೀಕ ಸೌಕರ್ಯಗಳನ್ನು

ಒದಗಿಸಿಕೊಡುವುದಕ್ಕಾಗಿ ಬಜೆಟ್ಟಿನಲ್ಲಿ 15 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಅವುಗಳಿಗೆ ಸಂಬಂಧಪಟ್ಟ ಎಲ್ಲಾ ಅಂದಾಜುಗಳನ್ನೂ ಮಾಡಿದ್ದೇವೆ. ಆ 35 ಹಳ್ಳಿಗಳಿಗೆ ಎಲ್ಲಾ ನಾಗರೀಕ ಸೌಲಭ್ಯಗಳನ್ನೂ ಒದಗಿಸಲು 84 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ಮಾಡಿದ್ದೇವೆ. ಒಂದು ಫೇಜ಼್ಡ್ ಪ್ರೋಗ್ರಾಮ್ ಹಾಕಿಕೊಂಡು ಅದರ ಪ್ರಕಾರ ಆ ಕೆಲಸಗಳನ್ನು ಮಾಡಿ ಆದಷ್ಟು ಜಾಗ್ರತೆ ಆ ಕೆಲಸಗಳನ್ನು ಮುಗಿಸಬೇಕೆಂದಿದ್ದೇವೆ. ಮಾನ್ಯ ಸದಸ್ಯರು ಇದನ್ನು ಕೇಳಿ ಸಂತೋಷ ಪಡುತ್ತಾರೆ ಎಂದು ನಾನು ನಿರೀಕ್ಷಣೆ ಮಾಡುತ್ತೇನೆ.

ವಿಜಿಲೆನ್ಸ್ ಕಮಿಷನಿನ ಬಗ್ಗೆ ಕೆಲವು ಮಾನ್ಯ ಸದಸ್ಯರು ಟೀಕೆ ಮಾಡಿದ್ದಾರೆ. ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ, ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಇದರಲ್ಲಿ 18 ಜನ ಅಧಿಕಾರಿಗಳನ್ನು ಮಾತ್ರ ಸಸ್ಪೆನ್‌ಷನ್‌ನಲ್ಲಿಟ್ಟಿದ್ದಾರೆ, ಇನ್ನು ಬೇರೆಯವರ ಮೇಲೆ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರು. ಮಾನ್ಯ ಸದಸ್ಯರಿಗೆ ನಾನು ಹೇಳುತ್ತೇನೆ, ಯಾರು ಯಾರು ತಪ್ಪಿತಸ್ಥರು ಇದ್ದಾರೆ ಅವರು ಯಾವ ಡಿಪಾರ್ಟ್‌ಮೆಂಟಿಗೆ ಸೇರಿರಲಿ, ಅವರು ಜ್ಯೂನಿಯರ್ ಇಂಜಿನಿಯರ್ ಆಗಿರಲಿ, ಅಸಿಸ್ಟೆಂಟ್ ಇಂಜಿನಿಯರ್ ಆಗಿರಲಿ, ಅಥವಾ ಯಾವ ಅಧಿಕಾರಿಯಾಗಿರಲಿ ಅವರು ವಿಜಿಲೆನ್ಸ್ ಕಮಿಷನ್ನಿನ ಶಿಫಾರಸ್ಸಿಗೆ ಒಳಪಟ್ಟಿದ್ದರೆ ಅವರ ಮೇಲೆ ಉಗ್ರವಾದ ಕ್ರಮ ತೆಗೆದು ಕೊಳ್ಳುತ್ತೇವೆಂದು ನಾನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಆದ್ದರಿಂದ 18 ಜನ ಅಧಿಕಾರಿಗಳ ಮೇಲೆ ಮಾತ್ರ ಕ್ರಮತೆಗೆದುಕೊಂಡಿದ್ದಾರೆ ಬಾಕಿಯವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. ಯಾರು ಯಾರು ತಪ್ಪಿತಸ್ಥರಾಗಿದ್ದಾರೆಯೋ ಅವರೆಲ್ಲರನ್ನೂ ಶೀಘ್ರದಲ್ಲಿಯೇ ಹೊರಪಡಿಸುತ್ತೇವೆ. ಯಾರು ಯಾರು ಕಾನೂನನ್ನು ಧೂಳಿಪಟ ಮಾಡಿ ಈ ಒಂದು ಸಂಸ್ಥೆಗೆ ಕಾರ್ಪೋರೇಷನ್ನಿಗೆ ಲುಕ್ಸಾನು ಮಾಡಿದ್ದಾರೆಯೋ ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳತಕ್ಕಂಥಾದ್ದು ಸೂಕ್ತ ಎನಿಸುತ್ತದೆ. ಬಹಳ ದಿವಸಗಳಿಂದ ಅನೇಕರು ಈ ದೇಶದಲ್ಲಿ ಲಂಚ ಹೋಗಬೇಕು ಎಂದು ಹೇಳುತ್ತಿದ್ದಾರೆ. ಯಾವರೂಪದಲ್ಲಿ ಅದನ್ನು ಕಿತ್ತುಹಾಕಿದರೂ ಇನ್ನೊಂದು ರೂಪದಲ್ಲಿ ಅದು ಬರುತ್ತದೆ. ಲಂಚ ಕೊಡತಕ್ಕವರು ಅಧಿಕಾರಿಗಳಿಗೆ ಮನೆಗೆ ಹೋಗಿ ಲಂಚವನ್ನು ಕೊಡುತ್ತಾರೆ. ಅಥವಾ ಇನ್ನೊಬ್ಬರ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಲಂಚವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಹೀಗೆ ನಾನಾರೂಪದಲ್ಲಿ ಲಂಚಗುಳಿತನ ನಡೆಯುತ್ತಿದೆ. ಅಧಿಕಾರಿಗಳು ವಿಶ್ವ ರೂಪದಲ್ಲಿ ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ. ಅಂಥ ವರ ಮೇಲೆ ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಈಗ ನಾವು ಯಾವ ಅಧಿಕಾರಿ ಗಳನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದೇವೆಯೋ ಅವರು ತಪ್ಪಿತಸ್ಥರಲ್ಲದಿದ್ದರೆ, ಅವರು ತಪ್ಪಿತಸ್ಥರಲ್ಲ ಎಂದು ರುಜುವಾತು ಆದರೆ ಅವರಮೇಲೆ ಇರತಕ್ಕ ಸಸ್ಪೆನ್‌ಷನ್ ಆಜ್ಞೆಯನ್ನು ರದ್ದುಗೊಳಿಸಿ, ಆ ಅಧಿಕಾರಿಗಳನ್ನು ಗೌರವದಿಂದ ಕಾಣತಕ್ಕಂಥಾ ವ್ಯವಸ್ಥೆ ಮಾಡುತ್ತೇವೆ. ಪ್ರಾಮಾಣಿಕರಾಗಿ ಕೆಲಸಮಾಡತಕ್ಕಂಥ ಅಧಿಕಾರಿಗಳಿಗೆ ಪ್ರಮೋಷನ್ ಕೊಡೋಣ,. ಸ್ವೇಚ್ಛಾವೃತ್ತಿಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳಮೇಲೆ ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಹಿಂಜರಿಯುವುದಿಲ್ಲ. ಅಂಥಾ ವಿಷಯಗಳು ನಮ್ಮ ಗಮನಕ್ಕೆ ಬಾರದೇ ಹೋದರೆ ಆ ಬಗ್ಗೆ ಕ್ಷಮಿಸ ಬೇಕು, ಆ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಬೇಕಾಗುತ್ತದೆ. ನಾನು ತಮಗೆ ಮೊದಲೇ ತಿಳಿಸಿದ್ದೇನೆ ಕಾರ್ಪೋರೇಷನ್ನಿನ ಅಧಿಕಾರವನ್ನು, ಆಡಳಿತವನ್ನು ಎಲ್ಲವನ್ನೂ ಸರ್ಕಾರ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದೆ ಎಂದು. ಆದ್ದರಿಂದ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸಂತೋಷಪಟ್ಟರೆ ಸಾಕು ಎಂದು ಕಾಣುತ್ತದೆ. ಆಮೇಲೆ ನ್ಯಾಷನಲ್ ಫೇರ್ ವಿಷಯವನ್ನು ಹೇಳಿದ್ದಾರೆ. ಈ ಸಂಬಂಧವಾಗಿ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ. ಆ ಭೂಮಿ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯವರಿಗೆ ಸೇರಿದ್ದು. ಆ ಬಗ್ಗೆ ಆ ಇಲಾಖೆಯವರು ಏನೇನು ಕ್ರಮ ತೆಗೆದುಕೊಂಡಿದ್ದಾರೆಯೋ ಗೊತ್ತಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಹೇಳುತ್ತೇನೆ. ಯಾರೇ ಆಗಿರಲಿ, ಅವರು ಯಾವುದೇ ಪಾರ್ಟಿಗೆ ಸೇರಿರಲಿ ಪುರಸಭೆಯ ಕಾನೂನು ಮುರಿದು ಸ್ವೇಚ್ಛೆಯಾಗಿ ವರ್ತಿಸಿದರೆ ಅವರ ಮೇಲೆ ಕ್ರಮತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯ.

ಶ್ರೀ ವಾಟಾಳ್ ನಾಗರಾಜ್.—ಎಂ. ಎಸ್. ಆರ್. ಟಿ. ಸಿ. ಯವರು ಅಲ್ಲಿ ನ್ಯಾಷನಲ್ ಫೇರ್ ನಡೆಸಿದವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಂತೆ ಕಾಣುವುದಿಲ್ಲ.

Sri AZEEZ SAIT.—It is most undesirable on the part of the Hon. Members to mention that the Government is not able to take action in the Subhash Nagar Affair. The Hon. Minister for Municipal Administration will kindly excuse me for my interference in the middle.

(SRI AZEEZ SAIT)

When it was brought to my notice that Sri Dayananda Sagar was continuing the National Fair in Subash Nagar, I took action and trying remove him. A decision is already taken in the matter. In the matter of arrears of rent he is due to Government, action is already taken. There is no question of by-passing anybody. Every pie will be collected.

Sri M. S. KRISHNAN.—It has not been collected. As far as my knowledge goes he is still in possession of the land.

Sri AZEEZ SAIT.—The fact was that he was continuing in possesion of that land when it was brought to my notice. He was still continuing even after the expiry of the lease period. I took action and took the possesion of the land. Whatever the money which was in deposit has been adjusted. Whatever that remains in arrears will be recovered.

ಶ್ರೀ ಬಿ. ಬಸವಲಿಂಗಪ್ಪ.—ಯಾರು ಕಾನೂನನ್ನು ಉಲ್ಲಂಘನೆ ಮಾಡುತ್ತಾರೆಯೋ ಅಂಥವರ ಮೇಲೆ ಸರ್ಕಾರ ಏನು ಕ್ರಮತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಮುನಿಸಿಪಾಲಿಟಿ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮುನಿಸಿಪಾಲಿಟಿ ಯಲ್ಲಿ ಏನು ಕಾನೂನು ಇದೆ ಅದಕ್ಕನುಸಾರವಾಗಿ ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ನಾವು ಶೀಘ್ರದಲ್ಲಿಯೇ ಪ್ರಜಾಪ್ರಭುತ್ವವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಪೌರಸಭೆಗಳನ್ನು ನಡೆಸುವುದಕ್ಕೆ ಸಾಧ್ಯವಾಗುವಂತೆ ಪುರಸಭೆಯ ಶಾಸನಕ್ಕೆ ತಿದ್ದುಪಡಿಯನ್ನು ತರಬೇಕೆಂದಿದ್ದೇವೆ. ಆ ಬಗ್ಗೆ ಎಲ್ಲೆಲ್ಲಿ ಏನೇನು ತಿದ್ದುಪಡಿಗಳನ್ನು ತರಬೇಕೋ ಅದನ್ನು ತಂದು ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಮುನಿಸಿಪಲ್ ಏರಿಯಾಗಳನ್ನು ಯಾವ ಯಾವುದನ್ನು ಅಭಿವೃದ್ಧಿ ಮಾಡಬೇಕು, ಎಲ್ಲೆಲ್ಲಿ ಸೀವರೇಜ್ ಸಿಸ್ಟಂ ಆಗಬೇಕು ಎಲ್ಲೆಲ್ಲಿ ನೀರಿನ ಸೌಕರ್ಯ ಒದಗಿಸಿಲ್ಲ ಯಾವ ಯಾವ ಬಡಾವಣೆಗಳನ್ನು ನಿರ್ಮಾಣ ಮಾಡಿ ಅವುಗಳನ್ನು ಅಭಿವೃದ್ಧಿಮಾಬೇಕು ಇಂಥವುಗಳೆಲ್ಲವನ್ನು ಮಾಡುವ ದೃಷ್ಟಿಯಿಂದ ಮೈಸೂರು ದೇಶದಲ್ಲಿ ಒಂದು ಅರ್ಬನ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಎಂದು ಸ್ಥಾಪನೆ ಮಾಡಿದ್ದೇವೆ. ಅದನ್ನು ಸ್ಥಾಪನೆ ಮಾಡಿದಮೇಲೆ ಅದಕ್ಕೆ ಸರ್ಕಾರದವರು ಒಂದು ಲಕ್ಷ ರೂಪಾಯಿ ಷೇರ್ ಕ್ಯಾಪಿಟಲ್ ಹಾಕಿದ್ದಾರೆ. ಆದರೆ ಅದಕ್ಕೆ ಬೇರೆ ಯಾವ ಮುನಿಸಿ ಪಾಲಿಟಿಗಳೂ ಅಷ್ಟು ಆಸಕ್ತಿಯನ್ನು ವಹಿಸಿ ಷೇರ್‌ದಾರರು ಆಗಲಿಲ್ಲ. ಆದ್ದರಿಂದ ಇವೊತ್ತಿನ ವರೆಗೂ ಈ ಒಂದು ಅರ್ಬನ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಯಾವ ಅಭಿವೃದ್ಧಿ ಕಾರ್ಯಗಳನ್ನೂ ತೆಗೆದುಕೊಳ್ಳುವುದಕ್ಕೆ ಆಗಿಲ್ಲ.

ಇನ್ನೊಂದು ಏನೆಂದರೆ ಎಲ್. ಐ. ಸಿ. ಯವರು ಸಹ ಇದು ಸ್ಟ್ಯಾಟ್ಯುಟರಿ ಸಂಸ್ಥೆಯಲ್ಲವೆಂಬ ಭಾವನೆಯಿಂದ ಅವರಿಗೆ ಸಹಾಯ ಕೊಡುವುದಕ್ಕೆ ನಿರಾಕರಿಸಿದ್ದಾರೆ, ಇನ್ನು ಸರ್ಕಾರದವರು ಒಂದು ಅರ್ಬನ್ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕೆಂಬುದನ್ನು ವಿಚಾರ ಮಾಡುತ್ತಿದೆ. ಅದರ ಬಗ್ಗೆ ಒಂದು ಬಿಲ್ಲನ್ನು ಸಹ ತಯಾರು ಮಾಡಿ ತಮ್ಮ ಮುಂದೆ ಆದಷ್ಟು ಬೇಗನೆ ಇಡುತ್ತೇವೆ. ಹೀಗೆ ಮಾಡುವಂತಹ ಅರ್ಬನ್ ಬೋರ್ಡಿಗೂ ಸ್ಲಮ್ ಕ್ಲಿಯರೆನ್ಸ್ ಬೋರ್ಡಿಗೂ ಬಹಳ ವ್ಯತ್ಯಾಸವಿದೆ. ಇದೇ ರೀತಿ ಇಂಡಿಯಾ ಸರ್ಕಾರದವರಲ್ಲಿ ಒಂದು ಹೌಸಿಂಗ್ ಅರ್ಬನ್ ಡೆವೆಲಪ್‌ಮೆಂಟ್ ಸಂಸ್ಥೆ ಇದೆ. ಅಲ್ಲಿಂದ ಕೂಡ ಯಾರಾದರೂ ಟೌನ್ ಡೆವಲಪ್ ಮಾಡುವುದಕ್ಕೆ, ಬಡಾವಣೆಗಳನ್ನು ಮಾಡುವುದಕ್ಕೆ ಸ್ಕೀಮು ತಯಾರು ಮಾಡಿದರೆ, ಅದಕ್ಕೆ ಸಾಲವನ್ನು ಕೊಡುವ ವ್ಯವಸ್ಥೆ ಇದೆ. ಆದರೆ ಯಾರೂ ಹೆಚ್ಚಾಗಿ ಅಲ್ಲಿಂದ ಸಾಲ ತೆಗೆದುಕೊಂಡಿಲ್ಲ. ಆದ್ದರಿಂದ ನಾವು ಅರ್ಬನ್ ಡೆವಲಪ್‌ಮೆಂಟ್ ಬೋರ್ಡನ್ನು ಅತೀ ಶೀಘ್ರವಾಗಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮುಖ್ಯವಾಗಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ವಿಷಯ, ಮೊನ್ನೆ ತಾವೆಲ್ಲ ಪತ್ರಿಕೆಯಲ್ಲಿ ಒಂದು ವಿಚಾರವನ್ನು ಓದಿರಬಹುದು. ಡೆಲ್ಲಿಯಲ್ಲಿ ಮೊನ್ನೆ ಹೌಸಿಂಗ್ ಮಂತ್ರಿಗಳ ಕಾನ್‌ಫರೆನ್ಸ್ ಆಯಿತು. ಅಲ್ಲಿ ಸೋಷಿಯಲೈಸೇಷನ್ ಆಫ್ ಅರ್ಬನ್ ಪ್ರಾಪರ್ಟಿ ಮಾಡಲೇಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದನ್ನು ಒಪ್ಪಿಕೊಂಡು ಇಲ್ಲಿಯೂ ಸೋಷಿಯಲೈಸೇಷನ್ ಆಫ್ ಅರ್ಬನ್ ಪ್ರಾಪರ್ಟೀಸ್ ಬಗ್ಗೆ ಒಂದು ಕಾನೂನು ಏಕೆ ತರಬಾರದೆಂದು ಯೋಚನೆ

ಮಾಡುತ್ತಿದ್ದೇವೆ. ಇನ್ನು ಸೈಟ್‌ಗಳ ವಿತರಣೆಯ ವಿಚಾರದಲ್ಲಿ ನಿಯಮಗಳನ್ನು ಬದಲಾವಣೆ ಮಾಡಬೇಕೆನ್ನುವ ವಿಚಾರ ಬಹಳ ದಿವಸಗಳಿಂದ ಸರ್ಕಾರದ ಗಮನದಲ್ಲಿತ್ತು, ಎರಡು ಮೂರು ದಿವಸಗಳಲ್ಲಿ ಅದನ್ನು ಹೊರಗೆಡಹುತ್ತೇವೆ. ಆ ನಿಯಮಗಳನ್ನು ಮಾಡುವಾಗ ಎಲ್ಲರಿಗೂ ಒಂದೇ ರೀತಿಯಾದ ಬೆಲೆ ಇಟ್ಟರೆ ಬಡವರಿಗೆ ಸಿಗುವುದಿಲ್ಲ; ಮತ್ತು ಪ್ಯಾಲೆಸ್ ಆರ್ಚರ್ಡ್‌ನಂತಹ ಸ್ಥಳಗಳಲ್ಲಿ ಸೈಟ್ ಸಿಗುವುದಿಲ್ಲವೆಂದು ಕೆಲವರು ಹೇಳಿದರು. ಅದಕ್ಕೋಸ್ಕರ ನಾನು ಆಗಲೇ ಹೇಳಿದಂತೆ ಒಂದು ನೀಡ್ ಬೇಸ್‌ಡ್ ಪ್ರಿಯಾರಿಟಿ ಮೇಲೆ ಯಾರು ಬಡವರಿದ್ದಾರೆ ಮತ್ತು ಯಾರು 200 ರೂಪಾಯಿ ಗಿಂತ ಕಡಿಮೆ ಆದಾಯವುಳ್ಳವರಾಗಿರುತ್ತಾರೆ, ಅಂಥವರಿಗೆ ರಿಯಾಯಿತಿಯಲ್ಲಿ ಸೈಟುಗಳನ್ನು ಕೊಡಬೇಕೆಂಬ ನಿಯಮಗಳನ್ನು ಮಾಡುತ್ತಿದ್ದೇವೆ. ಇನ್ನು ರೆವಿನ್ಯೂ ಸೈಟುಗಳ ಬಗ್ಗೆ ಮಾನ್ಯ ಶ್ರೀ ಕೃಷ್ಣನ್‌ರವರು, ನಾಗಣ್ಣನವರು, ಶಾಮಣ್ಣನವರು, ಹಮೀದ್ ಶಾರವರು—ಮುಂತಾದವರು ಸರ್ಕಾರಕ್ಕೆ ಒಂದು ನಿವೇದನೆಯನ್ನು ಮಾಡಿದರು. ಯಾರ‍್ಯಾರು ನ್ಯಾಯಬದ್ಧರಾಗಿರತಕ್ಕಂಥವರು, ಮತ್ತು ಸೈಟ್ ಇಲ್ಲದಿರತಕ್ಕವರು ಇದ್ದಾರೆ, ಅಂಥ ಜನರು ಕೇಳಿದಾಗ, ಅವರಿಗೆ ಸಹಾನುಭೂತಿ ಯನ್ನು ತೋರಿಸಿ ಅನೂಕೂಲ ಮಾಡಿಕೊಡಬೇಕೆಂದು ಹೇಳಿದರು. ಸರ್ಕಾರದವರು ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ; ಮತ್ತು ಅದರ ಬಗ್ಗೆ ಒಂದು ತೀರ್ಮಾನವನ್ನು ಬೇಗನೇ ತೆಗೆದು ಕೊಳ್ಳುತ್ತಾರೆಂದು ಹೇಳುತ್ತೇನೆ.

ಇನ್ನು ಯಾರ‍್ಯಾರು ಲ್ಯಾಂಡ್‌ಲೆಸ್ ಜನರಿದ್ದಾರೆ, ಅವರಿಗೆ ಸೈಟ್ ಕೊಡಬೇಕೆಂದು ಒಂದು ನೀತಿಯನ್ನು ಇಟ್ಟುಕೊಂಡಿದೆ. ಆದ್ದರಿಂದ ಒಂದು ಲಕ್ಷಕ್ಕಿಂತಲೂ ಹೆಚ್ಚು ಸೈಟುಗಳನ್ನು 15ನೇ ಆಗಸ್ಟ್ 72 ರೊಳಗೆ ಹಂಚಿ ಸ್ವಾಧೀನ ಪತ್ರಗಳನ್ನು ಕೊಡುತ್ತೇವೆಂಬ ಮಾತನ್ನು ಇಲ್ಲಿ ಹೇಳುತ್ತೇನೆ. ಅದರದ್ದು ಒಂದು ಸ್ಟೇಟ್‌ಮೆಂಟ್ ಇಲ್ಲಿ ಇದೆ. ನಮಗೆ ಒಂದು ಲಕ್ಷದ 11 ಸಾವಿರದ 205 ಸೈಟುಗಳು ಈಗ ದೊರೆಯುತ್ತವೆ. ಇನ್ನೂ 30—40 ಸಾವಿರ 15ನೇ ತಾರೀಖಿನೊಳಗೆ ಆಗಬಹುದು ಎಂಬ ನಿರೀಕ್ಷಣೆ ಇದೆ. ಕೆಲವರು ಬರೇ ಹೇಳಿಕೆ ಕೊಟ್ಟು ಸುಮ್ಮನಿರಬಾರದು ; ಕಾರ್ಯದಲ್ಲಿಯೂ ಮಾಡಿ ತೋರಿಸಬೇಕೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆ. ನಮ್ಮ ಪಾರ್ಟಿ ಪ್ರಣಾಳಿಕೆಯಲ್ಲಿ ಏನೊಂದು ವಾಗ್ದಾನವನ್ನು ದೇಶಕ್ಕೆ ಕೊಟ್ಟಿದ್ದೇವೆ, ಅದನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಇದರಿಂದ ಲ್ಯಾಂಡ್‌ಲೆಸ್ ಜನರು, ಲೇಬರರ್ಸ್ ಮತ್ತಿತರ ಬಡ ಜನರು ನಿವೇಶನಗಳನ್ನು ಪಡೆಯುತ್ತಾರೆ. ಅಷ್ಟೇ ಅಲ್ಲದೆ ಮುಂದಿನ ತಿಂಗಳು, ಅಂದರೆ ಸ್ವಾತಂತ್ರ್ಯೋತ್ಸವದ ಸಿಲ್‌ವರ್ ಜೂಬಿಲಿ ಸಮಯದಲ್ಲಿ ಸುಮಾರು 10 ಸಾವಿರ ಮನೆಗಳನ್ನು ಬಡವರಿಗೆ ಕಟ್ಟಿಸಿ ಕೊಡಬೇಕೆಂಬ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಶೀಘ್ರದಲ್ಲೇ ಅದರ ಬಗ್ಗೆ ಸರ್ಕಾರದವರು ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತಾರೆಂದು ಹೇಳುತ್ತೇನೆ.

ಇನ್ನು ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ ಬಗ್ಗೆ ಬಹಳ ತೀವ್ರವಾದ ಚರ್ಚೆ ಯಾಗಿದೆ. ಅದಲ್ಲದೆ ಅಲ್ಲಿರತಕ್ಕ ಛೇರ್‌ಮನ್ ಬಗ್ಗೆಯೂ ಬಹಳ ತೀವ್ರವಾದ ಟೀಕೆಗಳನ್ನು ಕೆಲವು ಸದಸ್ಯರು ಮಾಡಿದ್ದಾರೆ. ಎಷ್ಟೋ ದಿವಸಗಳ ಹಿಂದೆ ಆಗಿದ್ದಂತಹ ವ್ಯವಹಾರಗಳ ಬಗ್ಗೆ ನನಗೆ ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಆಗಲಿಲ್ಲ. ಅಲ್ಲಿ ಏನಾದರೂ ಅಕ್ರಮವಾಗಿದ್ದರೆ ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂಜರಿಯುವುದಿಲ್ಲ. ಎರಡನೆಯದಾಗಿ ಇಲ್ಲಿ ಆಗಿರ ತಕ್ಕಂತಹ ಏನು ಕೆಲಸ ಇದೆ, ಅದನ್ನು ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಗುಲಗಂಜಿ ಯಲ್ಲಿ ಕೆಳಗೆ ಕಪ್ಪು ಚುಕ್ಕೆ ಇದೆ ಎಂಬುದನ್ನು ಮಾತ್ರ ನೋಡಿಕೊಂಡು ಅದರ ಇಡೀ ಭಾಗವೆಲ್ಲಾ ಕಪ್ಪು ಎಂದು ತಿಳಿಯುವುದು ಸರಿಯಲ್ಲ. ಅವರು ಒಳ್ಳೆಯ ಕಾರ್ಯಗಳನ್ನು ಸಹ ಮಾಡಿದ್ದಾರೆಯೋ ಎಂಬುದನ್ನು ಸಹ ನಾವು ನೋಡಬೇಕಾಗಿದೆ. ನಾನು ಹಿಂದೆ ನಿಜಲಿಂಗಪ್ಪನವರು ಹೇಳಿದ ಹಾಗೆ ಏನೂ ಹೇಳುತ್ತಾ ಇಲ್ಲ. ಆದ್ದರಿಂದ ಏನೊಂದು ಒಳ್ಳೆಯ ಕೆಲಸವನ್ನು ಅವರು ಮಾಡಿದ್ದಾರೆ ಅದನ್ನು ಸಹ ನಾವು ನೋಡಿಕೊಳ್ಳಬೇಕಾಗಿದೆ. ಮೊನ್ನೆ ಅಲ್ಲಿಯ ಕೆಲಸಗಳಿಗೆ ಎಲ್. ಐ. ಸಿ. ಯವರು 5 ಕೋಟಿ ಕೊಡುತ್ತೇವೆಂದು ವಾಗ್ದಾನ ಮಾಡಿದರು. ಇದರ ಬಗ್ಗೆ ನಾವಿಬ್ಬರೂ ಅಲ್ಲಿಗೆ ಹೋಗಿ ಮಾತನಾಡಿ ಬಂದಿದ್ದೇವೆ. ಆದ್ದರಿಂದ ನಾವು ಯಾರು ಒಳ್ಳೆಯ ಕೆಲಸ ಮಾಡುತ್ತಾರೆ, ಅವರ ಬೆನ್ನು ತಟ್ಟ ಬೇಕಾಗುತ್ತದೆ ಎಂದು ಮಾತ್ರ ಹೇಳುತ್ತೇನೆ. ಅವರನ್ನು ಎಷ್ಟು ವರ್ಷಗಳವರೆಗೆ ಛೇರ್‌ಮನ್ನ ರಾಗಿ ಇಟ್ಟುಕೊಳ್ಳುತ್ತೀರಿ ಎಂದು ಕೇಳಿದರು. ಅವರನ್ನು ಇಲ್ಲಿಯೇ ಇಟ್ಟುಕೊಳ್ಳಬೇಕೆಂದು ನಮ್ಮ ನಿರ್ಧಾರವಲ್ಲ. ಕೆಲಸ ಜಾಸ್ತಿ ಇದ್ದರೆ ಅವರನ್ನು ಇಂಜನಿಯರ್ ಇನ್ ಚೀಫ್ ಮಾಡಬೇಕೆಂಬ ವ್ಯವಸ್ಥೆ ಬಂದಾಗ ಮಾಡಬೇಕಾಗುತ್ತದೆ. ತಕ್ಷಣ ಇದಕ್ಕೆ ಯಾರನ್ನು ಛೇರ್‌ಮನ್‌ರಾಗಿ ಮಾಡ ಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಅಡ್‌ಹಾಕ್ ಅರೇಂಜ್‌ಮೆಂಟ್ ಎಂದು ಅವರನ್ನೆ ಕಂಟಿನ್ಯೂ ಮಾಡಿದ್ದೇವೆ. ತಾತ್ಕಾಲಿಕವಾಗಿ ಅವರನ್ನೇ ಚೀಫ್ ಇಂಜನಿಯರ್ ಆಗಿ ಇಟ್ಟಿದ್ದೇವೆ.

(ಶ್ರೀ ಬಿ. ಬಸವಲಿಂಗಪ್ಪ)

2-30 P.M.

ಶ್ರೀ ಎಂ. ಎಸ್. ಕೃಷ್ಣನ್.—ತಾತ್ಕಾಲಿಕವಾಗಿ ಅಂದರೆ ಎಷ್ಟು ವರ್ಷಗಳವರೆಗೆ ಎಂದು ಆಗುತ್ತದೆ? ಏಕೆಂದರೆ ನೀವು ಬಹಳ ಡಿಸಿಪ್ಲಿನ್ಡ್.

ಶ್ರೀ ಬಿ. ಬಸವಲಿಂಗಪ್ಪ.—ಅವರ ಸೇವೆ ಯಾವತ್ತು ಅವಶ್ಯಕತೆ ಇಲ್ಲವೆಂದು ಗೊತ್ತಾಗುತ್ತದೋ ಆಗ ಅವರನ್ನು ಬದಲಾಯಿಸಬಹುದು. ಅದುವರೆಗೆ ಇದನ್ನೇ ಒಪ್ಪಬೇಕು.

ಇನ್ನು ಅಲ್ಲಿರತಕ್ಕ ಕೆಲಸಗಾರರ ಬಗ್ಗೆ ಶ್ರೀಮಾನ್ ಕೃಷ್ಣನ್ ಅವರು ಒಳ್ಳೆಯ ಆಸಕ್ತಿ ವಹಿಸಿ ಅವರು ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಅವು ತೀರ್ಮಾನವಾಗಲು ಎಷ್ಟು ವರ್ಷಗಳು ತೆಗೆದುಕೊಳ್ಳುತ್ತವೆಂಬುದಕ್ಕೆ ನನ್ನ ಒಂದು ಅಭಿಪ್ರಾಯಕ್ಕೂ, ಶ್ರೀಮಾನ್ ಕೃಷ್ಣನ್ ಅವರ ಅಭಿಪ್ರಾಯಕ್ಕೂ ಏನೂ ವ್ಯತ್ಯಾಸವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅವರನ್ನು ಸುಮ್ಮನೆ ಟ್ರಾನ್ಸ್‌ಫರ್ ಮಾಡಬೇಕು, ಸಸ್‌ಪೆನ್‌ಷನ್ ಆಗಿರತಕ್ಕ ಅಧಿಕಾರಿಗಳನ್ನು ತೆಗೆಯಬೇಕು ಎಂದು ಹೇಳಿದರೆ, ಅದಕ್ಕೆ ಲೇಬರ್ ಮಂತ್ರಿಗಳು ಇದ್ದಾರೆ, ತಾವು ಇದ್ದೀರಿ, ಒಂದು ದಿವಸ ಅದಕ್ಕಾಗಿಯೇ ಚರ್ಚೆಮಾಡೋಣ.

ಶ್ರೀ ಬಿ. ಬಸವಲಿಂಗಪ್ಪ.—ಈ ಒಂದು ಬೋರ್ಡಿನಲ್ಲಿ ಯಾರೇ ಕ್ಲಾರ್ಕ್ ಆಗಲೀ ಪ್ಯೂನ್ಸ್ ಆಗಲೀ, ಇನ್ನೂ ಕೆಲವು ಹುದ್ದೆಗಳಲ್ಲಿ ಕೆಲಸಮಾಡುತ್ತಿದ್ದವರಾಗಲೀ ಇದ್ದರೂ ಅವರ ಒಂದು ಸರ್ವಿಸ್ ಕಂಡೀಷನ್ಸ್ ಏನಿವೆಯೋ ಅವನ್ನು ರಕ್ಷಣೆ ಮಾಡಬೇಕಾಗುತ್ತದೆ. ಅದಕ್ಕೆ ಹಿಂಜರಿಯುವುದಿಲ್ಲ ವೆಂದು ನಾನು ಭರವಸೆ ಕೊಡುತ್ತೇನೆ.

ಇನ್ನು ಸ್ಲಂ ವಿಚಾರದಲ್ಲಿ ಮಾನ್ಯ ಶ್ರೀ ದೇವೇಗೌಡರು ಒಂದು ಮಾತನ್ನು ಹೇಳಿದರು ಸ್ಯುಯರೇಜ್ ಬೋರ್ಡಿನ ವಿಷಯದಲ್ಲಿ ಮಾತನಾಡುತ್ತಾ ಯಾವುದೋ ಒಂದು ಟೆಂಡರಿನ ಬಗ್ಗೆ ಯಾರು ಕೆಲಸ ಸರಿಯಾಗಿ ಮಾಡುವುದಿಲ್ಲವೋ ಅಂತಹ ಕಂಟ್ರಾಕ್ಟರಿಗೆ ಆ ಟೆಂಡರ್ ಕೆಲಸ ಕೊಟ್ಟಿದ್ದಾರೆಂದು ಹೇಳಿದರು. ಅದನ್ನು ನಾನು ಪರಿಶೀಲನೆಮಾಡುತ್ತೇನೆ. ಮತ್ತೆ ಮಾನ್ಯ ಶ್ರೀ ಆರ್ಮುಗಂ ಅವರು ಹೇಳುತ್ತಾ ಅಲ್ಲಿ ಸಿಮೆಂಟ್ ಪ್ಲಾಸ್ಟರಿಂಗ್ ಕೆಲಸ ಸರಿಯಾಗಿಲ್ಲವೆಂದು ಹೇಳಿದರು. ಇದು ಆಧಾರವಲ್ಲದ ಮಾತು ಎಂದು ಹೇಳುತ್ತೇನೆ. ಹಿಂದಿನ ಚೀಫ್ ಇಂಜಿನಿಯರ್ ಬಗ್ಗೆ ಹಾಗೆಯೇ ಹೇಳಿದ್ದರು. ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಇಂತಹ ಪ್ರಶ್ನೆಗಳಿಗೆ ಮೊದಲೇ ಉತ್ತರ ಕೊಟ್ಟಾದ ಮೇಲೆ ಅದೇ ಪ್ರಶ್ನೆಗೆ ಪುನಃ ಉತ್ತರ ಹೇಳುವುದು ಸರಿಯಲ್ಲ. ಮಾನ್ಯ ಸದಸ್ಯರನೇಕರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿನ ಕೆಲಸಕಾರ್ಯಗಳನ್ನು ತೋರಿಸಿದಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು. ಮಾನ್ಯ ಶ್ರೀ ಕೃಷ್ಣನ್ ಅವರ ಅದಿಯಾಗಿ ಎಲ್ಲರೂ ಅಲ್ಲಿ ಮಾಡಿದ ಕೆಲಸಕ್ಕೆ ಹೊಗಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೆ ನಾನು ಹೊಗಳಲೂ ಇಲ್ಲ, ತೆಗಳಲೂ ಇಲ್ಲ. ಅದು ಬಹಳ ಕಷ್ಟವಾದ ಕೆಲಸ.

ಅಧ್ಯಕ್ಷರು.—ನಿಮ್ಮ ಸಂತೋಷವನ್ನು ಯಾರು ವ್ಯಕ್ತಪಡಿಸಬೇಕಾಗುತ್ತದೆ?

ಶ್ರೀ. ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಿಗೆ ನಾನು ಭರವಸೆ ಕೊಡುತ್ತೇನೆ. ಏನೇನು ಮಾನ್ಯ ಸದಸ್ಯರು ಇಲ್ಲಿ ಅಕಾಂಕ್ಷೆಗಳನ್ನು ವ್ಯಕ್ತಪಡಿಸಿದ್ದಾರೋ ಅವುಗಳಿಗೆ ಯಾವ ರೀತಿಯೂ ಚ್ಯುತಿ ಬಾರದ ಹಾಗೆ ನಾನು ನೋಡಿಕೊಳ್ಳುತ್ತೇನೆ.

ಇನ್ನು ಕೆಲವು ಸದಸ್ಯರು ಛೇರ್‌ಮನ್ ಅವರು ಅವರ ಇಷ್ಟಬಂದಹಾಗೆ ಹೇಳಿಕೆಗಳನ್ನು ಕೊಡುತ್ತಾರೆಂದು ಹೇಳಿದರು. ಬೋರ್ಡಿನ ಪರವಾಗಿ ಅವರು ಆ ರೀತಿ ಹೇಳುವುದಕ್ಕೆ ಅವಕಾಶ ಇರುವುದಿಲ್ಲ.

ಇನ್ನು 1973ನೇ ಡಿಸೆಂಬರ್‌ನೊಳಗೆ ಕಾವೇರಿಯಿಂದ ನೀರು ಕೊಡುವುದಕ್ಕಾಗುವುದಿಲ್ಲ ವೆಂದು ಶ್ರೀಮಾನ್ ಆರ್ಮುಗಂ ಅವರು ಹೇಳಿದರು. ನಾನು ಹೇಳುತ್ತೇನೆ, ಅದು ಆಗಿಯೇ ಆಗುತ್ತದೆಂದು. ಯಾರೋ ಅಧಿಕಾರಿಗಳು ಹೇಳಿದ ಒಂದು ವರದಿಯ ಆಧಾರ ಇಟ್ಟುಕೊಂಡು ಹೇಳಿದರೆ ಹೇಗೆ? ಹೇಗಾದರೂ ಮಾಡಿ ಮಾಡಿಕೊಡಬೇಕು. ಒಂದುವೇಳೆ ಈಗ ಮಾಡುವುದಕ್ಕೆ ಆಗದೇ ಹೋದರೆ ಏನು ಮಾಡುವುದು? ಡಿಸೆಂಬರ್ ಆಖೈರಿನೊಳಗೆ ಏನಾಗುತ್ತದೋ ನೋಡೋಣ.

ಈಗ ಬರುವ ತಿಂಗಳು ಇಂಡಿಪೆಂಡೆನ್ಸ್ ಸಿಲ್ವರ್ ಜೂಬಿಲಿ ಮಾಡುತ್ತೇವೆ. ಇದರ ಅಂಗವಾಗಿ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡುವ ಕಾರ್ಯಕ್ರಮವನ್ನು ಈ ತಿಂಗಳ ಅಂತ್ಯದೊಳಗೆ ಮಾಡುತ್ತೇವೆ. ಅದಕ್ಕಾಗಿ ಸೆಪರೇಟ್ ಬೋರ್ಡ್ ಒಂದನ್ನು ಮಾಡುತ್ತಿದ್ದೇವೆ.

ಇನ್ನು ಹೌಸಿಂಗ್ ಬೋರ್ಡ್ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ರೂರಲ್ ಹೌಸಿಂಗ್ ಸ್ಕೀಂ ಪ್ರಕಾರ ಇವೆಲ್ಲವನ್ನೂ ಸಮಗ್ರವಾಗಿ ಪರಿಶೀಲಿಸಿ ಯಾವ ರೀತಿಯಾಗಿ ಬಡ ಜನಗಳಿಗೆ ಮತ್ತು ಅವಶ್ಯಕತೆ ಇರುವ ಜನಗಳಿಗೆ ಅವರ ಸೇವೆ ಆಗಬೇಕೆಂಬ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡು ಪತ್ರಿಕೆಗಳ ಮುಖಾಂತರ ಅಥವಾ ಈ ಸಭೆಯು ಮೂಲಕ ಹೇಳುವುದಕ್ಕೆ ಹಿಂಜರಿಯುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇಂಡಸ್ಟ್ರಿಯಲ್ ವರ್ಕರ್ಸಿಗೆ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗಳು ಬೇಕಾದಷ್ಟು ಇವೆ, ಅಲ್ಲಿ ತಡೆ ಆಜ್ಞೆ ಹಾಕಿದ್ದಾರೆ. ಅದಕ್ಕಾಗಿ ಲೇಔಟ್ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ.—ಕೆಲವು ಕಡೆಗಳಲ್ಲಿ ಸಹಕಾರ ಸಂಸ್ಥೆಗಳಿವೆ. ಅವಕ್ಕೆ ತಡೆಯಾಜ್ಞೆ ಕೊಟ್ಟಿದ್ದಾರೆ. ನಿಮ್ಮ ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯ ತತ್ವದ ಪ್ರಕಾರ ಅರ್ಬನ್ ಪ್ರಾಪರ್ಟಿ ಬಗ್ಗೆ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಆ ವಿಷಯದಲ್ಲಿ ದಯಾಮಯಿಯಾಗಿರಬೇಕೆಂದು ಹೇಳಿದರೆ, ಅದಕ್ಕೆ ನಾನು ತಯಾರು ಇಲ್ಲ. ಯಾವ್ಯಾವ ಕೋಆಪರೇಟಿವ್ ಸೊಸೈಟಿಗಳು ಹಾಗೂ ಸಹಕಾರ ಸಂಸ್ಥೆಗಳು ಯಾವ ಒಂದು ನ್ಯೂನತೆ ಇಲ್ಲದೆ ಕೆಲಸಮಾಡುತ್ತಿವೆಯೋ ಅವರಿಗೆ ನಿಜವಾಗಿ ಉತ್ತೇಜನ ಕೊಡುತ್ತೇವೆ. ಈ ಟ್ರಸ್ಟ್ ಬೋರ್ಡ್ ಇಟ್ಟುಕೊಂಡು ಇನ್ನೂ ಸಹಕಾರ ಸಂಸ್ಥೆಗಳನ್ನು ಮಾಡಬೇಕೆಂದು ಹೇಳಿದರೆ ನನಗೆ ಚಿಂತೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿಯಾಗಿ ತಡೆಯಾಜ್ಞೆ ಹಾಕಿರುವುದರಿಂದ ಕೆಲವು ಪಾರ್ಟ್ಸ್ ಕಟ್ಟಿದ್ದಾರೆ. ಲೇಔಟ್ ಆಗಿದೆ. ತಡೆಯಾಜ್ಞೆ ತೆಗೆದುಕೊಂಡು ಅವರು ಕೆಲಸಗಳನ್ನು ಚೆನ್ನಾಗಿ ನಡೆಸಿದ್ದಾರೆ. ಅಂತಹವರಿಗೆ ತಡೆಯಾಜ್ಞೆ ಹಾಕಿದರೆ ಚೆನ್ನಾಗಿರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಇಂತಿಂಥ ಸಂಸ್ಥೆಗಳ ಬಗ್ಗೆ ಪರಿಶೀಲನೆ ಮಾಡಿ ಎಂದು ಹೇಳಿದರೆ ಅವನ್ನು ಪರಿಶೀಲನೆಮಾಡುತ್ತೇನೆ. ಆದರೆ ಅಮ್ನಿಬಸ್ಸಾಗಿ ಎಲ್ಲರಿಗೂ ಕೊಡಿ ಎಂದು ಹೇಳಿದರೆ ಆ ರೀತಿಯಾಗಿ ನಾನು ಕೊಡುವುದಕ್ಕೆ ತಯಾರಾಗಿಲ್ಲ. ನಮ್ಮ ಸರ್ಕಾರದ ಮನಸ್ಸಿಗೆ ನಿಜವಾಗಿ ಜನಗಳು ಸೇವೆ ಮಾಡುತ್ತಿದ್ದಾರೆಂದೂ, ಟ್ರಸ್ಟ್‌ಬೋರ್ಡ್ ನಿಯಮಾವಳಿಯ ಪ್ರಕಾರ ಕೆಲಸ ಮಾಡುತ್ತಿದ್ದಾರೆಂಬ ನಂಬಿಕೆ ಬಂದರೆ ಸಾಕು, ಅವರಿಗೆ ಹೆಚ್ಚಿಗೆ ಸಹಾಯ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ 72 ಸಂಸ್ಥೆಗಳಿಗೆ ತಡೆಯಾಜ್ಞೆ ಮಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಒಬ್ಬೊಬ್ಬರು ಎಷ್ಟೆಷ್ಟು ಸೊಸೈಟಿಗಳಿಗೆ ಮೆಂಬರ್ ಆಗಿದ್ದಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲರೂ ಸಂತೃಪ್ತರಾಗಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅವುಗಳ ಪೈಕಿ 36 ಆದರೂ ಅಧಿಕಾರಕ್ಕೆ ಬಂದು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮೂಲಕ ಕುಡಿಯುವ ನೀರಿನ ಸರಬರಾಯಿ ಯೋಜನೆಯಾಗಲೀ ಟೌನ್ ಪ್ಲಾನಿಂಗ್ ಅಭಿವೃದ್ಧಿ ವಿಚಾರದಲ್ಲಿಯಾಗಲೀ ಸಮಗ್ರವಾದ ದೃಷ್ಟಿಯನ್ನು ಇಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೆಂದು ಮಾನ್ಯ ಸದಸ್ಯರ ಅವಗಾಹನೆಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮೇಯರ್ ಅವರು ಪಿಸ್ತೂಲ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಅದನ್ನು ಏತಕ್ಕೆ ತೆಗೆದುಕೊಂಡಿದ್ದಾರೆ ? ಸಭೆ ನಡೆಸುವುದಕ್ಕೋ ?

ಶ್ರೀ ಬಿ. ಬಸವಲಿಂಗಪ್ಪ.—ಅದರ ಬಗ್ಗೆ ಕಾನೂನು ಪ್ರಕಾರ ರಿಕಾರ್ಡ್ ಇದೆ.

ಇನ್ನು ಶ್ರೀಮಾನ್ ದೇವೇಗೌಡರು ನನ್ನ ವಿಚಾರದಲ್ಲಿ ಒಂದು ಮಾತನ್ನು ಹೇಳಿದರು. ಏನೆಂದರೆ, ನನ್ನ ಮೇಲೆ ಒಂದು ಅಪವಾದ ಇದೆಯೆಂದು ಹೇಳಿದರು. ಅವರಿಗೆ ನನ್ನ ಮೇಲೆ ಅಪವಾದ ಮಾಡುವುದಕ್ಕೆ ಏನೂ ಅಭ್ಯಂತರವಿಲ್ಲ. ನಾನು ಎಲ್ಲಿಯವರೆಗೆ ಸಾರ್ವಜನಿಕ ಜೀವನದಲ್ಲಿ ಇರುತ್ತೇನೋ ಅಲ್ಲಿಯವರೆಗೆ ಸಾರ್ವಜನಿಕರ ಕೆಲಸವೇನಿದೆಯೋ ಅದರ ವಿರುದ್ಧಕ್ಕೆ ನಾನು ಒಳ ಪಡುವುದಿಲ್ಲ. ಇದುವರೆಗೂ ಯಾವುದೊಂದು ಅವ್ಯವಹಾರ ಮಾಡಲಿಲ್ಲ. ಯಾವೊಂದು ಕೆಲಸವನ್ನೂ ನನ್ನ ಮನಸ್ಸಿಗೆ ವಿರೋಧ ಹೋಗಿ ಇವತ್ತಿನವರೆಗೂ ಮಾಡಿಲ್ಲ. ನನ್ನ ಜೀವನವನ್ನು ಪವಿತ್ರವಾದ ಜೀವನವನ್ನಾಗಿ ನಡೆಸಿಕೊಂಡು ಹೋಗುವುದಕ್ಕೆ ನಿರ್ಧಾರ ಮಾಡಿದ್ದೇನೆ, ಯಾರ ಒಂದು ದಾಕ್ಷಿಣ್ಯಕ್ಕಾಗಿ ಇನ್ನೊಬ್ಬರಲ್ಲಿ ಕೈಯೊಡ್ಡಿ ಜೀವನ ಮಾಡಬೇಕೆಂದು ಇದುವರೆಗೆ ನಾನು ಕೆಲಸಮಾಡಿಲ್ಲ.

(ಶ್ರೀ ಬಿ. ಬಸವಲಿಂಗಪ್ಪ)

ನಾನು ಹೇಳಿದ್ದಕ್ಕೆ ನಮ್ಮ ಮುಖ್ಯಮಂತ್ರಿಗಳು ಕೆಲವು ಅಬ್‌ಜಕ್ಷನ್ಸ್ ಮಾಡಿ ಒಂದು ಆರ್ಡರ್ ಮಾಡಿ, ಮಾನ್ಯ ಶ್ರೀ ಬಸವಲಿಂಗಪ್ಪನವರ ಮೇಲೆ ಕೇಸ್ ಮಾಡಬೇಕೆಂದು ನಿರ್ಣಯ ಮಾಡಿದರೂ ನಾನು ಅಷ್ಟು ಕೀಳುಮಟ್ಟಕ್ಕೆ ಹೋಗಿ ಜೀವನ ಮಾಡುವುದಿಲ್ಲ. ಮುಂದೆಯೂ ಮಾಡುವುದಿಲ್ಲವೆಂದು ನಾನು ಮಾನ್ಯ ಶ್ರೀ ದೇವೇಗೌಡರಿಗೆ ಹೇಳುತ್ತೇನೆ.

ಅವರು ಹಾಗೆ ಹೇಳಿರತಕ್ಕದ್ದು ಒಂದು ಬಹಳ ಗುರುತರವಾದ ವಿಷಯದಲ್ಲಿ ಹೇಳಿದ್ದಾರೆ. ಅಲ್ಲಿ ಆ ಮೊಗದಂರವರನ್ನು ಚೀಫ್ ಇಂಜಿನಿಯರಾಗಿ ನೇಮಕ ಮಾಡಿದ್ದರ ಹಿನ್ನೆಲೆಯಲ್ಲಿ ಅವರು ಮಾತನಾಡಿದ್ದಾರೆ. ಅದಕ್ಕಾಗಿ ನಾನು ಇಷ್ಟೆಲ್ಲ ಹೇಳಬೇಕಾಯಿತು. ಆದರೆ ನಾನು ತಮಗೆಲ್ಲಾ ಇಷ್ಟು ಹೇಳುತ್ತೇನೆ. ನನ್ನನ್ನು ಯಾರಿಗೇ ಆಗಲಿ ಅಂಥ ಅಡ್ಡಹಾದಿಗೆ ಎಳೆಯುವುದಕ್ಕೆ ಸಾಧ್ಯವೇ ಇಲ್ಲ. ನಾನು ಅಂಥ ಎಳೆಸಿಕೊಳ್ಳತಕ್ಕ ಸ್ಥಿತಿಯಲ್ಲಿ ಹುಟ್ಟಿಯೂ ಇಲ್ಲ. ಆದರೆ ಯಾರು ಏನೇ ತಪ್ಪು ಮಾಡಿರಲಿ ಅದನ್ನು ಮರೆತು ಹರಿಜನರೇನಾದರೂ ಒಂದು ಸಣ್ಣ ತಪ್ಪನ್ನು ಮಾಡಿದ್ದರೂ ಅದನ್ನೆ ಒಂದು ದೊಡ್ಡ ಮಹಾ ಅಪರಾಧವನ್ನಾಗಿ ಹೇಳತಕದ್ದು ಸರಿಯಾದ್ದಲ್ಲ ಎಂದು ಹೇಳುತ್ತೇನೆ. ಬಸವಲಿಂಗಪ್ಪ ಮನೆ ಕಟ್ಟಿಸಿದ್ದು ಲೈಸೆನ್ಸ್ ಇಲ್ಲದೇನೇ ಅಂತ ಹೇಳಿದರೆ ನಾನು ಏನು ಹೇಳಲಿ ? ತಾವೆಲ್ಲರೂ ಬಂದು ಪರೀಕ್ಷೆ ಮಾಡಿ. ನಾನು ಆಗ ವಿರೋಧ ಪಕ್ಷದಲ್ಲಿದ್ದೆ. ಹಾಗಿದ್ದಾಗ ನನಗೆ ಲೈಸೆನ್ಸ್ ಪಡೆಯದೆ ಕಟ್ಟಡ ಮಾಡುವುದಕ್ಕೆ ಸಾಧ್ಯವಿದೆಯೋ ಎಂಬ ಒಂದು ಪ್ರಶ್ನೆಯನ್ನು ತಾವೇ ಎಲ್ಲರೂ ತಮ ತಮಗೆ ಹಾಕಿಕೊಂಡರೆ ಅದಕ್ಕೆ ಉತ್ತರ ತಾನಾಗೇ ತಮಗೆ ಸಿಕ್ಕುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಇಲ್ಲಿ ಯಾರೂ ನಿಮ್ಮವರ್ಗದವರು ಎಂದು ನಿಮ್ಮನ್ನು ಟೀಕೆ ಮಾಡಲಿಲ್ಲವಲ್ಲ ?

ಶ್ರೀ ಬಿ. ಬಸವಲಿಂಗಪ್ಪ.—ಶ್ರೀ ಎಚ್. ಡಿ. ದೇವೇಗೌಡ ಅವರು ಶಂಕರಾನಂದ ಅವರಿಗೆ ಬೆಳಗಾಂ ಸಿಟಿಯಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ 10 ಕುಂಟೆ ಜಮೀನನ್ನು ಕೊಟ್ಟದ್ದಕ್ಕೆ ಸರ್ಕಾರದಲ್ಲಿ ಏನೋ ಒಂದು ದರೋಡೆ ನಡೆದು ಹೋಗಿದೆ, 2 ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಭೂಮಿಯನ್ನು ಕೊಟ್ಟಿದ್ದಾರೆಂದು ಅಪಾದನೆ ಮಾಡಿದ್ದಾರೆ. ಆದರೆ, ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವರು ಇಲ್ಲಿ ಸದಸ್ಯರಲ್ಲ. ಅವರು ಅಲ್ಲಿ ಮನೆ ಕಟ್ಟಿಕೊಳ್ಳಲು ಅಷ್ಟು ಜಾಗ ಕೊಟ್ಟಿದೆ ಅದರ ಬೆಲೆ 10 ಸಾವಿರದಿಂದ 15 ಸಾವಿರ ಆದರೆ ಹೆಚ್ಚಾಯಿತು. ಯಾರಾದರೂ ತಯಾರಾಗಿದ್ದರೆ 14 ಸಾವಿರ ಕೊಟ್ಟರೆ ಆ ಜಾಗವನ್ನು ಅವರಿಗೆ ಕೊಡಿಸುತ್ತೇನೆ. ಆದರೆ ಹಿಂದೆ ಶ್ರೀ ವೀರೇಂದ್ರ ಪಾಟೀಲರು ಮಂತ್ರಿಗಳಾಗಿದ್ದ ಕಾಲದಲ್ಲಿ ಒಂದೇ ಕಡೆ ಅದೇ ಜಾಗದಲ್ಲಿ ಒಂದೇ ಜಾತಿಗೆ ತಲಾ 16 ಎಕರೆ, 21 ಎಕರೆ ಮತ್ತು 43 ಎಕರೆ ಹೀಗೆಲ್ಲಾ ಕೊಟ್ಟಿದ್ದಾರೆ. ಹೀಗೆ ಒಂದೇ ಜಾತಿಯವರಿಗೆ 63 ಎಕರೆ ಜಮೀನನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅದನ್ನೆಲ್ಲಾ ಟೇಬಲ್ ಮೇಲೆ ಇಡಿ ನಾವೂ ನೋಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ತಮ್ಮವರಿಗೆ ಎಂದು ಎಕರೆಗಟ್ಟಲೆ ಕೊಡಬಹುದು. ಆದರೆ ಈಗ 14 ಕುಂಟೆ ಜಮೀನು ಕೊಟ್ಟದ್ದಕ್ಕೆ ಅದರಲ್ಲೂ ಒಬ್ಬ ಹರಿಜನರಿಗೆ ಕೊಟದ್ದಕ್ಕೆ ಟೀಕೆ ಬಂದಿದೆ. ಆದರೆ ಯಾರಿಗೆ ಆ ಸೈಟನ್ನು ಕೊಟ್ಟಿದೆಯೋ ಅವರು ಈ ಸಭೆಯ ಸದಸ್ಯರಲ್ಲ. ಆದುದರಿಂದ ಅವರು ಇಲ್ಲಿ ಇಲ್ಲದ ಕಾರಣ ಅವರ ರಕ್ಷಣೆ ಮಾಡುವುದು ನನ್ನ ಕರ್ತವ್ಯ ಹಾಗೂ ಧರ್ಮ. ಆದ್ದರಿಂದ ಈ ವಿಚಾರದಲ್ಲಿ ಯಾರೂ ಅನ್ಯಥಾ ಭಾವಿಸಬಾರದೆಂದು ಪ್ರಾರ್ಥನೆ ಮಾಡಿ ನಾನು ಮಂಡಿಸಿರತಕ್ಕ ಡಿಮ್ಯಾಂಡ್‌ಗಳಿಗೆ ತಾವೆಲ್ಲರೂ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

MADAM SPEAKER.—I will now put the Demands to the vote of the House.

The question is :

"That a sum not exceeding Rs. 14,98,81,000 inclusive of the sum granted 'on account' be granted to the Government to defray the charges which will come in course of payment during the financial year for the period ending with 31st day of March 1973 in respect of Demand No. 39. "Miscellaneous".

The motion was adopted and the Demand was granted.

Calling Attention to Matters of Urgent Public Importance

(i) re : *Private Operators to be permitted to run bus service in Bangalore, Gulbarga and Belgaum.*

SRI B. SATYANARAYANA SINGH (Hospet).—Madam, I call the attention of the Minister for Labour to the reported statement of Labour Minister regarding private operators to be permitted to run bus service in Bangalore, Gulbarga and Belgaum.

SRI AZEEZ SAIT.—I state as follows : —

An article appeared in the Press on 20th May 1972 to the effect that the State Government has prepared proposal for consideration of the Cabinet to allow Private Operators to ply their buses on the routes of Bangalore Transport Service in Bangalore City. When the attention of the Minister for Transport was drawn to this article, the Minister clarified that he has only been thinking about allowing Private Operators to operate buses along with the Mysore State Road Transport Corporation Buses on B.T.S. routes as in the case of Delhi and that the report that he had taken a decision in the matter was not correct. Subsequently the Minister went to Delhi and studied the arrangements at Delhi. It was found that the system of operation of private buses along with the buses of State Transport Undertaking at Delhi is not working satisfactorily. On further consideration of the matter the idea of allowing the Private Operators to ply buses on B.T.S routes has been given up.

(ii) re : *Nationalisation of short distance bus routes*

SRI B. SATYANARAYANA SINGH.—Madam, I call the attention of the Minister for Labour to the reported statement of Labour Minister regarding nationalisation of short distance bus routes.

SRI AZEEZ SAIT.—I state as follows :—

An article appeared in the Press on 15th June 1972 to the effect that Government have taken a policy decision that all short distance bus routes which are not yet nationalised will be nationalised.

The Government has not taken any such decision as reported in the press.

In the nationalisation schemes prepared by the Mysore State Road Transport Corporation in the past some small contiguous areas have not been nationalised and in these areas private operators are operating. The operation of private buses in the small areas, contiguous to nationalised area is not conducive to the operation of M.S.R.T.C. buses in the nationalised area. It was thought that it would be advisable to nationalise small areas so that the Mysore State Road Transport Corporation could provide efficient, adequate, economical and properly

(SRI AZEEZ SAIT)

co-ordinated Road Transport Services. According to the provisions of the Motor Vehicles Act, 1939, the Mysore State Road Transport Corporation is the competent authority to prepare schemes for nationalising transport services. The schemes after approval by Government will become operative. If the Mysore State Road Transport Corporation decides to Nationalise Transport Services in the small contiguous areas it will have to prepare schemes and send it to Government. The suggestion to Nationalise the Transport Services in the small contiguous areas will be placed before the Mysore State Road Transport Corporation for its consideration.

MADAM SPEAKER.—Sri Gopinath R. Sandra's call attention motion cannot be taken up as he is absent. The House will now adjourn and re-assemble on Monday at One of the Clock.

The House adjourned at Fifty Minutes Past Two of the Clock to meet again at One of the Clock on Monday, the 17th July 1972.

WD 18234—GPB—550—9-2-1973